41

21-6-76 ಶುಕ್ರವಾರ

ಕುಂಬಳೆ ಪಾರ್ತಿ-ಸುಬ್ಬ ಕವಿಯ ಕಾಲ ಮತ್ತು ಕರ್ತೃತ್ವದ ನಿರ್ಣಯ.

●


ತಾ. 31—5—61ರಲ್ಲಿ ಕೋಟೆಕಾರು ಸಾಹಿತ್ಯ ಸಂಘದ ಆಶ್ರಯದಲ್ಲಿ ಜರಗಿದ ಪಾರ್ತಿ ಸುಬ್ಬ ಕವಿ ಜಯಂತೀ ಸಮಾರಂಭದಲ್ಲಿ ಅಧ್ಯಕ್ಷ ಸ್ಥಾನದಿಂದ ಶ್ರೀ ಕುಕ್ಕಿಲ ಕೃಷ್ಣಭಟ್ಟರ ಭಾಷಣ.

●

ಪ್ರಕಾಶಕರು:
...ಹಿತ್ಯ ಸಂಘ, ಕೋಟೆಕಾರು.

ಶಾಂತಾ ಛಾಪಖಾನೆ, ಲಿ., ಮಂಗಳೂರು.

ಕಾವಶೇಗಾಣಿ



ಶ್ರೀ ಕುಕ್ಕಿಲ ಕೃಷ್ಣಭಟ್ಟರು.

ಅಧ್ಯಕ್ಷ ಭಾಷಣ

ನ್ಯ ಬಂಧುಗಳೇ,

ನಮ್ಮ ಇಂದಿನ ಆರಾಧ್ಯ ವ್ಯಕ್ತಿಯಾದ ಪಾರ್ತಿಸುಬ್ಬ ಕವಿಯ ದೇಶ,), ಕರ್ತೃತ್ವಗಳ ವಿಚಾರದಲ್ಲಿ ಸಪ್ರಮಾಣವಾದ ಗ್ರಂಥವನ್ನು ಸಿದ್ಧಪಡಿ ರುದಾಗಿ ಸಾಕಷ್ಟು ಹಿಂದೆಯೆ ತಮ್ಮ ಮುಂದೆ ವಚನಬದ್ಧನಾಗಿರುವ ು ಆ ಗ್ರಂಥವನ್ನು ಪ್ರಕಾಶಕ್ಕೆ ತರುವ ಕಾರ್ಯದಲ್ಲಿ ಹಿಂದುಳಿದಿರುವು ್ಕಾಗಿ ತಮ್ಮಲ್ಲಿ ಕ್ಷಮೆ ಕೇಳಬೇಕಾಗಿದೆ. ಕಾಲನಿರ್ಣಯಕ್ಕೆ ಆಧಾರ ವ ಎರಡು ಸಾಧನಪತ್ರಗಳನ್ನು ನಮ್ಮ ಮಿತ್ರರಾದ ಶ್ರೀ ಕೂಡಲು ಈಶ್ವರ ನಭೋಗರು ಅಂದೇ ಒದಗಿಸಿಕೊಟ್ಟಿರುವರಾದರೂ ಕರ್ತೃತ್ವ ನಿರ್ಣಯ ದಗುವ ಹೆಚ್ಚಿನ ಆಧಾರಗಳ ಸಂಗ್ರಹ ಸಮೀಕ್ಷೆಗಳಿಗಾಗಿ ಕಾಲ ವಿಳಂ) ಅನಿವಾರ್ಯವಾಯಿತು. ಇನ್ನೀಗ ಹೆಚ್ಚು ವಿಳಂಬವಿಲ್ಲದೆ ಆ ಗ್ರಂಥ ್ನು ತಮ್ಮ ಮುಂದಿಡಲು ಸಾಧ್ಯವಾಗಬಹುದೆಂದು ವಿಜ್ಞಾಪಿಸಿಕೊಳ್ಳು ನೆ.

ಪಾರ್ತಿ ಸುಬ್ಬನ ಕುರಿತಾಗಿ ಯಥಾಮತಿಯಾಗಿ ನಾನು ಮಾಡಿರುವ ಶೋಧನೆಯ ಫಲಿತಾಂಶಗಳನ್ನು ಗ್ರಂಥರೂಪದಲ್ಲಿ ಪ್ರಕಾಶಪಡಿಸುವು ್ಕ ಮೊದಲಾಗಿ ಅನುಭವಸ್ಥರಾದ ತಮ್ಮ ಪರೀಕ್ಷೆಗೆ ಒಳಪಡಿಸಿ ಅವುಗಳ ಬಹುದಾದ ಕುಂದುಕೊರತೆಗಳನ್ನು ಸರಿಪಡಿಸಿಕೊಳ್ಳಬೇಕೆಂಬ ಆತುರ ್ದ, ಅದಕ್ಕಾಗಿ 'ಬುಭುಕ್ಷಿತಸ್ಯಕಿಂ ನಿಮಂತ್ರಣಾಗ್ರಹಃ' ಎಂಬಂತೆ ಅನು ಲ ಸಂದರ್ಭವನ್ನು ಪ್ರತೀಕ್ಷಿಸುತ್ತಿದ್ದ ನನಗೆ ಅಭಿಮಾನಪೂರ್ವಕ ದು ಈ ಸದವಕಾಶವನ್ನು ಒದಗಿಸಿಕೊಟ್ಟುದಕ್ಕಾಗಿ ಈ ಸಾಹಿತ್ಯ ಸಂಘದ ರಸ್ಥಾಪಕರಿಗೆ ನಾನು ಕೃತಜ್ಞನು.

ಈ ಸಂದರ್ಭದಲ್ಲಿ ಪ್ರಥಮತಃ ಪ್ರಾಸ್ತಾವಿಕವಾಗಿ ನಾನು ಮಾಡತಕ್ಕ ಜ್ಞಾಪನೆಯೊಂದಿದೆ. ಅದೇನೆಂದರೆ—ಸುಪ್ರಸಿದ್ಧ ಗ್ರಂಥಕರ್ತರಾದ ಶ್ರೀ

ಶಿವರಾಮ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ'ದಲ್ಲಿ ಮತ್ತು ಇತರತ್ರ ಲೇಖನ ಭಾಷಣಗಳಲ್ಲಿ ಪಾರ್ತಿಸುಬ್ಬನ ಮತ್ತು ಆತನಿಂದ ಸುಧಾರಿತವಾದ ಯಕ್ಷಗಾನದ ತೆಂಕುತಿಟ್ಟಿನ ಪ್ರಯೋಗ ಪದ್ಧತಿಯ ಕುರಿತಾಗಿ ಮಾಡಿರುವ ಅನ್ಯಥಾ ಖ್ಯಾತಿಯಿಂದಲಾಗಿ ನಾವು ಸಹಜವಾಗಿಯೆ ನೊಂದುಕೊಂಡಿರುವೆವಾದರೂ ಅದರಿಂದ ಉದ್ರಿಕ್ತರಾಗಿ ಗುಲ್ಲೆಬ್ಬಿಸಿ ಶುಷ್ಕನಿಗ್ರಹದಲ್ಲಿ ಪ್ರವೃತ್ತರಾಗುವುದು ಸರ್ವಥಾ ಆದರಣೀಯವಲ್ಲ. ಅಂತಹ ವಾಗ್ಯುದ್ಧಗಳಿಂದ ಯಾವ ಸತ್ಪರಿಣಾಮವೂ ಆಗುವುದಿಲ್ಲವೆಂಬುದು ನಮಗೆ ಇಷ್ಟರೊಳಗೆ ಸಾಕಷ್ಟು ಅನುಭವಕ್ಕೆ ಬಂದಿದೆ. 'ಮುಯ್ಯಿಗೆ ಮುಯ್ಯಿ' ಎಂಬ ಪ್ರತೀಕಾರ ಮನೋವೃತ್ತಿಯಿಂದ ಸತ್ಯಾನ್ವೇಷಣೆಯ ದೃಷ್ಟಿಯೆ ಕುರುಡಾಗುವುದು. ಅಂತರಂಗ ಬಹಿರಂಗಗಳೆರಡೂ ಕಲುಷಿತವಾಗುವುವು. ಪಾರ್ತಿಸುಬ್ಬನ ಹೆಸರಿನಲ್ಲಿ ಈಗ ಮೊದಲು ನಡೆದಿರುವ 'ವಾದದ ಕೋಲಾಹಲ'ದ ಪರಿಣಾಮವಾಗಿ ಯಕ್ಷಗಾನಪ್ರಪಂಚದಲ್ಲಿ ಶ್ರೀ ಕಾರಂತರ ಅನುಕೂಲ ಪಕ್ಷ ಪ್ರತಿಕೂಲ ಪಕ್ಷ ಎಂಬೆರಡು ಪ್ರತಿವಿರೋಧಿ ಪಂಗಡಗಳೆ ಹುಟ್ಟಿಕೊಂಡಂತಿದೆ. ಯಕ್ಷಗಾನದ ರಂಗಭೂಮಿಯಲ್ಲಿ ಮಾತ್ರ ಇದ್ದ ತೆಂಕುತಿಟ್ಟು ಬಡಗುತಿಟ್ಟು ಎಂಬ ದ್ವೈಧೀಭಾವವು ವಿವಿಧ ರಂಗಗಳಲ್ಲಿ ಪಾದ ಪ್ರಸಾರಣವನ್ನು ಮಾಡುತ್ತಿದೆ. ಈ ಕಾಳಗವು ಸರ್ವಥಾ ಪ್ರೇಕ್ಷಣೀಯವಲ್ಲ. ಅದು ಯಕ್ಷಗಾನ ಕಲೆಗೆ ಮಾರಕ. ತೆಂಕು, ಬಡಗು, ಮೂಡು, ಪಡು ಎಂಬ ಭೇದವಿಲ್ಲದೆ ಎಲ್ಲ ತಿಟ್ಟಿನವರಿಗೂ 'ಮುದದಿಂದ ನಿನ್ನ ಕೊಂಡಾಡುವೆನು ಅನವರತ ಮದವೂರ ವಿಘ್ನೇಶ' ಎಂಬ ಯಕ್ಷಗಾನದ 'ಶ್ರೀಗಣ'ವನ್ನು ಕಲಿಸಿದ ಪಾರ್ತಿ ಸುಬ್ಬನ ಆತ್ಮಕ್ಕೆ ಇದರಿಂದ ಹಿತವಾಗದು.

"ಕಾರಂತರು ಏನೇನು ಹೇಳಿರುವರೊ ಅದನ್ನೆಲ್ಲ ಖಂಡಿಸಬೇಕು, ಅವರು ಮಾಡಿದುದಕ್ಕೆ ದ್ವಿಗುಣಿತವಾದ ಅಧಿಕ್ಷೇಪವನ್ನು ನಾವೂ ಮಾಡಬೇಕು, ಅವರು ಸತ್ಯದ್ರೋಹಿಗಳೆಂದು ಸಾರಬೇಕು. ಆಗ ಮಾತ್ರ ಪಾರ್ತಿಸುಬ್ಬನ ಹೆಸರು ಉಳಿದೀತು" ಎಂಬಂತೆ ನಮ್ಮಲ್ಲಿ ಅನೇಕರು ತಿಳಿದುಕೊಂಡಂತಿದೆ. ಶ್ರೀ ಕಾರಂತರ ಅರ್ಥವಾದದಿಂದಲಾಗಿ ನಮ್ಮಲ್ಲಿ ಕೆಲ ಅನಿಷ್ಟ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿರುವುದಕ್ಕಾಗಿ ವ್ಯಸನವಾಗುತ್ತದೆ. ಕ್ರಾಂತದರ್ಶಿಗಳಾದ ಶ್ರೀ ಕಾರಂತರು ನಮ್ಮ ಸಾಹಿತ್ಯಕ್ಕೆ ಸಲ್ಲಿಸಿದ ಅಪಾರವಾದ

ಕಾಣಿಕೆಯನ್ನು ಪಾರ್ತಿಸುಬ್ಬನ ಹೆಸರಿನ ಹೇತುವಿನಿಂದ ಮರೆಯುವುದು ಕೃತಘ್ನತೆ. ಸಾಹಿತ್ಯದಲ್ಲಿ ಮಾತ್ರ ಅಲ್ಲ ವಿವಿಧ ಕಲಾ ಪ್ರಪಂಚದಲ್ಲಿ ಹತ್ತು ಮುಖಗಳಲ್ಲಿ ಪ್ರಕಾಶಕ್ಕೆ ಬಂದ ಅವರ ಅಸಾಮಾನ್ಯ ಪ್ರತಿಭೆಯು ಗೌರವಾರ್ಹವಾದುದು. ಯಕ್ಷಗಾನ ಒಂದರಿಂದ ಅವರನ್ನು ಅಳೆಯಲಾಗದು. ಅವರು ಜ್ಞಾನವೃದ್ಧರಾಗಿರುವಂತೆಯೆ ವಯೋವೃದ್ಧರು, ನಮಗೆ ಹಿರಿಯರು. ಅವರು ಏನೇ ಹೇಳಲಿ, ಸಾಕಷ್ಟು ತಿತಿಕ್ಷೆಯಿಂದ ಅದನ್ನು ಸಾವಧಾನವಾಗಿ ವಿಚಾರಿಸಿ ಅದರಿಂದ ನಮಗೆ ಏನು ಪಾಠ ಕಲಿಯತಕ್ಕುದಿದೆಯೋ ಅದನ್ನು ಕಲಿತುಕೊಂಡು ಕೃತಾರ್ಥರಾಗೋಣ. ಕಿವಿಗೆ ಹಿತವಾಗದ ಶಬ್ದಗಳನ್ನೆಲ್ಲ ಮರೆತುಬಿಡೋಣ. 'ಯಾದೃಶೋಯಕ್ಷಸ್ತಾದೃಶೋಬಲಿಃ' ಎಂಬ ನ್ಯಾಯದಿಂದ ಸಿದ್ಧಿಸುವುದಾದರೂ ಏನು? ಅಜಪುರದ ಸುಬ್ಬನು ರಾಮಾಯಣ ಪ್ರಸಂಗಗಳ ಕರ್ತೃವಲ್ಲವೆಂದು ವಾದಿಸಿದ ಮಾತ್ರದಿಂದ ಪಾರ್ತಿಸುಬ್ಬನ ಕರ್ತೃತ್ವಕ್ಕೆ ಪ್ರಮಾಣವೊದಗಿದಂತಾಗುವುದೆ? ಅಥವಾ ಪಾರ್ತಿ ಸುಬ್ಬನು ಕವಿಯಲ್ಲ ಎಂಬ ಶ್ರೀ ಕಾರಂತರ ವಾದಕ್ಕೆ ಆಧಾರವಿಲ್ಲವೆಂದು ಘೋಷಿಸಿದ ಮಾತ್ರದಿಂದ ಪಾರ್ತಿಸುಬ್ಬನು ಕವಿ ಎಂಬುದು ಅನುಕ್ತಸಿದ್ಧವಾಗಬಲ್ಲುದೆ? 'ನೀನು ಹೇಳಿದ್ದು ತಪ್ಪು' ಎಂಬ ವಾದಕ್ಕೆ 'ನೀನು ಹೇಳಿದ್ದು ತಪ್ಪು' ಅಥವಾ 'ನೀನೂ ಹೇಳಿದ್ದು ತಪ್ಪು' ಎಂಬ ಪ್ರತಿವಾದವು ನ್ಯಾಯ್ಯವೂ ಅಲ್ಲ. ವಾದದಲ್ಲಿ ಇದು ಪರಾಜಯ ಸೂಚಕವಾದ ಒಂದು ನಿಗ್ರಹಸ್ಥಾನವೆಂದು ಗಣಿಸಲ್ಪಡುತ್ತದೆ. 'ನಾನು ಹೇಳಿದ್ದು ಸರಿ' ಎಂದು ರುಜುಪಡಿಸುವುದೇ ನ್ಯಾಯಸಮ್ಮತವಾದ ಪ್ರತಿಪಕ್ಷಧರ್ಮ. ಸಾಧ್ಯಪ್ರಮಾಣಗಳಿಲ್ಲದ ಬಲಹೀನನು ಅಂತಹ ಶುಷ್ಕನಿಗ್ರಹಕ್ಕೆ ತೊಡಗುತ್ತಾನೆ ಎಂದರ್ಥ. ಪಾರ್ತಿಸುಬ್ಬನು ಯಕ್ಷಗಾನಕವಿ ಎಂಬುದು ದೃಷ್ಟಪ್ರತ್ಯಯವೆಂದಾದಲ್ಲಿ ಮಾತ್ರ ಶ್ರೀ ಕಾರಂತರ ವಾದದ ಪಕ್ಷಧರ್ಮವನ್ನು ಪ್ರಶ್ನಿಸುವುದಕ್ಕೆ ನಮಗೆ ನ್ಯಾಯತಃ ಅರ್ಹತೆ ಇದೆ. ಪಾರ್ತಿಸುಬ್ಬನು ಯಕ್ಷಗಾನ ಕವಿ; ರಾಮಾಯಣಾದಿ ಪ್ರಸಂಗಗಳ ಕರ್ತೃ ಎಂದು ಹೇಳುವುದಕ್ಕೆ ಈಗ ನಮಗಿರುವ ಆಧಾರವೇನು? ಕೇವಲ ಕರ್ಣಾಕರ್ಣಿಕೆಯಾಗಿ ಬಂದ ಕೆಲವು ಐತಿಹ್ಯಗಳು. 'ಇಲಿ ಹೋಗಿ ಹುಲಿಯಾಯಿತು' ಎನ್ನುವಂತಹ ಐತಿಹ್ಯಗಳನ್ನು ಪ್ರಮಾಣವೆಂದು ಸ್ವೀಕರಿಸಬಹುದೆ? 'ನಾಸಾಧಿತಂ ಕರಣಂ' ಎಂಬ ನ್ಯಾಯ ವಾಕ್ಯ

ದಂತೆ ಸ್ವತಃ ಪ್ರಮಾಣಸಿದ್ಧವಲ್ಲದ ಸಂದಿಗ್ಧ ಹೇತುವು ನ್ಯಾಯವಾದ ನಿಗಮನವನ್ನು ಹೊಂದಿಸಲಾರದು. ಅಥವಾ ಈ ಮೊದಲು ನಮ್ಮಲ್ಲಿ ಹಲವರು ತರ್ಕಿಸಿರುವಂತೆ ರಾಮಾಯಣದ ಪದ್ಯಗಳಲ್ಲಿ ತುಳು ಭಾಷೆಯ ಶಬ್ದಗಳಿವೆ, ಹವೀಕರ ಮಾತಿನ ಪ್ರಯೋಗವಿದೆ, ನಮ್ಮೂರಿನ ನುಡಿಗಟ್ಟುಗಳಿವೆ ಎಂಬಂತಹ 'ಕುಶಕಾಶಾವಲಂಬನ ನ್ಯಾಯ'ದಿಂದ ಸುಬ್ಬನ ಕರ್ತೃತ್ವವನ್ನು ಸಾಧಿಸಬಹುದೆ? ನಾವು ಪಾರ್ತಿಸುಬ್ಬನ ಊರಿನವರು, ಆತನಿದ್ದನೆಂಬುದಕ್ಕೆ ಒಂದೇ ಒಂದು ಸಾಕ್ಷ್ಯ ಪ್ರಮಾಣ ನಮ್ಮಲ್ಲಿಲ್ಲ. ಅವನ ಕುಲ, ಜಾತಿ, ನೀತಿ ಒಂದನ್ನೂ ನಾವರಿಯೆವು. ಆತನು ಯಕ್ಷಗಾನಕವಿ ಎನ್ನುತ್ತೇವೆ; ಆತನು ರಚಿಸಿದ ಪ್ರಸಂಗಗಳಾವುವು ಎಂಬ ನಿಷ್ಕರ್ಷೆ ನಮಗಿಲ್ಲ. ಆತನು ಯಕ್ಷಗಾನ ಸುಧಾರಕನೆನ್ನುತ್ತೇವೆ; ಸಭಾಲಕ್ಷಣ ಬರೆದವನೆನ್ನುತ್ತೇವೆ; ಆತನ ಸುಧಾರಣೆ ಏನು, ಸಭಾಲಕ್ಷಣದ ಲಕ್ಷಣವೇನು ಎಂಬುದು ನಮಗೆ ಗೊತ್ತಿಲ್ಲ. ಅನ್ಯಕವಿಕೃತವಾದ ಪದ್ಯಗಳನ್ನೂ ಸುಬ್ಬನ ಪದ್ಯಗಳೆಂದು ಹಾಡುತ್ತೇವೆ. ಆತನ ಕೃತಿಗಳ ಮೂಲಪ್ರತಿಗಳನ್ನು ಕೇಳಿದರೆ ಅವೊಂದೂ ನಮ್ಮಲ್ಲಿಲ್ಲ. ಇಷ್ಟೊಂದು ಅಕೃತಾತ್ಮರಾಗಿ ನಾವಿರುತ್ತಾ, ಶ್ರೀ ಕಾರಂತರ ವಾದಕ್ಕೆ ಉದ್ರೇಕಗೊಳ್ಳುವುದರಲ್ಲಿ ಅರ್ಥವಿದೆಯೆ? ಪ್ರಮಾದವಶದಿಂದ ನಾವೂ ತಪ್ಪು ಮಾಡಿಲ್ಲವೆ? ಸುಬ್ಬನಲ್ಲಿರುವ ಅತ್ಯಭಿಮಾನದಿಂದ, ಸುಬ್ಬನ ಕೀರ್ತಿಯನ್ನು ಉಳಿಸುವ ಸದ್ಬುದ್ಧಿಯಿಂದಲೆ ನಾವು ಮಾಡಿರುವುದೇನು? ಆತನ ಪದ್ಯಗಳನ್ನು ಮನಬಂದಂತೆ ತಿದ್ದಿಕೊಂಡು ಆತನ ಶೈಲಿಯನ್ನು ಕಸಿಮಾಡಿದೆವು. ಬಾಯ್ದೆರೆಯ ಹೇಳಿಕೆಯಿಂದ ಆತನ ಕಾಲನಿರ್ಣಯಕ್ಕೆ ತೊಡಗಿದೆವು. ಕಾಲ್ಪನಿಕ ವಂಶವೃಕ್ಷವನ್ನು ನಿರ್ಮಿಸಿ ಸುಬ್ಬನ ಚರಿತ್ರೆಯನ್ನು ಸೃಷ್ಟಿಸಿದೆವು. ಬದನೆಕಾಯನ್ನು ಪರಬ್ರಹ್ಮವೆಂಬ ಹಾಗೆ ವರ್ಣಿಸಿ ನಂಬುವವರೂ ನಂಬದಂತೆ ಮಾಡಿದೆವು. ನಮ್ಮದೇನೂ ದುರುದ್ದೇಶವಲ್ಲ, ಸುಬ್ಬನನ್ನು ಎತ್ತಿ ತೋರಿಸುವ ಅತಿಸಾಹಸವನ್ನೆ ಮಾಡಿದೆವು ಅಷ್ಟೆ. ಪರಿಣಾಮವೇನಾಯಿತು? 'ವೃದ್ಧಿಮಿಷ್ಟವತೋ ಮೂಲಮಪಿ ನಷ್ಟಂ' ಎಂಬಂತೆ ನಮ್ಮ ಅಭಿಮಾನಾತಿರೇಕದ ಫಲವಾಗಿ ಸುಬ್ಬನ ಹೆಸರೇ ಅಳಿಯುವಂತಾಯಿತು. ಅಪ್ರತಿಭ ಪ್ರಮಾದಗಳು ನಮ್ಮಿಂದಲೂ ಸಂಘಟಿಸಿರುವಾಗ ಶ್ರೀ ಕಾರಂತರ ವಾದವು ಮಾತ್ರ ಕಾಲ್ಪನಿಕ ಎಂದು

ಹೇಳುವುದರಲ್ಲಿ ನ್ಯಾಯವಿದೆಯೆ? 'ಯಶ್ಚೋಭಯೋರ್ದೋಷೋನಾ ಸಾವೇಕಸ್ಯವಾಚ್ಯಃ' ಎಂಬ ನ್ಯಾಯವು ನಮಗೂ ಅನ್ವಯಿಸುವುದಿಲ್ಲವೆ? (ಇಬ್ಬರೂ ತಪ್ಪು ಮಾಡಿರುವಾಗ ಒಬ್ಬನನ್ನು ಮಾತ್ರ ದೂರುವುದು ಸರಿಯಲ್ಲ) ಅಥವಾ—ನಮ್ಮ ಕ್ರಮಾಗತದ ಬೆಲೆಯುಳ್ಳ ಒಂದು ಸ್ವತ್ತಿದೆ ಎನ್ನಿ. ಇದು ಸರ್ವರಿಗೂ ತಿಳಿದೇ ಇದೆ. ನಾವು ಅದನ್ನು ಕ್ರಮದಂತೆ ಇಟ್ಟು ಕೊಳ್ಳಲಿಲ್ಲ. ನಮ್ಮ ಉಪೇಕ್ಷೆ, ಮೌಢ್ಯ, ದೌರ್ಬಲ್ಯಗಳನ್ನು ನೋಡಿ ನಮ್ಮ ನೆರೆಯವನು ಅನ್ಯಾಯವಾಗಿ ಅದರ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಲು ಇಲ್ಲದ ಆಧಾರಗಳನ್ನೊಡ್ಡಿ ವಾದ ಹೂಡುತ್ತಾನೆ. ನಾವು ನ್ಯಾಯವಾದ ಮೂಲಾಧಾರ ದಾಖಲೆಗಳನ್ನು ಹುಡುಕಿ ತೆಗೆದು ಇದಿರೊಡ್ಡುವುದನ್ನು ಬಿಟ್ಟು ಬಾಯ್ದೆರೆಯ ಬರಿಯ ಹೇಳಿಕೆಯಿಂದಲೂ ಕೃತಕ ಆಧಾರಗಳಿಂದಲೂ ಪ್ರತಿವಾದವನ್ನು ಸಾಧಿಸುತ್ತೇವೆ. ವಾದಿಯ ದಾವೆಯು ಅಕ್ರಮ, ಅನ್ಯಾಯ, ಮೋಸ, ಸ್ವಾರ್ಥ, ಕಲ್ಪಿತ ಎಂದು ನಮ್ಮ ಅಧಿವಕ್ತಾರರು (ವಕೀಲರು) ಬಲವಾಗಿಯೆ ವಾದಿಸುತ್ತಾರೆ. ಫಲಿತಾಂಶವೇನು? ನ್ಯಾಯಸ್ಥಾನದಲ್ಲಿಯೇ, ತೀರ್ಪಾಗುತ್ತದೆ ನಮ್ಮ ಅವಗುಣಕ್ಕೆ! ಸತ್ಯಕೆ ವಿರೋಧ; ನ್ಯಾಯಕ್ಕೆ ಅನುರೋಧ! ಯಾರದು ತಪ್ಪು? ನ್ಯಾಯಾಧೀಶರದೆ? ವಾದಿಯದೆ? ಅಲ್ಲ, ನಮ್ಮದು. ಸತ್ಯವನ್ನು ಸುಳ್ಳು ಮಾಡಿದ ಅಪರಾಧವೂ ನಮ್ಮದು, ಸುಳ್ಳನ್ನು ಸತ್ಯವೆಂದು ಮಾಡಿದವರೂ ನಾವೇ. ನೆರೆಯವನನ್ನು ಜರೆದು ಫಲವಿಲ್ಲ. ಅಥವಾ ಸರಕಾರವನ್ನು ದೂರುವುದು ಸರಿಯಲ್ಲ ಹಾಗಾದರೆ ಮುಂದೇನು ಮಾಡೋಣ? ಎಂದರೆ—ಇನ್ನಾದರೂ ಅದು ನಮ್ಮ ಕ್ರಮಾಗತದ ಸ್ವತ್ತು ಎಂಬುದನ್ನು ರುಜುಪಡಿಸಲಿಕ್ಕಿರುವ ಮೂಲಾಧಾರಗಳನ್ನು ಹುಡುಕಿ ತೆಗೆದು ನ್ಯಾಯಸಮ್ಮತವಾದ ಸಾಕ್ಷ್ಯಗಳನ್ನು ಕೊಟ್ಟು ಪುನರ್ವಿಮರ್ಶೆಗಾಗಿ ಮೇಲ್ಮನವಿಯನ್ನು ಮಾಡಿದಲ್ಲಿ ಸತ್ಯವು ಸತ್ಯವಾದೀತು; ಅಸತ್ಯವು ಅಳಿದುಹೋದೀತು. ಇದುವೆ ನಮ್ಮ ಮುಂದಿನ ಕರ್ತವ್ಯ.

ಪಾರ್ತಿ ಸುಬ್ಬನ ಕುರಿತಾಗಿರುವ ಐತಿಹ್ಯಗಳ ಯಾಥಾರ್ಥ್ಯವೇನು? ಅವುಗಳಲ್ಲಿ ಸತ್ಯಾಂಶವೆಷ್ಟು? ಅವಕ್ಕೆ ಏನು ಪ್ರಮಾಣ? ಆತನ ಕೃತಿಗಳಲ್ಲಿ ಏನು ವೈಶಿಷ್ಟ್ಯವಿದೆ? ಎಂಬುದನ್ನು ಸಂಶೋಧಿಸಿ ಆತನ ಕರ್ತೃತ್ವ ನಿರ್ಣ

ಯಕ್ಕೆ ಸರಿಯಾದ ಆಧಾರಗಳನ್ನು ಎತ್ತಿ ಹಿಡಿದರೆ ಶ್ರೀ ಕಾರಂತರ ವಾದವನ್ನು ಎದುರಿಸುವ ಪ್ರಸಂಗವೇ ಇಲ್ಲ. "ಅತೃಣೇ ಪತಿತೋವಹ್ನಿಃ ಸ್ವಯಮೇವೋಪಶಾಮ್ಯತಿ" ಎಂಬಂತೆ ಅದು ತಾನಾಗಿಯೇ ನಂದಿಹೋಗುತ್ತದೆ. ಬಂದ ಉಪಾಲಂಭನೆಗಳೆಲ್ಲ ಯಥಾಗತವಾಗಿ ಹಿಂತಿರುಗುತ್ತವೆ. ಪಾರ್ತಿಸುಬ್ಬನ ಹೆಸರು ಚಿರಸ್ಥಾಯಿಯಾಗುತ್ತದೆ. ಶ್ರೀ ಕಾರಂತರೂ ಹೃತ್ಪೂರ್ವಕ ಅನುಗ್ರಹಿಸುತ್ತಾರೆ. ಎಲ್ಲ ತಿಟ್ಟಿನವರೂ ಪಾರ್ತಿಸುಬ್ಬನ ಕೀರ್ತಿಯನ್ನು "ಮುದದಿಂದ . . ." ಕೊಂಡಾಡುತ್ತಾರೆ.

ಅಭಿಮಾನ ಮೂರ್ಛಿತರಾಗಿದ್ದ ನಮ್ಮನ್ನು ಶ್ರೀ ಕಾರಂತರು ಎಚ್ಚರಿಸಿ ಉಪಕಾರ ಮಾಡಿದರು ಎಂಬ ಸದ್ಭಾವನೆಯಿಂದ ಸಹನಶೀಲರಾಗಿ ಸತ್ಯಶೋಧನೆಯಲ್ಲಿ ಪ್ರವೃತ್ತರಾಗೋಣ. ಪಾರ್ತಿಸುಬ್ಬನಲ್ಲಿ ಅಂತಹ ಯೋಗ್ಯತೆ ನಿಜಕ್ಕೂ ಇದ್ದಿಲ್ಲವೆ ಎಂಬ ಶಂಕೆಯಿಂದಲೆ ಹುಡುಕೋಣ. ಪೂರ್ವಗ್ರಹವನ್ನು ತೊರೆದುಬಿಡೋಣ. ವಾದದಿಂದ ಸಾಧ್ಯವಲ್ಲದುದು ಶೋಧದಿಂದ ಸಿದ್ಧಿಸುತ್ತದೆ. ಅಪ್ರಮಾಣ ತರ್ಕದಿಂದ ಸಿದ್ಧವೂ ಅಸಾಧ್ಯವೆಂದಾಗುತ್ತದೆ. ಪ್ರಮಾಣಸಿದ್ಧವಲ್ಲದ ಅನುಮಾನವೆ ಕಲ್ಪನೆ. 'ಪ್ರಮಾಣವಂತ್ಯದೃಷ್ಟಾನಿಕಲ್ಪ್ಯಾನಿ ಸುಬಹೂನ್ಯಪಿ । ಅದೃಷ್ಟಶತಭಾಗೋಪಿ ನ ಕಲ್ಪ್ಯೋಹ್ಯಪ್ರಮಾಣಕಃ' ಎಂಬ ನ್ಯಾಯ ಪ್ರತಿಜ್ಞೆಯನ್ನು ಮುಂದಿಟ್ಟು ಮಾಡುವ ಸಂಶೋಧನೆಗೂ ಹೂಡುವ ವಾದಕ್ಕೂ ಬೆಲೆ ಬರುತ್ತದೆ. ಸತ್ಯವು ಹೊರಬೀಳುತ್ತದೆ. ಸುಬ್ಬನ ಹೆಸರಿನಲ್ಲಿ ಕಾಳಗ ನಡೆಯಬಾರದೆಂಬ ಸದ್ಭಾವನೆಯಿಂದ ಇಷ್ಟು ವಿಜ್ಞಾಪಿಸಿಕೊಂಡಿದ್ದೇನೆ. ಇನ್ನು ಸುಬ್ಬನ ಕಾಲ ಮತ್ತು ಕರ್ತೃತ್ವಕ್ಕೆ ಆಧಾರವೆಂದು ನಾನು ಸಂಗ್ರಹಿಸಿರುವ ಈ ದಾಖಲೆಗಳ ಕಡೆಗೆ ತಮ್ಮ ಲಕ್ಷ್ಯವನ್ನು ಕರೆಯುತ್ತೇನೆ.

ಪಾರ್ತಿಸುಬ್ಬನು ಕುಂಬಳೆಯ ಕಣಿಪುರದಲ್ಲಿದ್ದವನು ಎಂಬುದಕ್ಕೆ ಆಧಾರವಾಗಿರುವ ಎರಡು ಮುಖ್ಯ ಸಾಧನಪತ್ರಗಳ ಪಡಿಯಚ್ಚುಗಳನ್ನು ತಮ್ಮ ಮುಂದಿಡುತ್ತೇನೆ. ಇವುಗಳಲ್ಲಿ ಒಂದು ಮದಲೂರ ಗಣಪತಿ ದೇವಸ್ಥಾನದಲ್ಲಿ 1797ನೆ ಇಸವಿಯಲ್ಲಿ ನಡೆದ ಮೂಡಪ್ಪ ಸೇವೆ ಎಂಬ ವಿಶೇಷ ಉತ್ಸವ ಸಮಾರಂಭದಲ್ಲಿ ವಿವಿಧ ಕಾರ್ಯಭಾಗಗಳಿಗೆ ನಿಯೋಜಿತರಾಗಿದ್ದ ಬೇರೆಬೇರೆ ಗ್ರಾಮಗಳ ಜನರ ಹೆಸರಿರುವಂಥದು. ಈ ಸಾಲಿನಲ್ಲಿ 'ಕಣಿ

ಪುರದಿಂದ ಪಾರ್ತಿಸುಬ್ಬ ಜನ ೧' ಎಂದಿರುವುದನ್ನು ನೋಡಿರಿ ಈ ಪಟ್ಟಿಯ ಮುಖ್ಯ ವಿವರಗಳನ್ನು ಓದಿಹೇಳುತ್ತೇನೆ. 'ಯದಾಸ್ತು—ಮದವೂರ ಶ್ರೀ ಮಹಾಗಣಪತಿ ದೇವರ ಸನ್ನಿಧಿಯಲ್ಲಿ ಆಗುವಂಥ ಮೂಡಪ್ಪದ ಲೆಖ್ಖ—ಪ್ರಾಕು ದಾಖಲೆ ಪ್ರಕಾರ—ಪಿಂಗಳ ಸಂವತ್ಸರದ ವೈಶಾಖ ಬ। ೪ಯು ಆದಿತ್ಯವಾರ ದಿವಸ ನಡೆವ ಬಗ್ಗೆ ಬರದ ಲೆಖ್ಖದ ನಕಲು' ಎಂಬ ಶಿರೋಲೇಖನದ ಮುಂದೆ ಉತ್ಸವಕ್ಕೆ ಸಂಬಂಧಿಸಿದ ವಿವಿಧ ವಿನಿಯೋಗಗಳಿಗೆ ಬೇಕಾಗುವ ಅಕ್ಕಿ ತೆಂಗಿನಕಾಯಿ ಚಿನ್ನ ಬೆಳ್ಳಿ ಇತ್ಯಾದಿಗಳ ವಿವರವಾದ ಮೇಲೆ ಕುಂಬಳೆ, ಅಂಗಡಿಮೊಗರು, ಮೊಗ್ರಾಲು, ಮಧೂರು ಇತ್ಯಾದಿ ಹಲವು ಮಾಗಣೆಗಳಿಂದ ಉಚಿತಸೇವೆಗಾಗಿ ಬರಬೇಕಾಗಿರುವ ನೂರಾರು ಜನ ಭಕ್ತವರ್ಗದಲ್ಲಿ ಸ್ಥಾನಿಕ ಜಾತಿಯವರ ಹೆಸರಿನ ಪಟ್ಟಿಯು ಶಿರೋಲೇಖನವು ಹೀಗಿದೆ—'ಸ್ಥಾನಿಕರು ಮೇಲಾಗ್ರಕ್ಕೆ ಹಚ್ಚುವ ಬಗ್ಗೆ, ಅಪ್ಪ ಕಜ್ಜಾಯದ ಅಕ್ಕಿ ಕುಟ್ಟುವ ಬಗ್ಗೆ ಬ್ರಾಹ್ಮರ ಎಂಜಲು ತೆಗೆಯುವ ಬಗ್ಗೆ ಬಂಟರಿಗೆ ಇಕ್ಕುವ ಬಗ್ಗೆ ಸಹ....' ಈ ಪಟ್ಟಿಯಲ್ಲಿ ಕಾಣುವಂತೆ ಪಾರ್ತಿಸುಬ್ಬನ ಹೆಸರು ಮೊದಲನೆಯದಾಗಿ ಬಂದಿದೆಯಷ್ಟೆ. ಇದರಿಂದ ಆತನು ಕಣಿಪುರದಲ್ಲಿದ್ದವನೆಂದೂ ಮದವೂರು ವಿಘ್ನೇಶನ ಭಕ್ತರಲ್ಲಿ ಪ್ರಮುಖನೆಂದೂ ತಿಳಿಯಬಹುದಾಗಿದೆ. ಈ ಮೂಡಪ್ಪ ಸೇವೆಯು ನಡೆದ ಆ ಪಿಂಗಳ ಸಂವತ್ಸರದ ವೈಶಾಖ ಬ। ೪ಯು ಆದಿತ್ಯವಾರ ಎಂಬುದು ದಿ। ಸ್ವಾಮಿ ಕಣ್ಣು ಪಿಳ್ಳೆಯವರ Indian Ephemeris ಪ್ರಕಾರ ತಾ. 14—5—1797ಕ್ಕೆ ಸರಿಯಾಗಿರುತ್ತದೆ. ಇದು ಆತನ ಕಾಲ ನಿರ್ಣಯಕ್ಕೂ ನ್ಯಾಯವಾದ ಆಧಾರವಾಗಿದೆಯಷ್ಟೆ. ಮದವೂರು ವಿಘ್ನೇಶನಲ್ಲಿ ಆತನಿಗೆ ವಿಶೇಷ ಭಕ್ತಿ ಇದ್ದಿತ್ತೆಂಬುದಕ್ಕೆ ಇನ್ನೂ ಒಂದು ಆಧಾರವಿದೆ. ಆ ದೇವಸ್ಥಾನದಲ್ಲಿ ಅಭಿಷೇಕಕ್ಕಾಗಿರುವ ತಾಮ್ರದ ಜಲದ್ರೋಣಿಯ ಮೇಲೆ 'ಪಾರ್ತಿಸುಬ್ಬನು ಕೊಟ್ಟ ಕಾಣಿಕೆ' ಎಂದು ಕೆತ್ತಿದ ಅಕ್ಷರಗಳಿರುವುದನ್ನು ಈಗಲೂ ಕಾಣಬಹುದು. ನಿಮ್ಮ ಮುಂದಿಟ್ಟಿರುವ ಈ ಎರಡನೆ ಆಧಾರ ಪತ್ರವು 1827ನೆ ಇಸವಿಯಲ್ಲಿ ಬೇಕಲ ತಾಲೂಕು ಮುನ್ಸಿಫ ಕಚೇರಿಯಿಂದ ಕೊಡಲಾಗಿದ್ದ ಪಾರ್ತಿಸುಬ್ಬನ ಮನೆ ಹಿತ್ತಲಿನ ಕುರಿತಾದ ವ್ಯವಹರಣೆಯ ತೀರ್ಪಿನ ಮೂಲಪ್ರತಿಯಾಗಿದೆ. ವಿವರಣೆಗಾಗಿ ಅದರ ಮುಖ್ಯಾಂ

ಶಗಳನ್ನು ಓದಿ ಹೇಳುತ್ತೇನೆ. "ಸಂ 1826ನೆ ಇಸವಿ ನಂಬ್ರ 661 ಕನಡಾ ಜಿಲ್ಲಾ ಅದಾಲತ್ತ ಇಲಾಖೆ ಬೇಕಲ ತಾಲೂಕು ಮುನಶೀಫ ಕಚೇರಿಯಿಂದ—ವಾದಿ ಬೇಕಲ ತಾಲೋಕು ಕಾಸರಗೋಡು ಮಾಗಣೆ ಕೂ ಗ್ರಾಮದಲ್ಲಿರುವ ಪಾಡಿ ವೆಂಕಟೇಶ ಶ್ಯಾನುಭೋಗನ ಮಗ ಲಿಂಗಪ್ಪ—ವಕೀಲ ಸುಬ್ಬಯ್ಯ—ಪ್ರತಿವಾದಿರು ಸದ್ರಿ ತಾಲೋಕು ಕುಂಬಳೆ ಮಾಗ ತಲಕದ ಗ್ರಾಮದ ಕಣಿಪುರ ಪೇಟೆಯಲ್ಲು ಇರುವ ಮಾನುದಾಸನ ತಮ ಪಾರ್ತಿಸುಬ್ಬಣ್ಣ ೧. ಪೂವಯ್ಯನ ಗೌಡಿ ಪೊಕ್ಕು ಯಾನೆ ವೆಂಕು ಹೆಂಗ್ಸು ೧.

"ವಾದಿ ಕೈಪೇತಿನಲ್ಲು ಜಾಹೀರು ಮಾಡಿದ್ದು ಏನೆಂದ್ರೆ—ಒಂದನೆ ಪ್ರತಿವಾದಿಯು ಈತನ ಬಾಬ್ತು ಸದ್ರಿ ಗ್ರಾಮದ ಪಟ್ಟೆಯಲ್ಲು ಇರುವ ೧॥ ಬೇರೇಜಿನ ಹಿತ್ತಲು ಒಂದನ್ನು ಗ. ೧೦ಕ್ಕೆ ಇಳಿದಾರುವಾರ ಮಾಡಿ ವ್ಯಯ ಸಂ|ದ ಕಾರ್ತಿಕ ಬ| ೭ರಲ್ಲು ಬರಕೊಟ್ಟ ದಸ್ತೈವಜು ಪ್ರಕಾರ ಸದ್ರಿ ಹಿತ್ತಲು ವಪ್ಪಿಸಿಕೊಳ್ಳುವರಿ ಎರಡನೆ ಪ್ರತಿವಾದಿಳು ಒಂದನೆ ಪ್ರತಿವಾದಿ ಕೂಮುಕ್ಕಿನಿಂದ ಹರಕತ್ತು ಮಾಡಿ ಬಿಟ್ಟು ಕೊಡದೆ ಇರುವುದರಿಂದ...... ಎರಡನೆ ಪ್ರತಿವಾದಿಳ ಜವಾಬಿನಲ್ಲು—ಕುಂಪನಿ ಅಮಲು ಆದ ಲಾಗ್ಯಾತು ಈಗ ಹದಿನೈದು ವರ್ಷದಾರಭ್ಯಕ್ಕೂ ಕಾ....ತಿಮ್ಮಪ್ಪ ಸಹ ಸದ್ರಿ ಹಿತ್ತಲಲ್ಲು ಇದ್ದು...ಅನುಭವಿಸಿಕೊಂಡು.......ಬರುತ್ತಿದ್ದೆ. ಈ ಒಂದನೆ ಪ್ರತಿವಾದಿಯು ಊರು ಬಿಟ್ಟು ಓಡಿಹೋಗಿ ಕೊಡಗು ಜಿಲ್ಲೆಯಲ್ಲಿ ಇದ್ದ......ಸದ್ರಿ ದೇವಸ್ಥಾನದ ಕೃಷ್ಣ ಅಡಿಗಳ ೧ ಪಾಟಾಳಿ ಮಾಧವ ೧ (ಸಾಕ್ಷಿ) ಹೇಳುತ್ತಾರೆ. ಈ ಎರಡನೆ ಪ್ರತಿವಾದಿಳು ಒಂದನೆ ಪ್ರತಿವಾದಿ ಅಣ್ಣನ ಮಗ ತಿಮ್ಮಪ್ಪ ಎಂಬವ ಇಟ್ಟುಕೊಂಡವಳು. ಆದ್ರಿಂದ ಈ ಎರಡನೆ ಪ್ರತಿವಾದಿಳಿಗೆ ಆ ಹಿತ್ತಲಲ್ಲಿ ಏನೂ ಬಾಧ್ಯಸ್ತಿಕೆ ಇರುವುದಿಲ್ಲ......ಆ ಹಿತ್ತಲಿಗೆ ಬೇರೆ ಯಾರಿಗಾರೂ ಹಕ್ಕು ವಗೈರೆ ಜನರು ಕಚೇರಿ ಮಜ್ಕೂರಿಗೆ ಅರ್ಜಿ ಜಾಹೀರು ಮಾಡುವಂತೆ ಮೂವತ್ತು ದಿವಸದ ವಾಯಿದೆಯಿಂದ ಕೊಟ್ಟ ಇಸ್ತಿಯಾರು ವಾಯಿದೆ ಮಿರಿದಾಗ್ಯೂ ಯಾರೂ ಜಾಹೀರು ಮಾಡಿದ್ದು ಇರುವುದಿಲ್ಲ......ತಾರೀಕು 13ನೆ ಆಗೋಸ್ತು ಸಂ 1827ನೆ ಇಸವಿ—ರುಜು ಕೃಷ್ಣ ಮೂತ್ತಲ್ಲು—ಮುನಶಿಫ ಬೇಕಲ"

ಈ ಕೋರ್ಟಿನ ದಾಖಲೆಯ ಪ್ರಕಾರ ಪಾರ್ತಿಸುಬ್ಬನು ಸುಮಾರು 1810ನೆ ಇಸವಿಯ ಅನಂತರ ಕೊಡಗು ಜಿಲ್ಲೆಯಲ್ಲಿ ವಾಸವಾಗಿದ್ದನು ಎಂದೂ ತಿಳಿಯಬಹುದಾಗಿದೆ. ಈ ದೃಷ್ಟಿಯಿಂದ ಕೊಡಗು ಜಿಲ್ಲೆಯಲ್ಲಿ ಆತನ ಗೊತ್ತುಗುರಿಗಾಗಿ ಯಥಾಸಾಧ್ಯ ನಾನು ಅನ್ವೇಷಿಸಿದಾಗ ನನಗೆ ಆತನ ಯಕ್ಷಗಾನ ಪ್ರಬಂಧಗಳ ಓಲೆ ಮತ್ತು ಕಾಗದದ ಪ್ರತಿಗಳು ದೊರೆತಿವೆ. ಆ ಪ್ರತಿಗಳು ನಮ್ಮಲ್ಲಿ ಈಗ ಅಚ್ಚಿನಲ್ಲಿ ದೊರೆಯುತ್ತಿರುವ ಪ್ರತಿಗಳಿಂದ ಹೆಚ್ಚು ಶುದ್ಧವಾಗಿವೆ. ಆತನು ತುಳು ಭಾಷೆಯಲ್ಲಿ ರಚಿಸಿದ ಕೀರ್ತನೆಗಳು ಸಹ ಅಲ್ಲಿ ಉಪಲಬ್ಧವಾಗಿವೆ. ಇದೊಂದು ಹಸ್ತಪ್ರತಿಯು ನೀವೀಗ ನೋಡುತ್ತಿರುವಂತೆ ತಾ. 5–8–1894ರಲ್ಲಿ ಕೊಡಗು ಶ್ರೀಧರ ಭಟ್ಟ ಎಂಬವರಿಂದ ಬರೆಯಲ್ಪಟ್ಟುದಾಗಿದೆ ಎಂದು ಸ್ಪಷ್ಟವಿದೆಯಷ್ಟೆ; ಅವರ ಸ್ವಹಸ್ತಾಕ್ಷರ ಸಹಿ ಸಮೇತ ಇದೆಯಲ್ಲ. ಇದರಲ್ಲಿ ಪಾರ್ತಿಸುಬ್ಬನದಾಗಿರುವ ತುಳು ಕೀರ್ತನೆಯೊಂದನ್ನು ಓದಿ ಹೇಳುತ್ತೇನೆ.—

ನಾಣೆಂಕ್ ಗತಿಏರ್ ಪಣ್ಲೆ ರಂಗಯ್ಯ ।
ಕಾಣಿಕೆ ಈರೆಗ್ ಎನಮನಸಯ್ಯ ॥ ಪಲ್ಲ ॥

ಕ್ಷೋಣಿಟೆಂಕ್ ಸಹಾಯಾಪರಿದ್ದಿ ।
ಜಾಣತನೊಂಟು ನಡಪಿಂಚಿ ಯೋಗ್ಯೆ ಇದ್ದಿ ।
ಪ್ರಾಣರಕ್ಷೆಗ್ ಧನಧಾನ್ಯೊಲ ಸೂವರಿದ್ದಿ ॥ ೧ ॥

ಜಲಜ ಸಂಭವಗೇನ್ ಜಾನೆ ಮಾಂತ್ತೆನೆ ।
ಛಲವೊಂತ ಬರಹೊನ್ ವ್ಯೊತ ಬರೆಯೆನೊ ।
ಫಲೊ ಇದ್ಯಾಂತೆನಣಮ್ಮೆ ಜಾಯೆ ಪುಟ್ಟ್ಯೊಯೆನೊ ।
ಗೆಲವೊಂಟ್ ಹರಿ ಎನಣೇಪೊ ರಕ್ಷಿಪೆನೊ ॥ ೨ ॥

ಧನ್ಯೊಂತ ಗರುಡನ್ನ ಮೋಲ್‌ಟ್ ಗಮನೊ ।
ಪುಣ್ಯೊಂತ ವಾಸುಕಿ ಹೃದಯೊಂಟು ಶಯನೊ ।
ಮಾನ್ಯೊಂತ ದಾಸೆರೆ ವಚನೊಂಟ್ ಗಾನೊ ।
ಕಣ್ಣ ಪುರೊಂತ ಶ್ರೀ ಕೃಷ್ಣನ ಧ್ಯಾನೊ ॥ ೩ ॥

(ಈ ಪದ್ಯವು ಶಿವಳ್ಳಿ ಬ್ರಾಹ್ಮಣರು ಮತ್ತು ಸ್ಥಾನಿಕ ಜಾತಿಯವರು ಆಡುವ ತುಳು ಭಾಷೆಯಲ್ಲಿದೆ. ಶೂದ್ರಾದಿಗಳ ತುಳು ಭಾಷೆಗೂ ಇದಕ್ಕೂ ಸ್ವಲ್ಪ ವ್ಯತ್ಯಾಸವಿದೆ.)

ಕನ್ನಡದಲ್ಲಿ ಇದರ ಯಥಾವದ್ಭಾಷಾಂತರವು ಹೀಗಾಗುತ್ತದೆ.

ಇನ್ನಾರೆನಗೆ ಗತಿ । ಹೇಳಿ ರಂಗಯ್ಯ ।
ಎನ್ನ ಮನಸೆ ಕಾಣೆ । ಕೆಯು ನಿಮಗಯ್ಯ ॥ ಪಲ್ಲ ॥
ಕ್ಷೋಣಿಯೊಳೆನಗೆ ಸ । ಹಾಯ ಮಾಡುವರಿಲ್ಲ ।
ಜಾಣತನದಿ ನಡೆ । ಸುವ ಯೋಗ್ಯನಿಲ್ಲ ।
ಪ್ರಾಣರಕ್ಷೆಗೆ ಧನ । ಧಾನ್ಯಕಾಂಬುದಕಿಲ್ಲ ॥ ೧ ॥

ಜಲಜಸಂಭವನಿಗಾ । ನೇನ ಮಾಡಿದೆನೊ ।
ಛಲವುಳ್ಳ ಬರಹವ । ನೆಳೆದು ಬರೆದನೊ ।
ಫಲವಿಲ್ಲದೇಕೆನ್ನ । ತಂದೆ ಪಡೆದನೊ ।
ಗೆಲವಿಂದ ಹರಿ ಎನ್ನ । ನೆಂದು ರಕ್ಷಿಪನೊ ॥ ೨ ॥

ಧನ್ಯನಾಗಿಹ ಗರು । ಡನ ಮೇಲೆ ಗಮನ ।
ಪುಣ್ಯಾತ್ಮ ವಾಸುಕಿ । ಹೃದಯದಿ ಶಯನ ।
ಮಾನ್ಯ ದಾಸರ ವಚ।ನಗಳಲ್ಲಿ ಗಾನ
ಕಣ್ವ ಪುರದ ಶ್ರೀ । ಕೃಷ್ಣನ ಧ್ಯಾನ ॥ ೩ ॥

ಪಾರ್ತಿಸುಬ್ಬನ ಈ ಪದ್ಯವನ್ನು 1905ನೇ ಇಸವಿಯಲ್ಲಿ ಕಾರ್ಕಳದಲ್ಲಿ ಜಾತ್ರೆ ಸಮಯ ಭಿಕ್ಷುಕನು ಹಾಡುತ್ತಿದ್ದುದನ್ನು ತಾನು ಕೇಳಿರುವೆನೆಂದು ಕೀ। ಶೇ। ಬಡಕಬೈಲು ಪರಮೇಶ್ವರಯ್ಯನವರು ತಾವು 1929ನೇ ಇಸವಿಯಲ್ಲಿ ಮುದ್ರಿಸಿ ಪ್ರಕಟಿಸಿದ 'ಕಿಟ್ಣರಾಜಿ' ಎಂಬ ತಮ್ಮ ತುಳು ಯಕ್ಷಗಾನ ಪ್ರಬಂಧದ ಮುನ್ನುಡಿಯಲ್ಲಿ ಪ್ರಸ್ತಾವಿಸಿರುವುದನ್ನು ನೀವೂ ನೋಡಿರಬಹುದು.

ಹೀಗೆ ಸುಬ್ಬನ ಕಾಲ ನಿರ್ಣಯಕ್ಕೆ ಮತ್ತು ಜಾತಿನೀತಿ ವ್ಯಕ್ತಿತ್ವಗಳ ನಿರ್ಣಯಕ್ಕೆ ಒದಗುವ ಇನ್ನೂ ಹಲವು ಪ್ರಮಾಣಗಳಿವೆ. ಅವುಗಳನ್ನೆಲ್ಲ ವಿಸ್ತರಿಸುವುದಕ್ಕೆ ಇಲ್ಲಿ ಕಾಲಾವಕಾಶವಿಲ್ಲ. ಸದ್ಯಃ ಪ್ರಕಾಶಪಡಿಸಲಿಕ್ಕ

ರುವ ಗ್ರಂಥದಲ್ಲಿ ಸವಿಸ್ತರವಾಗಿ ನಿರೂಪಿಸುತ್ತೇವೆ. ಪಕ್ಷಪಾತ್ರಯವಾಗಿದ್ದ ಈ ಎರಡು ದಾಖಲೆಗಳನ್ನು (ಮೂಡಪ್ಪ ಸೇವೆಯ ಪಟ್ಟಿ ಮತ್ತು ಕೋರ್ಟ ತೀರ್ಮಾನ) ಕ್ರಮವಹಿಸಿ ಒದಗಿಸಿ ಕೊಟ್ಟ ಶ್ರೀ ಕೂಡ್ಲು ಈಶ್ವರ ಶ್ಯಾನಭೋಗರಿಗೆ ನಮ್ಮ ಕೃತಜ್ಞತಾಪೂರ್ವಕ ಅಭಿನಂದನೆಯು ಸಲಬೇಕಾಗಿದೆ.

ಇದೀಗ ನಿಮಗೆ ತೋರಿಸುವ ಇನ್ನೊಂದು ಪಡಿಯಚ್ಚು ಪಾರ್ತಿ ಸುಬ್ಬನ ಹಿತ್ತಿಲಿನದು. ಇದರಲ್ಲಿ ತೋರುವ ಕಟ್ಟಡದ ಅವಶೇಷಗಳು ಪಾರ್ತಿಸುಬ್ಬನು ಹುಟ್ಟಿದ ಮನೆಯದು ಎಂದು ಹೇಳುತ್ತಾರೆ. ಈ ಹಿತ್ತಿಲು ಇಂದೂ ಪಾರ್ತಿ ಸುಬ್ಬನ ಹಿತ್ತಿಲೆಂದೇ ಕರೆಯಲ್ಪಡುತ್ತಿರುವ ವಿಚಾರವೂ ಅದು ಆತನ ವಂಶಸ್ಥರ ಸ್ವಾಧೀನದಲ್ಲೇ ಇರುವುದೆಂಬುದೂ ತಾವೆಲ್ಲರೂ ತಿಳಿದಿರಬಹುದಾದ ವಿಷಯ.

ಇನ್ನು ಆತನು ರಾಮಾಯಣಾದಿ ಯಕ್ಷಗಾನ ಗ್ರಂಥಗಳನ್ನು ರಚಿಸಿದವನೆಂಬುದಕ್ಕೆ ನ್ಯಾಯವಾದ ಆಧಾರವೇನಿದೆ ಎಂದು ನೋಡೋಣ. ಸುಬ್ಬನ ರಾಮಾಯಣದ ಕಥಾ ವಸ್ತುವಿಗೂ ವಾಲ್ಮೀಕಿರಾಮಾಯಣದ ಅಥವಾ ಕನ್ನಡದಲ್ಲಿರುವ ತೊರವೆ ರಾಮಾಯಣಾದಿ ಗ್ರಂಥಗಳ ಕಥಾ ವಸ್ತುವಿಗೂ ನೈಕಸಂದರ್ಭಗಳಲ್ಲಿ ಭಿನ್ನತ್ವವಿದೆ ಎಂಬುದು ನಮಗೆಲ್ಲ ತಿಳಿದೇ ಇದೆ. ಮುಖ್ಯವಾಗಿ ಶೂರ್ಪಣಖೆಯ ಕುಚಚ್ಛೇದನವೆಂಬುದು ಪಾರ್ತಿ ಸುಬ್ಬನ 'ಪಂಚವಟಿ'ಯಲ್ಲಿ ಹೊರತು ನಮ್ಮ ಇತರ ರಾಮಾಯಣ ಗ್ರಂಥಗಳಲ್ಲಿ ಕಂಡುಬರುವುದಿಲ್ಲವಷ್ಟೆ. ಕೇರಳದ ಕಥಕಳಿ ಪ್ರಯೋಗದಲ್ಲಿ ಈ ಕುಚಚ್ಛೇದನ ಸಂದರ್ಭವಿದೆ; ಇದು ತಮಗೂ ತಿಳಿದಿರಬಹುದು. ಸುಬ್ಬನ ರಾಮಾಯಣಕ್ಕೂ ಕಥಕಳಿ ರಾಮಾಯಣಕ್ಕೂ ಈ ಭಾಗದಲ್ಲಿ ಸಾಮ್ಯವಿರುವುದರಿಂದಲೂ ಸುಬ್ಬನು ಕಥಕಳಿಯನ್ನು ಬಲ್ಲವನಾಗಿದ್ದನೆಂದು ಆತನ ಕುರಿತಾದ ಎಲ್ಲ ಐತಿಹ್ಯಗಳು ಸಮಾನಯಮದಿಂದ ಹೇಳುತ್ತಿರುವುದರಿಂದಲೂ ಅವೆರಡನ್ನು ಹೋಲಿಸಿ ನೋಡಬೇಕೆಂಬ ಕುತೂಹಲವಾಗಿ ಕೇರಳ ಕಲಾಮಂಡಲದ ತಜ್ಞರ ಸಹಾಯದಿಂದ ಮತ್ತು ಕೀರ್ತಿಶೇಷ ಮಹಾಕವಿ ವಳ್ಳತ್ತೋಳ್ ಇವರ ಚಿರಂಜೀವಿಗಳಾದ ಶ್ರೀ ಬಾಲನ್ ಕುರೂಪ್, ಶ್ರೀ ಗೋವಿಂದನ್ ಕುರೂಪ್ ಈ ಮಿತ್ರರ ಉದಾರ ಸಹಕಾರದಿಂದ ಯಥಾಮತಿ ಪರಿಶೀಲನೆಮಾಡಿ ಸುಬ್ಬನ ಕುರಿತಾದ ಐತಿಹ್ಯಗಳಲ್ಲಿ ಸತ್ಯವಿದೆ ಎಂದು ತಿಳಿದು

ಕೊಂಡೆನು. ಅನಂತರ ಕೊಟ್ಟಾರಕರ ಮಹಾರಾಜನಿಂದ ರಚಿತವಾದ ರಾಮ
ನಾಟ (ಕಥಕಳಿ ರಾಮಾಯಣ) ಗ್ರಂಥಗಳನ್ನು ಸೂಕ್ಷ್ಮವಾಗಿ ಸಾದ್ಯಂತ ಪ
ಶೀಲಿಸುವಾಗ ಪಾರ್ತಿ ಸುಬ್ಬನು ಕಥಾಭಾಗಗಳಲ್ಲಿ ಮಾತ್ರ ಅಲ್ಲ ಸಂ
ವಿಭಾಗ, ಛಂದ ಬಂಧ, ರಾಗ, ತಾಳ, ಇತ್ಯಾದಿ ಕಾವ್ಯ ರಚನೆಯ ಸರ್ವಾಂ
ಗಳಲ್ಲಿಯೂ ರಾಮನಾಟವನ್ನು ಅನುಕರಿಸಿದ್ದಾನೆ ಎಂದು ಖಚಿತವಾಯಿತು
ಅದರ ಎಷ್ಟೋ ಪದ್ಯಗಳು ಪಾರ್ತಿ ಸುಬ್ಬನ ಕೃತಿಗಳಲ್ಲಿ ಯಥಾವತ್ತಾ
ಭಾಷಾಂತರರೂಪದಲ್ಲಿ ಸಹ ಬಂದಿರುವುದರಿಂದ ಆತನು ಕಥಕಳಿಯನ್ನು
ಬಲ್ಲವನಷ್ಟೆ ಅಲ್ಲ ರಾಮನಾಟವನ್ನು ಕಂಠಪಾಠ ಮಾಡಿದವನೆ ಇದ್ದಿ
ಬೇಕು ಎಂಬುದರಲ್ಲಿ ಸಂದೇಹ ಬರುವಂತಿಲ್ಲ. ಕಥಕಳಿಯ ಆದರ್ಶದಿಂದಲೆ
ನಮ್ಮ ಯಕ್ಷಗಾನದಲ್ಲಿ ಪ್ರಾಯಶಃ ಪ್ರಪ್ರಥಮವಾಗಿ ರಾಮಾಯಣ ಪ್ರಸಂ
ಗಳನ್ನು ರಚಿಸಿ ಗಾನ ನರ್ತನ ಆಹಾರ್ಯಾದಿಗಳಲ್ಲಿ ಸಹ ವೈಶಿಷ್ಟ್ಯ ಪೂರ್ಣ
ವಾದ ಸುಧಾರಣೆಯನ್ನು ಮಾಡಿದ ಯಕ್ಷಗಾನಾಚಾರ್ಯನೆಂಬ ಪಾರ್ತಿ
ಸುಬ್ಬನ ಬಿರುದು ಅರ್ಥವತ್ತಾಗಿದೆ. ಯಕ್ಷಗಾನದ ದೃಶ್ಯ ಪ್ರಯೋಗದಲ್ಲಿ
ತೆಂಕುತಿಟ್ಟು ಬಡಗುತಿಟ್ಟು ಎಂಬ ಭಿನ್ನ ಸಂಪ್ರದಾಯವು ಪಾರ್ತಿಸುಬ್ಬ
ನ ಕಾಲದಿಂದಲೆ ಹುಟ್ಟಿ ಬೆಳೆದುದಾಗಿದೆ ಎಂದು ನ್ಯಾಯವಾಗಿ ಅನುಮಾನಿಸ
ಬಹುದು. ನಮ್ಮ ತೆಂಕುತಿಟ್ಟಿನ ವೇಷಭೂಷಣಗಳು ಮುಖ್ಯವಾಗಿ ಬಣ್ಣ
ದ ವೇಷ (ಚುಟ್ಟಿ ವೇಷ ಅಥವಾ ರಾಕ್ಷಸರ ವೇಷ) ಹನುಮಂತನ ವೇಷ
ಶೂರ್ಪಣಖಿ ವೇಷ, ಕಟ್ಟು ವೇಷ ಮೊದಲಾದುವು ಕಥಕಳಿಯವಕ್ಕೆ ಸಮಾನ
ವಾಗಿರುವುದು ಮಾತ್ರ ಅಲ್ಲ ಕುಣಿತ, ಪ್ರವೇಶ, ನಿಷ್ಕ್ರಮ, ನಿಲುವು,
ನೋಟ, ಹಸ್ತಚಾರಿ, ಕೇಶಭಾರ ಇತ್ಯಾದಿಗಳೂ ಕಥಕಳಿಯ ಈ ಅಂಶಗಳಲ್ಲಿ
ಸಂಪೂರ್ಣ ಹೋಲಿಕೆಯುಳ್ಳವು. ಚೆಂಡೆ, ಜಾಗಟೆಗಳೂ ಅಲ್ಲಿಂದಲೆ
ಬಂದುವು. ನಾವು 'ತೆರೆಪರ್‌ಪಾಟ್' ಎಂದು ಕರೆಯುತ್ತಿರುವ ಕಥಾಪ್ರಾ
ರಂಭದ ವೇಷಗಳ ಪ್ರವೇಶಕ್ರಮವಿಶೇಷಕ್ಕೆ ಕಥಕಳಿಯಲ್ಲಿ 'ತಿರಪುರಪ್ಪಾ
ಟ್' ಎಂದೇ ಹೆಸರು. ವೇಷಗಳು ತೆರೆ (ಪರದೆ)ಯೊಳಗಿಂದ ರಂಗಕ್ಕೆ
ಹೊರಡುವ ನೃತ್ತಕ್ರಮ ಎಂಬರ್ಥದ ಈ ಹೆಸರು ನಮ್ಮಲ್ಲಿ ಅಪಭ್ರಂಶರೂಪ
ದಲ್ಲಿದೆ. ಬಣ್ಣದ ವೇಷದ ಕಿರೀಟಕ್ಕೆ ನಮ್ಮಲ್ಲಿ ಬೇರೆ ಹೆಸರಿಲ್ಲ; ಅಲ್ಲಿ
ರೂಢವಾದ 'ಕೇಶವರತ್ತಟ್ಟಿ' (ಕೇಶಭಾರ+ತಟ್ಟಿ) ಎಂದೇ ನಮ್ಮ ವ್ಯವಹಾರ.

ಹೀಗೆ ಒಂದೆರಡಲ್ಲ ಅನೇಕ ವಿಧದ ಪ್ರಯೋಗಪದ್ಧತಿಗಳನ್ನು ನಮ್ಮ ಯಕ್ಷಗಾನದಲ್ಲಿ ಬಳಕೆಗೆ ತಂದು ಬಹು ದೊಡ್ಡ ಸುಧಾರಣೆಯನ್ನು ಮಾಡಿದವನು ಪಾರ್ತಿಸುಬ್ಬನು. ಈ ಯಥಾರ್ಥವನ್ನೆ ಐತಿಹ್ಯಗಳು ಹೇಳುತ್ತಿವೆ. ಯಕ್ಷಗಾನದ ಮೂಲಪುರುಷನೆ ಪಾರ್ತಿಸುಬ್ಬನು ಎಂಬ ಹೇಳಿಕೆಯು ಪ್ರರೂಢವಾಗಿ ಬಂದಿರುವುದಕ್ಕೆ ಇದುವೆ ಕಾರಣ. ಹೀಗೆ ಸುಬ್ಬನು ಮಾಡಿದ ಸುಧಾರಣೆಯ ಕುರಿತು ನನ್ನ ಅಲ್ಪಮತಿಗೆ ತೋರಿದ ವಿವೇಚನೆಯನ್ನು ಸವಿಸ್ತರವಾಗಿ ಮುಂದೆ ಗ್ರಂಥದಲ್ಲಿ ನಿರೂಪಿಸುತ್ತೇನೆ.

ಆತನು ರಾಮಾಯಣ ಗ್ರಂಥರಚನೆಯ ಆದಿಯಲ್ಲಿ ಪ್ರತಿಜ್ಞಾರೂಪವಾಗಿ ಸೂಚಿಸಿರುವ 'ಬತ್ತೀಸಾಕೃತಿ ತಾಳರಾಗ ವಿಧದಿಂ ರಾಮಾಯಣಂ ಪೇಳ್ವೆದ' ಎಂಬ ವಾಕ್ಯವು ಮಹತ್ವವುಳ್ಳುದು. ಆ ಬತ್ತೀಸರಾಗಗಳಾವುವು, ತಾಳ ರಾಗ ವ್ಯವಸ್ಥೆ ಎಂದರೇನು, ಗಾನ ಕ್ರಮದಲ್ಲಿ ಆತನು ಮಾಡಿದ ಚಿಕಿತ್ಸೆ ಏನು, ಆತನ ಪೂರ್ವಕಾಲದ ಯಕ್ಷಗಾನದ ಸ್ವರೂಪವು ಹೇಗಿತ್ತು, ಉತ್ತರ ಕಾಲದಲ್ಲಿ ಏನೇನು ಹೊಸ ಕೃಷಿಯಾಯಿತು ಎಂಬಿತ್ಯಾದಿ ವಿಮರ್ಶೆಯು ಯಕ್ಷಗಾನದ ಹುಟ್ಟು ಪೂರ್ವೋತ್ತರ ವಿಚಾರಕ್ಕೆ ಸಂಬಂಧಿಸಿದುದಾಗಿ ಪ್ರತ್ಯೇಕ ಸಂಶೋಧನಾತ್ಮಕ ಗ್ರಂಥಕ್ಕೆ ಪರ್ಯಾಪ್ತವಾದ ವಿಷಯವಾಗಬಲ್ಲುದು. ಪ್ರಕೃತ ಒಂದೇ ಮಾತಿನಿಂದ ಹೇಳುವುದಾದರೆ ಆಂಧ್ರದಲ್ಲಿ ಕೂಚಿಪುಡಿಯ ಸಿದ್ಧೇಂದ್ರಯತಿ ಮತ್ತು ಕೇರಳದಲ್ಲಿ ಕೊಟ್ಟಾರಕರದ ಮಹಾರಾಜ (ವಂಚಿಧರಾವರ) ಇವರಂತೆ ನಮ್ಮ ಯಕ್ಷಗಾನದಲ್ಲಿ ಹೊಸ ಜೀವ ಕಳೆಯನ್ನು ತುಂಬಿ ಬಲು ದೊಡ್ಡ ಸುಧಾರಣೆಯನ್ನು ಮಾಡಿದ ಮಹಾವ್ಯಕ್ತಿ ಪಾರ್ತಿಸುಬ್ಬನು. ಅವನ ಹೆಸರು ಅಳಿಯದು. ಇದೇ ಮೇಲೆ ಹೇಳಿದ ರಾಮಾಯಣಾರಂಭದ ಆ ಪದ್ಯದಲ್ಲಿರುವ 'ಪಾರ್ವತೀ ನಂದನ' ಎಂಬ ಪದವು ಸೃಷ್ಟನೆಯಾಗಿರಬಹುದೆ? ಎಂಬಂತಹ ಶಂಕೆ ಏನಾದರೂ ಇದ್ದರೆ ಈಗ ನಿಮ್ಮ ಮುಂದಿಟ್ಟಿರುವ ಈ ಹಳೆಯ ಓಲೆ ಪ್ರತಿಯಲ್ಲಿರುವ ಆ ಪದ್ಯವನ್ನು ನೋಡಿ ಸಮಾಧಾನ ತಂದುಕೊಳ್ಳಬಹುದು. ಇದರಲ್ಲಿ 'ಈ ಪಾರ್ವತೀ ನಂದನಂ' ಎಂದು ಸುಸ್ಪಷ್ಟವಾಗಿದೆ.

ಇನ್ನೀಗ ಪ್ರತ್ಯಕ್ಷ ಉದಾಹರಣೆಗಾಗಿ ಮಲೆಯಾಳ 'ರಾಮನಾಟ' ಮತ್ತು ಪಾರ್ತಿಸುಬ್ಬನ ರಾಮಾಯಣ ಪ್ರಬಂಧಗಳ ಕೆಲವು ಪದ್ಯಗಳನ್ನು ಪ್ರತ್ಯನಂತರಾನುಕ್ರಮದಲ್ಲಿ ಓದಿ ಹೇಳುತ್ತೇನೆ:—

ಕೊಟ್ಟಾರಕರರ ರಾಮಾಯಣವು ಪುತ್ರಕಾಮೇಷ್ಟಿ, ಸೀತಾಸ್ವಂ
ವರಂ, ವಿಚ್ಛಿನ್ನಾಭಿಷೇಕಂ, ಖರವಧಂ, ವಾಲಿವಧಂ, ತೋರಣಯುದ
ಸೇತುಬಂಧಂ, ಯುದ್ಧಂ ಎಂಬ ಎಂಟು ಸಂಧಿಗಳಲ್ಲಿದೆ. ಸುಬ್ಬನ ರಾ
ಯಣವೂ ಪುತ್ರಕಾಮೇಷ್ಟಿ, ಸೀತಾ ಸ್ವಯಂವರ, ಪಟ್ಟಾಭಿಷೇಕ, ಪಂಚ
—ವಾಲಿಸಂಹಾರ, ಚೂಡಾಮಣಿ, ಸೇತುಬಂಧ, ಅಂಗದ ಸಂಧಾನ, ಕು
ಕರ್ಣಾದಿ ಕಾಳಗ ಎಂಬ ಎಂಟು ಸಂಧಿಗಳಲ್ಲಿದೆ. ಉಡುಪಿ ಪ್ರೆಸ್ಸಿನಲ್ಲಿ
ಅಚ್ಚಾಗಿರುವ ಕಣ್ವಪುರ ಕೃಷ್ಣನ ಅಂಕಿತವೂ ಇರುವ ಪಾರ್ತಿಸುಬ
ಪುತ್ರಕಾಮೇಷ್ಟಿ—ಸೀತಾಸ್ವಯಂವರದ ಪ್ರತಿಯನ್ನು ಶ್ರೀ। ಕಾರಂತ
ಏಕೆ ಹೆಸರಿತ್ತದೆ ಬಿಟ್ಟರೆಂದು ಅರ್ಥವಾಗುವುದಿಲ್ಲ.

ಸೂ:—ಕೆಳಗೆ ಉದಾಹರಿಸುವ ಮಲೆಯಾಳ ಮತ್ತು ಕನ್ನಡ ಪದ್ಯ
ಆಯಾ ಸಂಖ್ಯೆಯ ಚರಣಗಳನ್ನು ಒಂದೊಂದನ್ನೇ ತುಲನೆ ಮಾಡಿ ನೋಡಿ

ಪುತ್ರಕಾಮೇಷ್ಟಿಯ ಕಥಾರಂಭದ ಮೊದಲ ಪದ್ಯ. ಮಕ್ಕಳಿಲ್ಲ
ದುಃಖದಿಂದಿದ್ದ ದಶರಥನಿಗೆ ವಸಿಷ್ಠ ಮುನಿಯು ಯಜ್ಞವನ್ನು ಮಾಡೆಂ
ಉಪದೇಶಿಸುವುದು.

ಝಂಪ—ಮುನಿವರ ತ । ಪೋನಿಧೇ । ಮಹಿತಚರಿ । ತ ॥ ಪಲ್ಲ ॥
ಸರಸಿಜ ಭ । ವಾತ್ಮಜ । ಮದ್ಗುರೋ । ಸಾದರಂ ।
ವಿರವಿಲಡಿ । ಯನುಡೆ । ವಾಕ್ಕುಗಳ್ । ನೀ ಕೇಳ್ಕ ॥ ೧ ॥
ವದಮುಮ ಮ । ಹೀಪತೇ । ನಿನ್ಮನೋ । ರಥಮಯೇ ।
ತ್ರಿದಶವರ । ಸಮವೀರ್ಯ । ದಶರಥ ಮ । ಹಾತ್ಮನ್ ॥ ೨ ॥
ಪುತ್ರರಿ । ಲ್ಲಾಯ್ಕಯಾ । ಲತ್ತಲ್ ಮಮ । ಮಾನಸೇ ।
ಎತ್ತುನ್ನ । ರಿಂಞಿಞಾ । ನೋರ್ತನೀ । ವಣ್ಣಂ ॥ ೩ ॥
ಅಶ್ವಮೇ । ಧಂಕೊಂಡು । ದೇವರ್ಕ । ಳೆ ಇನಿಞಾನ್ ।
ನಿಶ್ಚಯಂ । ಪ್ರೀತರಾಯ್ । ಚೆಯ್ದಿಡೆಣ । ಮಲ್ಲೊ ॥ ೪ ॥
ಕರುದಿನೇನ್ । ಕಾರ್ಯಮಿದಿ । ಧರಣಿಪಶಿ । ಖಾಮಣೇ ।
ವಿರವಿನೊಡು । ಕೊಪ್ಪುಕಳುಂ । ಕೂಡಿಡುಕ । ವೀರ ॥ ೫ ॥
ಮುಂಚತುರ । ಗಂ ಪ್ರಭೋ । ದೀಕ್ಷಿಕ್ಕ । ಸತ್ವರಂ ।
ಚಂಚಲಾ । ಕ್ಷಿಕಳೋಡು । ಕೂಡೆ ಅಧು । ನಾ ॥ ೬ ॥

ಝಂಪೆತಾಳ – ವರಮುನೀ । ಶ್ವರದೇವ । ಪರಮಗುರು । ವೇ...॥ ಪಲ್ಲ ॥

ಪರಮೇಷ್ಠಿ । ಯಕುವರ । ಎನ್ನರ । ಕ್ಷಿಸುತಂದೆ ।
ಕರವ ಮುಗಿ । ಯುವೆನೆನ್ನ । ಮಾತನೀ । ಕೇಳು ॥ ೧ ॥
ಹೇಳೆನ್ನ । ಭೂಪಾಲ । ನಿನ್ನ ಮನ । ದಿರವಸುರ ।
ಪಾಲನಿಗೆ । ಸಮಧೀರ । ಮೂಲೋಕ । ತಿಲಕ ॥ ೨ ॥
ಮಕ್ಕಳಿ । ಲ್ಲದರಿಂದ । ಮಾನಸದೊ । ಳಿಂದುನಾ ।
ಕಕ್ಕುಲಿತೆ । ಗೊಳುತಬಲು । ದುಃಖಿಸುವೆ । ನಯ್ಯ ॥ ೩ ॥
ಅಶ್ವಮೇ । ಧವ ರಚಿಸಿ । ಅಮರಕುಲ । ಗಳಿಗೆಲ್ಲ ।
ಆಶ್ಚರ್ಯ । ಮಾಡಿದರೆ । ಆಗದೇ । ನಯ್ಯ ॥ ೪ ॥
ಅರಿತೆನಿ । ನ್ನಯಪರಿಯ । ಧರಣಿಪಾ । ಲಾಗ್ರಣಿಯೆ ।
ತರಿಸುಬೇ । ಕಾದುದನು । ಮಾಡುಯ । ಜ್ಞವನು ॥ ೫ ॥
ತುರಗಮಂ । ಬಿಡುನೃಪತಿ । ದೀಕ್ಷೆಯನು । ಆಚರಿಸು ।
ಹರಿಣಾಕ್ಷಿ । ಯರು ಯುಕ್ತ । ನಾಗಿ ತೊಡ । ಗಯ್ಯ ॥ ೬ ॥

ಸಾವೇರಿ—ಚೆಂಬಡ—(ಸಂಗೀತ ಶಾಸ್ತ್ರ ಗ್ರಂಥಗಳಲ್ಲಿ ಹೇಳಿರುವ 'ಝೋಂಪಡ' ಎಂಬ ಹೆಸರಿನ ಅಪಭ್ರಂಶ ರೂಪ ರಾಮನಾಟದಲ್ಲಿ ಏಕತಾಳ ಆದಿತಾಳ ಎರಡಕ್ಕೂ 'ಚೆಂಬಡ' ಎಂಬೊಂದೇ ಹೆಸರಿದೆ).

ಭೂಪಾಲಮಣೇ । ಕೇಟ್ಟಿಡುಕ ನೀ । ದೇವಮುನಿ ಚೊ । ಲ್ವದು
ಇಞಾನ್ ಚೊಲ್ವನ್ ।
ಸೂರ್ಯಾನ್ವಯಮಣಿ । ಉಳನುಂ ದಶರಥನ್ । ಧರಣಿಯೆ ರಕ್ಷಿ ।
ಚ್ಚಾಳುಂಕಾಲಂ ॥ ೧ ॥
ಸುತರಿಲ್ಲಾ ಇಞಾಲ್ । ವೈಭಾಂಡಕ ಮುನಿ । ಸುತಕಾಮೇಷ್ಟಿ ।
ಚೆಯ್ದಿಡು ಮೆನ್ನಾನ್ ।
ಸುತರುಂಡಾಕುಂ । ಎನ್ನರುಳಿ ಮುನಿ । ಅದಿನಾಲವನೆ । ವರುತ್ತೀ
ಡೇಣಾಂ ॥ ೨ ॥

ಸಾವೇರಿ—ಏಕತಾಳ:—

ಭೂಪಾಲಾಗ್ರಣಿ । ಕೇಳಿದೆಯಾ ನೀ । ದೇವಮುನಿಯುತಾ । ಪೇಳಿದ
ಹದನಂ ।

ಸೂರ್ಯಾನ್ವಯದೊಳು । ಜನಿಸಿದ ದಶರಥ । ಧಾರಿಣಿ ಪಾಲಿಸ
ವಾಸಮಯದೊಳಂ ॥
ಸುತ ಹೀನರು ವಿ । ಭಾಂಡಕ ಮುನಿಯ । ಸುತನಿಂ ಮಖವನ
ಮಾಡಿದರಿಂ
ಸುತರಾಗುವರದ । ರಿಂದಾತನನೀ । ಜತನದಿಕರೆಸೆನ । ಲವನಿಂತೆಂ
॥

ವೃತ್ತ

ಏವಂ ಪರಂಞಾ ನಡಕೊಂಡು ಭುಜಂಗ ಶಾಯಿಾ ।
ಮೋದಂಲಭಿಚ್ಛ ವಿಬುಧಾ ನಿತರಾಂ ಹೃದಂತೇ ।
ವೈಭಾಂಡಕಸ್ತದನು ಪಂಕ್ತಿರಥಂ ನರೇಂದ್ರಂ ।
ವೇಗೇನ ಪುಕ್ಕ್ಯ ಕುತುಕತ್ತೊಡುವಾಚ ವಾಚಂ ॥

ವೃತ್ತ॥

ಇಂತಿಂದ್ರಾದ್ಯರಿಗೆಂದು ಶೇಷಶಯನಂ ಪಕ್ಷೀಂದ್ರನನ್ನೇರುತ ।
ಸಂತೋಷಾಧಿಕನಾಗಿ ಬಂದು ನಿಲಲುಂ ಸದ್ಯಾಗಸಾವಿಾಪ್ಯದಿ ।
ಕಾಂತಾವರ್ಗವ ಕೂಡಿಕೊಂಡು ಮಖವಂ ಮಾಡುತ್ತ ಭೂಪಾಲಕಂ
ನಿಂತಾ ಮಾತ್ರದಿ ಋಷ್ಯ ಶೃಂಗಮುನಿಪಂ ಪೇಳ್ದಂ ಸುಮಾಂಗಲ್ಯದಿ ।

ಮೋಹನ – ಚೆಂಬಡ:

ನೃಪತೇಮ । ಹಾಭಾಗ । ದಶರಥ । ನೃಪತೇ ॥ ಪಲ್ಲವಿ ॥
ಪುತ್ರಕಾ । ಮೇಷ್ಟಿ ಚೆ । ಯ್ದುಕೊಂಡಿ । ದಾಸೀಂ ।
ಅತ್ರನಿ । ನ್ಮನೋರಥಂ । ಸಾಧಿಕ್ಕ್ಯ । ಮಲ್ಲೊ ॥
ಪುತ್ರರ್ ನಾ। ಲುಪೇರುಂಡಾ । ಮಿನಿನಿನ । ಕ್ಕಡನೆ ।
ಚಿತ್ತಪೀ । ಡಯೆನ್ನಿಯೆ । ಸ್ವೈರಮಾಯ್ । ಬಾಳಾಂ ॥ ೧ ॥

ಬಿಬಾಸು – ಏಕತಾಳ:

ನೃಪತೇಮ । ಹಾಭಾಗ । ದಶರಥ । ನೃಪತೇ ॥ ಪಲ್ಲ ॥
ಪುತ್ರ ಕಾ । ಮೇಷ್ಟಿಯ । ನೀನುಮಾ । ಡಿದರಿಂದ ।
ಇತ್ತ ನಿ । ನ್ನಯಮನೋ । ರಥಸಿದ್ಧಿ । ಸೀತು ।

ಪುತ್ರರು । ನಾಲ್ವರು । ದಿಸುವರು । ಲಾಲಿಸು ।
ಚಿತ್ತಚಂ । ಚಲಬಿಟ್ಟು । ಸುಖವಾಗಿ । ಬಾಳು ॥ ೧ ॥

—ದಶರಥನು ಮಡದಿಯರಿಗೆ ಪಾಯಸವನ್ನು ಕೊಡುವುದು:—

ಭೈರವಿ—ಚೆಂಬಡ:

ಫುಲ್ಲಲೋಚ । ನ ಮಾರ್ವಮೌಲೇ । ವಲ್ಲಭೆ ಕೌ । ಸಲ್ಯೆ ।
ಕಲ್ಯಾಣಿ ಪಾ । ಯಸಮಿದು । ಪುತ್ರಾರ್ಥಂಗ್ರ । ಹಿಕ್ಕು ॥ ೧ ॥
ಪುತ್ರರುಂಡಾ । ವಾನಾಯಿದು । ಸುಮುಖಿಸೌ । ಮಿತ್ರೆ ।
ಚಿತ್ರತರಂ । ಪಾಯಸಂಗ್ರ । ಹಿಕ್ಕನೀಯುಂ । ಬಾಲೆ ॥ ೨ ॥
ಪೃಥ್ವೀಪಾಲ । ಶಿರೋಮಣೇ । ಕೃತ್ತಾರಾದೆ । ಕಾಂತ ।
ಚಿತ್ತದಯಿತ । ಹಸ್ತೇಮಮ । ತನ್ನಿಡುಕ । ವೀರ ॥ ೩ ॥

ಕಾಂಭೋಜಿ—ಏಕತಾಳ:

ಫುಲ್ಲಲೋಚ । ನೆ ಕೌಸಲ್ಯೆ । ಮೆಲ್ಲನವ । ಧರಿಸೆ ।
ಕಲ್ಯಾಣಿ ಪಾ । ಯಸಮಿದು । ನಲ್ಲೆಪರಿ । ಗ್ರಹಿಸೆ ॥ ೧ ॥
ಪುತ್ರರುದಿ । ಸುವರಿಂದು ಸೌ । ಮಿತ್ರೆ ಬಾರೆ । ಬೇಗ ।
ಚಿತ್ರಪಾಯ । ಸವ ಕೊಳ್ಳೆ । ಪುತ್ರಾರ್ಥಿನೀ । ನೀಗ ॥ ೨ ॥
ಪೃಥ್ವಿಪಾಲ । ಶಿರೋಮಣಿಯೆ । ಚಿತ್ತಜಸ್ವ । ರೂಪ ।
ಉತ್ತಮಾಂಶ । ವನ್ನು ಕೊಡಿಸೊ । ಮಿತ್ರವಂಶ । ದೀಪ ॥ ೩ ॥

ಶ್ರೀ ರಾಮ ಜನನ.

ವೃತ್ತ:

ಭಕ್ತನ್ ಪಂಕ್ತಿರಥನ್ನು ಚಿತ್ತಕುತುಕಂ ಲೋಕೈಕ
ರಕ್ಷಾರ್ಥ ಮಾಯ್—
ಚಿತ್ರಂವನ್ನು ಜನಿಚ್ಚು ಕೋಸಲ ಮಹಾರಾಜಾತ್ಮಜಾಯಾಂಹರಿಃ ॥

ವೃತ್ತ:

ದೇಶಾಧೀಶ್ವರನಾದ ಪಂಕ್ತಿರಥನಿಂ ಕೌಸಲ್ಯ ಗರ್ಭಾಬ್ಧಿಯೊಳ್ ।
ಶ್ರೀ ಸರ್ವೇಶ್ವರ ಮೋದದಿಂದುದಿಸಿದಂ ಲೋಕೈಕ ರಕ್ಷಾಮಣಿ॥

ಸೀತಾ ಸ್ವಯಂವರದಲ್ಲಿ ದಶರಥವಿಶ್ವಾಮಿತ್ರರ ಸಂವಾದ.

ಚೆಂಬಡ:

ಮಾಮುನಿ । ಮಾರ್ಮುಡಿ । ಮಂಡನ । –ಜಯ ।
ಕುಶಿಕಾ । ನಂದಕರ । ಕೌಶಿಕಮು । ನೇ ॥ ೧
ಸಾಕೇತ । ಭೂಮಿ ನಿಂಡೆ । ಪಾದಸಂ । ಗಾಲಿನ್ನು ।
ಸಕಲಾಘ । ಹೀನವಾಯಿ । ವನ್ನುವ । ಲ್ಲೊ ॥ ೨
ಮುನ್ನಮಯ್ । ನೀನರದೇವ । ನೀನಲ್ಲೊಮು । ನೇ ।
ಪಿನ್ನೆ ತ । ಪಸ್ಸುಕೊಂಡು । ಋಷಿಯಾ । ಯಿ ॥ ೩
ಅರುಹೀಡ । ಣಂ ನಿಂಡೆ । ಯಭಿಲಾಷ । ಮೆನ್ನಾಲ್ ।
ತರುವಲ್ಲಾವಿ । ರಂಞು ಸಕು । ತುಕಮಿ । ಪ್ಪೋಳ್ ॥ ೪

ಏಕತಾಳ:

ಋಷಿತಿಲ । ಕಾಗ್ರಣಿ । ವಂದನಂ । –ಜಯ ।
ಕುಶಿಕನಂ । ದನವರ । ಕೌಶಿಕಮುಃ । ನಿ ॥ ೧ ॥
ಸಾಕೇತ । ಪುರನಿನ್ನ । ಪಾದ ಸಂಗ । ದಿ ।
ಸಕಲರ । ಘವ ಪರಿ । ಹರಿಸಿತ । ಲ್ಲ ॥ ೨ ॥
ಪೂರ್ವಜನ್ಮ । ದಿ ನೀ ನರ । ದೇವನ । ಲ್ಲೋ ।
ಸರ್ವೇಶ್ವ । ರನ ಭಜಿಸಿ । ಋಷಿಯಾ । ದೆ ॥ ೩ ॥
ಅರುಹಿಸು । ನಿನ್ನ ಮನ । ದಭಿಲಾಷೆಯ । ನು ।
ತರಿಸಿಕೊ । ಡುವೆನಯ್ಯ । ಹರುಷದಿಂ । ದ ॥ ೪ ॥

ಪಂಜಾರಿ (ರೂಪಕ):

ಅಜಸುತನಯ । ಕಲಿತವಿನಯ । ನಿರ್ಮಲಾಶ । ಯ ॥ ಪಲ್ಲವಿ ॥
ಹೃದಯತಳಿರಿ । ಲಧಿಕ । ಖೇದಂ । ಕರುದುವೇಂಡ ।
–ಭೂಮಿಪಾಲ ॥
ಸದಯಮಿವಿಡೆ । ಮುನಿಯೊಡಿನ್ನ । ಯಯ್ಯುರಾಮು । ನೆ ॥ ೧ ॥
ತನ್ನಿಡಾಮಿ । ದೆನ್ನುರಚ್ಚು । ಪಿನ್ನೆ ಇಲ್ಲ । ಎನ್ನುಚೊಲ್ಕಿಲ್ ।
ಧನ್ಯಶೀಲ । ಧರ್ಮದ್ರೋಹ । ವನ್ನುಪೋಮು । ಹೋ ॥ ೨ ॥

ತನಯುನೇಷ । ರಾಮುಚಂದ್ರ । ನತಿಕಿಶೋರ । ಮನುಜನಲ್ಲ ।
ಅರುಣವಂಶ । ತಿಲಕ ಬಾಲ । ತರಣಿಸದೃಶ । ಲಕ್ಷ್ಮಣ ।
ವಿರವಿನೋಡು । ರಾಮನೋಡು । ಕೂಡೆಪೋಕ । ನೀ ॥ ೩ ॥
ರಾಮುಲಕ್ಷ್ಮ। ಣರುಂಞಾನುಂ । ಪೋಗುನ್ನುನ್ನ । ಪ ॥

ರೂಪಕ:

ಅಜಕುಮಾರ । ಧೀರ ವೀರ । ಬಾಹು ವಿಕ್ರ । ಮ ॥ ಪಲ್ಲ ॥
ಸುಜನರಕ್ಷ । ಚಿಂತೆ ಬೇಡ । ಸೂರ್ಯವಂಶ । ಭೂಮಿಪಾಲ ।
ಭಜಕರಿಷ್ಟ । ನೀವ ರಾಮ । ನನ್ನು ಕಳುಹಿ । ಸೊ ॥ ೧ ॥
ಮುನ್ನ ಕೊಡುವೆ । ನೆಂದು ಹೇಳಿ । ಇನ್ನು ಇಲ್ಲ । ವೆಂದೆನ್ನಲು ।
ಧನ್ಯಶೀಲ । ಧರ್ಮದ್ರೋಹ । ಬರುವದಲ್ಲ । ಯ್ಯ ॥ ೨ ॥
ತನುಜನಾದ । ರಾಮಚಂದ್ರ । ಮನುಜನೆಂದು । ಭಾವಿಸದಿರು ।
ಅರುಣವಂಶ । ತಿಲಕ ಬಾಲ । ತರಣಿಸದೃಶ । ಲಕ್ಷ್ಮಣಾಂಕ ।
ಹಿರಿಯ ರಾಮ । ಚಂದ್ರನೊಡನೆ । ತೆರಳಬೇಕೆ । ಲೈ ॥ ೩ ॥
ರಾಜ ರಾಮ । ಲಕ್ಷ್ಮಣರನು। ಕೊಂಡು ಪೋಪೆ । ನೈ ॥

ಸಮಯಾವಕಾಶವು ಕಡಿಮೆಯಾದುದರಿಂದ ಮಧ್ಯದ ಪದ್ಯಗಳನ್ನು ಬಿಟ್ಟು ಮುಂದೆ ಸಾಗುತ್ತೇನೆ. ಧನುವೆತ್ತಿದ ಮೇಲೆ ದಶರಥನನ್ನು ಬರಿಸಿ ಜನಕರಾಯನು ಹೇಳುವ ಮಾತಿನ ಪದ್ಯ.—

ಚೆಂಬಡ:

ದಶರಥ । ಧರಣಿಪ । ತಿಲಕ । –ಜಯ ।
ದಿಶಿದಿಶಿ । ವಿಲಸಿತ । ಕೀರ್ತೇ ।
ವಿಶದ । ಗುಣಾಕರ । ವೀರ । –ಜಯ ।
ಕುಶಲ ನಿ । ವಾಸದ । ಯಾಳೋ ॥ ೧ ॥
ಮನಸಿಜ । ವೈರಿಶ । ರಾಸನಂ । –ತವ ।
ತನಯುನ । ಹೋ ಮುರಿ । ಚೆಯ್ತು ।
ತನಯಾ । ಮಯಿಮನು । ಸೀತಾಂ । –ತವ
ತನಯುನ್ । ರಾಮನ್ । ತರುವನ್ ॥ ೨ ॥

ಏಕತಾಳ:

ಕುಶಲವೆ । ದಶರಥ । ವೀರ । –ಕೇ ।
ಳಸಮು ಗು । ಣಾಢ್ಯ ಗ । ಭೀರ ॥
ಕುಸುಮಸಾ । ಯಕನಾ । ಕಾರ । –ಲಾ ।
ಲಿಸುವುದು । ಧರ್ಮೋ । ಧ್ಧಾರ ॥ ೧ ॥
ನಿನ್ನಸು । ತನುರಾಮ । ಬಂದ । –ಧನು
ವನ್ನು ಮು । ರಿದು ಅಲ್ಲಿ । ನಿಂದ ।
ಎನ್ನ ಮ । ಗಳ ಮುಡ । ದಿಂದ । –ಧಾರೆ ।
ಯನ್ನೆರೆ । ವೆನು ನೋ । ಡೆಂದ ॥ ೨ ॥

ಮುಂದಿನ ಪಟ್ಟಾಭಿಷೇಕ ಸಂಧಿಯು 'ಜಯಜಯ ಮ । ಹಾಮತೇ । ದಶರಥ ಮ । ಹೀಪತೇ' ಎಂದು ರಾಮನಾಟದಲ್ಲಿ ಪ್ರಾರಂಭವಾದರೆ ಸುಬ್ಬನ ಪ್ರಸಂಗದಲ್ಲಿ "ಜಯ ಜಯ ಮ । ಹೀಪತೇ । ದಶರಥ ನೃ । ಪಾಲ' ಎಂದು ಅದೇ ಪಲ್ಲವಿಯಿಂದ ಸುರುವಾಗುತ್ತದೆ ಆ ಮೇಲೆ ಪ್ರತಿ ಪದ್ಯವೂ ನೆರಳಿನಂತೆ ಹಿಂಬಾಲಿಸುತ್ತದೆ.

ವೃತ್ತ:

ಕೈಕಯಾಧೀಶ ಕನ್ಯಾ ಮಾನಸಂ ಮಂಥರಾಸಾ
ಸಾಕ ಮಕೋಪ ನೋಡೇ ನಿರ್ಮಮಂಥಾನುಕೂಲ್ಯಾತ್

ಕಂದ:

ಹೊಕ್ಕಳು ಹೃದಯವ ಮಾಯಾ
ರಕ್ಕಸಿ ಕದಡಿದಳು ಕೈಕೆಯಂತಃಕರಣಂ ।

ಮಂಥರೆಯು ಮಾಯದಿಂದ ಕೈಕೆಯ ಮನಸ್ಸನ್ನು ಹೊಕ್ಕು ಕದಡಿಸಿದಳೆಂಬುದು ವಾಲ್ಮೀಕಿ ರಾಮಾಯಣ ಅಥವಾ ತೊರವೆ ರಾಮಾಯಣಾದಿಗಳಲ್ಲಿಲ್ಲದ ವಿಷಯವೆಂಬುದನ್ನು ಗಮನಿಸಬೇಕು. ಅಲ್ಲಿ ಮಂಥರೆಯು ಕೈಕೆಯನ್ನು ಮಾತಿನಿಂದ ಜೈಸಿ ಒಲಿಸುತ್ತಾಳೆ. ಸಂಸ್ಕೃತ ಭೋಜಚಂಪುವಿನಲ್ಲಿ 'ಕೈಕೇಯ್ಯಾಃಸಾ ಹೃದಯಮುದಯಂ ಮಂಥರಾ ನಿರ್ಮಮಂಥ? ಎಂದು ಕಥಕಳಿಯಲ್ಲಿದ್ದಂತೆ ಇದೆ. ರಾಮನಾಟದ ಕರ್ತೃವು ಭೋಜಚಂಪುವನ್ನು ಅನೇಕ ಸಂದರ್ಭಗಳಲ್ಲಿ ಅನುಸರಿಸಿರುತ್ತಾನೆ.

ಚೆಂಬಡ:

ಸಖಿ ನೀ ಚೊ । ನ್ನದು ಕೇಟ್ಟ್ । ಸಕಲವು । ಮರಿಂಞು ಞಾನ್ ।
ಸಹಿಯಾಯಿ । ತೊಟ್ಟುಂತನ್ನೆ । ಸಂತತಂ ಚಿಂ ।
ತಿಕ್ಕುಂ ತೋರುಂ ॥ ೧ ॥
ಕಿಂತು ಕಾಂತನ್ । ಮುನ್ನ ತವ । ತನ್ನುವಲ್ಲೊ । ರಂಡುವರಂ ।
ಎನ್ನುದಿನ್ನು । ಖೇದಿಕ್ಕುನ್ನು । ಎನ್ನದಿನೇ । ಚೋದಿಚ್ಚಾಲ್ ॥ ೨ ॥

ಏಕತಾಳ:

ಸಖಿ ನೀ ಪೇ । ಳಿದ ಮಾತು । ಸಕಲವು । ಲೇಸಾಯ್ತು ।
ಯುಕುತಿ ಏ । ಸಿದಕಿನ್ನು । ಎನ್ನೊಳ್ ಪೇಳು । ಕಂಡುದನ್ನು ॥ ೧ ॥
ಹಿಂದೆ ಮೆಚ್ಚಿ । ನಿನಗೆ ಆ ನ । ರೇಂದ್ರ ಕೊಟ್ಟ । ಮಾತೆರಡ ।
ಇಂದು ಕೇಳು । ಕೊಟ್ಟ ಮೇಲೆ । ಮುಂದೆ ಕೇಳು ।
ಕಾರ್ಯಬಾಲೆ ॥ ೨ ॥

ಪಾರ್ತಿಸುಬ್ಬನ ಪೂರ್ವ ಕಾಲದ ಯಕ್ಷಗಾನ ಕೃತಿಗಳಲ್ಲಿ ಕಾಣದಿರುವ ಹಲವು ಪದ್ಯ ಬಂಧಗಳನ್ನು ಸುಬ್ಬನು ಕಥಕಳಿಯಿಂದ ಆಯ್ದುಕೊಂಡಿದ್ದಾನೆ. ಮುಂದಿನ ಎರಡು ಪದ್ಯಗಳು ಅಂಥವು. ಕಾಡಿನಲ್ಲಿ ಸೀತೆಯು ಮುನಿ ಪತ್ನಿಯರಿಂದ ರಾಕ್ಷಸರ ಸುದ್ದಿಯನ್ನು ಕೇಳಿ ಭಯದಿಂದ ರಾಮನೊಡನೆ ಹೇಳುವ ಪದ್ಯವೊಂದು ಹೀಗಿದೆ—

ಕಾಂಭೋಜಿ—ಚೆಂಬಡ:

ರಾತ್ರಿಂಚರ । ನಾಥನಾಯೊ । ರುತ್ತನುಂಡ । ವನುತನ್ನೆ ।
ಮಸ್ತಕಂಗ । ಳುಂ ಪತ್ತುಂಡು । ಪೋಲ್—ಅ। ತ್ರಯುಮಲ್ಲ ।
ಹಸ್ತಂಗಳಿ ।ರುಪತ್ತುಂಡು । ಪೋಲ್ — ಅ । ವನ್ ಲೋಕಾನಾಂ ।
ಅತ್ತಲ್ ವರು । ತ್ತುನ್ನು ಪೋಲ್ ಸ । ದಾ—ಈ । ವಿಪಿನೇ ।
ಆವಾಸಂ । ದುಷ್ಕರಂ ಪ । ರಂ ॥ ೧ ॥

ಕಾಂಭೋಜಿ — ಆದಿತಾಳ:

ರಾತ್ರಿಂಚರ । ನಾಥನಾಗಿ । ಮತ್ತೊಬ್ಬ ಖಳ । ನಿರುವಂತೆ ।
ಮಸ್ತಕಗ । ಳು ಹತ್ತುಂಟಂ । ತೆ—ಆ । ಮೇಲವಗೆ ।

ಹಸ್ತಗಳಿ । ಪ್ಪತ್ತು ಉಂಟಂ । ತೆ—ಹೆ । ಣ್ಣುಗಳೆಂಬ ।
ಪಿತ್ತ ತಲೆ । ಗೇರಿಹುದಂ । ತೆ— ಈ । ವಿಪಿನದೊ ।
ಳಿರುವದು । ಕಷ್ಟ ರಾಘ । ವ ॥ ೧ ॥

ವಾಲಿಸಂಹಾರ ಸಂಧಿಯಲ್ಲಿ ಸುಗ್ರೀವನು ರಾಮನಿಗೆ ಹೇಳುವ ಮಾತು.

ಅಡಂದ (ಅಷ್ಟತಾಳ):

ಇಕ್ಷ್ವಾಕು । ವಂಶವು । ಣಿಕಳ್ ವು । ಹೀಪಾಲರ್ ।
ಪೂಜ್ಯರ । ಲ್ಲೋಭವ । ತಾ ಸಮಂ ।
ಇಕ್ಷ್ವ ಶ । ರಾಸನ । ತುಲ್ಯ ನಿ । ನ್ನೋಡುಳ್ಳ ।
ಸಖ್ಯತ್ತೆ । ವಾಂಛಿಕ್ಕು । ನ್ನು ।
ರಾಮ ಮ । ನೋಹರ । ರಾಮ ಮ । ನೋಹರ ।
ಶ್ಯಾಮಳ । ದೇಹರು । ಚೇಧೀರ ॥ ೧ ॥

ಅಷ್ಟತಾಳ:

ಇಕ್ಷ್ವಾಕು । ವಂಶ ಭೂ । ಪಾಲರು । ಧರ್ಮ ಸಂ ।
ರಕ್ಷಕ । ರಧಿಕರ । ಲ್ಲೈ ।
ಶಿಕ್ಷೆಯೊಂ । ದುಂಟೆನ । ಗದರ ನೀ । ತಿಳಿದೆನ್ನ ।
ಪೇಕ್ಷೆಯ । ಸಲಿಸಬೇ । ಕು ॥
ರಾಮ ಹ । ರೇ ರಾಮ । ರಾಮ ಹ । ರೇ ರಾಮ ।
ಕೋಮಲ । ರೂಪ ಹ । ರೇ ॥

ವಾಲಿ ಸುಗ್ರೀವರ ಪ್ರಥಮ ಯುದ್ಧದಲ್ಲಿ ರಾಮನು ಶರಪ್ರಯೋಗವನ್ನು ಮಾಡದಿದ್ದುದಕ್ಕಾಗಿ ಸುಗ್ರೀವನು ಹಳಿಯುವ ಮಾತು ಮತ್ತು ರಾಮನ ಉತ್ತರ.

ಪಂಜಾರಿ (ರೂಪಕ):

ವಿಶ್ವನಾಯ । ಕಾ— । ನಿಂಡೆ ವಾಕ್ಕಿ । ನೆ— ।
ವಿಶ್ವಸಿಚ್ಚು । ಞಾನ್— । ಪೋರಿನೆಯ್ಕು । ಯಾಲ್— ॥ ೧ ॥
ಎನ್ನೆ ವೈರಿ । ತನ್— । ಮುನ್ನಿಲಾಕ್ಕಿ । ನೀ - ।
ನಿನ್ನು ಸ್ವೈರ । ಮಾಯ್— । ನನ್ನುನನ್ನ । ಹೋ— ॥ ೨ ॥

— — — — — — — —

ವಾಲಿತನ್ನೆ । ಯುಂ – । ನಿನ್ನೆಯುಂ ಕಂ । ಡಾಲ್ — ।
ಆಳು ಭೇದ । ವಾಯ್ । ತೋನ್ನುನಿಲ್ಲ । ಹೋ— ॥ ೩ ॥

ರೂಪಕ:

ವಿಶ್ವನಾಯ । ಕಾ— । ನಿನ್ನ ವಾಕ್ಯ । ವ— ।
ವಿಶ್ವಾಸವೆಂ । ದು । ನಂಬಿದೆನಿಂ । ದು— ॥ ೧ ॥
ಎನ್ನ ವೈರಿ । ಯು— । ಮುಂದೆ ಮಾಡಿ । ನೀ— ।
ಕಣ್ಣಿನಲ್ಲಿ । ಯೇ— । ಕಂಡೆ ಚೆನ್ನ । ನೆ— ॥ ೨ ॥

— — — — — — — —

ವಾಲಿಯು ನಿ । ನ್ನ— । ಕಾಣಲಿರ್ವ । ರ— ।
ಆಳುಭೇದ । ವ— । ಅರಿಯದಾದೆ । ನು— ॥ ೩ ॥

ಹೀಗೆ ಬಿಂಬಪ್ರತಿಬಿಂಬಭಾವವಿರುವ ನೂರಾರು ಪದ್ಯಗಳಿವೆ. ಎಲ್ಲವನ್ನೂ ಉದಾಹರಿಸುವುದಕ್ಕೆ ಇದು ಸಮಯವಲ್ಲ. ಯಥಾವಕಾಶ ನೋಡೋಣ. ಪ್ರಕೃತ ಶೂರ್ಪಣಖಿಯ ಕರ್ಣನಾಸಕುಚಚ್ಛೇದನವು ಕಥಕಳಿಯಲ್ಲಿರುವುದಕ್ಕೆ ರಾಮನಾಟದ ಖರವಧಂ ಸಂಧಿಯ ಈ ಒಂದು ಪದ್ಯವನ್ನು ಪರಿಭಾವಿಸಿರಿ.

ವೃತ್ತಂ:

ಶ್ರೀ ರಾಮನೋಡು ಜನಕಾತ್ಮಜ ಚೊಲ್ಲುಮಪ್ಪೋಳ್ ।
ವೀರೇಣ ಸಾ ರಘುವರಸ್ಯ ಸಹೋದರೇಣ ।
ಆರಾನ್ನಿಕೃತ್ತ ಘನಕರ್ಣಕುಚಾತಿ ಘೋರಾ ।
ಶ್ರೀರಾಘವಂ ನಿರನುನಾಸಿಕ ಮೇತ್ಯ ಚೊನ್ನಾಳ್ ॥

ಪಾರ್ತಿಸುಬ್ಬನ ಪಂಚವಟಿ ಪ್ರಸಂಗದಲ್ಲಿ ಈ ಪದ್ಯದಿಂದ ಅದು ಸ್ಪಷ್ಟವಾಗುತ್ತದಷ್ಟೆ.

‘ಇತ್ತ ಬಾರೆಂದಸುರೆ ಹಸ್ತವ
ನೆತ್ತಿ ತವಕದೊಳೆರಡು ಮೊಲೆಗಳ

ನೊತ್ತಿ ಎಳೆದಾ ಖಡುಗದಿಂದಲೆ ಕತ್ತರಿಸಿದ ;
ಕೆತ್ತಿದನು ನಾಸಿಕವ . . . .

ಕೊಟ್ಟಾರಕರದ ರಾಜನು ಈ ಕುಚಚ್ಛೇದನ ಪ್ರಕರಣವನ್ನು ಕಂಬ ರಾಮಾಯಣದಿಂದ ಆಯ್ದುಕೊಂಡನೆಂದು ಕೇರಳದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಇನ್ನು ಶ್ರೀ। ಕಾರಂತರು ಬ್ರಹ್ಮಾವರದವನೆಂದು ಹೇಳುವ, ಅಡುವಳ್ಳಿಯ ವೆಂಕಾರ್ಯನ ಮಗ ಸುಬ್ಬನು ಈ ರಾಮಾಯಣ ಐರಾವತ ಮೊದಲಾದ ಪ್ರಸಂಗಗಳನ್ನು ರಚಿಸಿದನೆಂಬ ಶ್ರೀಯುತರ ಕಲ್ಪನೆಯು ಅತ್ಯಂತ ದುರೂಹ್ಯವೆಂಬುದು ಇದೊಂದು ನಿದರ್ಶನದಿಂದ ಸುವೇದ್ಯವಾಗುವುದು.– ವೆಂಕಾರ್ಯನ ಮಗ ಸುಬ್ಬನು ಕೇವಲ ಕಂದ ಪದ್ಯಗಳಲ್ಲಿಯೆ ಹನುಮದ್ರಾಮಾಯಣವೆಂಬ ಬೃಹತ್ ಕಾವ್ಯವನ್ನು ಬರೆದ ಕವಿ. ಶುದ್ಧವಾದ ಕಂದ ಪದ್ಯಗಳನ್ನು ರಚಿಸುವುದರಲ್ಲಿ ಆತನು ಸಿದ್ಧಹಸ್ತನೆಂಬುದು ಸರ್ವಶ್ರುತ. ಪಾರ್ತಿಸುಬ್ಬನ ರಚನೆಗಳಲ್ಲಿ ಕಂದ ಪದ್ಯಗಳು ಅತಿ ವಿರಳ. ಇದ್ದುವು ಸಹ ಛಂದೋಭಂಗದಲ್ಲಿವೆ. ತನಗೆ ಕಂದ ಪದ್ಯಗಳನ್ನು ರಚಿಸುವುದಕ್ಕೆ ತಿಳಿಯುವುದಿಲ್ಲ ಎಂದು ಆತನು ತನ್ನ ಐರಾವತ ಪ್ರಸಂಗದ ಕೊನೆಗೆ ವಿನಯದಿಂದ ಹೇಳಿಕೊಂಡಿದ್ದಾನೆ. 'ಅರಿಯೆ ಲಕ್ಷಣ ಕಂದಪದ್ಯವಡಿಪ್ರಾಸು . . . ' ಎಂಬ ಆ ವಾರ್ಧಿಕ ಷಟ್ಪದಿಯುು ಅಚ್ಚಾದ 'ಐರಾವತ' ಪ್ರತಿಯಲ್ಲಿಯೂ ಇದೆಯಷ್ಟೆ! ಇಷ್ಟು ಮಾತ್ರ ಅಲ್ಲ ಹನುಮದ್ರಾಮಾಯಣದ ಕಥಾಭಾಗವು ಸಹ ರಾಮಾಯಣ ಪ್ರಸಂಗಗಳ ಕಥೆಯಿಂದ ಬಹುಧಾ ಭಿನ್ನವಾಗಿದೆ. ಶೂರ್ಪನಖಿಯ ಕುಚಚ್ಛೇದನವು ಅದರಲ್ಲಿಲ್ಲ. ವೆಂಕಾರ್ಯನ ಮಗ ಸುಬ್ಬನು ಬಸವಪ್ಪ ನಾಯಕನಿಂದ ರಾಜಮನ್ನಣೆ ಪಡೆದವನು. ಆಸ್ಥಾನ ಕವಿ ಎಂಬಿತ್ಯಾದಿ ಶ್ರೀ। ಕಾರಂತರ ಹೇಳಿಕೆಗಳು ಕೇವಲ ಕಲ್ಪಿತ. ಈ ಕುರಿತು ಕೂಲಂಕುಶ ವಿಮರ್ಶೆಯನ್ನು ನನ್ನ ಗ್ರಂಥದಲ್ಲಿ ನೋಡುವಿರಿ.

ಹೀಗೆ ಕೇರಳದ ಕಥಕಳಿಯ ವಿಧಾತನಾದ 'ವಂಚಿಕ್ಷ್ಮಾವರ ಬಾಲವೀರ ಕೇರಳವಿಭು' ಎಂಬ ಖ್ಯಾತಿಯುಳ್ಳ ಕೊಟ್ಟಾರಕರ ಮಹಾರಾಜನಿಂದ ರಚಿಸಲ್ಪಟ್ಟ ಕಥಕಳಿ ದೃಶ್ಯಪ್ರಯೋಗದ ಆದ್ಯ ಪ್ರಬಂಧವಾದ 'ರಾಮ

ನಾಟ'ವನ್ನು ಅನುಸರಿಸಿ ಪಾರ್ತಿಸುಬ್ಬನು ರಾಮಾಯಣ ಕೃತಿಗಳನ್ನು ರಚಿಸಿದನೆಂದು ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧವಾಗುತ್ತದೆ. ಇನ್ನೇಕೆ ಅನುಮಾನ? ಕಥಕಳಿಯ ಸೃಷ್ಟಿಕರ್ತನು ತನಗೆ ಮಾತ್ರ ಅಲ್ಲ ಕನ್ನಡ ಯಕ್ಷಗಾನಕ್ಕೇ ಗುರು ಎಂಬ ಭಕ್ತಿಭಾವದಿಂದ ಯಕ್ಷಗಾನ ಪ್ರಯೋಗಾರಂಭದ ಪೂರ್ವರಂಗ ವಿಧಿಯಲ್ಲಿ ಸರ್ವರೂ ಆತನಿಗೆ ವಂದನೆಯನ್ನು ಸಮರ್ಪಿಸಬೇಕೆಂದು ಪಾರ್ತಿಸುಬ್ಬನು ವಿಧಿಸಿದ್ದಾನೆ. ನೀವೆಲ್ಲರೂ ತಿಳಿದೆ ಇರುವಂತೆ ಸಭಾ ಲಕ್ಷಣದಲ್ಲಿರುವ 'ವಂಚಿತರಾ ವಂಚಿತನುಂ ವಂಚಿತ ಮಹಾಶೂರ,' 'ಬಾಲರಹೇ ವಂಶನುತ ಬಾಲಯಶೋಃಖ್ಯಾತ,' 'ವರದ ರಘುಕುಲಕಾಯವಾರಣಧ್ವಂಸಿವರ ವಂಚಿತನ್ ವೀರ ಕೇರಳ ಶುಭೋಃ ಸಹಿತ' ಇತ್ಯಾದಿ ಮಲೆಯಾಳ ಭಾಷೆಯಲ್ಲಿ ಪಾಠದೋಷದಿಂದ ಕಂಡು ಬರುತ್ತಿರುವ ಪದ್ಯಭಾಗಗಳ ಮೂಲವನ್ನು ರಾಮನಾಟದ ಆರಂಭದಲ್ಲಿ ಮತ್ತು ಅಂತ್ಯದಲ್ಲಿರುವ ಮಂಗಲ ಪದ್ಯಗಳಿಂದ ತಿಳಿದುಕೊಳ್ಳಬಹುದಾಗಿದೆ.

'ವಂಚಿಕ್ಷ್ಮಾವರವೀರ ಕೇರಳವಿಭೋಃ ರಾಜ್ಞಃ ಸ್ವಸೋಃ ಸೂನುನಾ' ಎಂದು ಕೊಟ್ಟಾರಕರ ಮಹಾರಾಜನು ರಾಮನಾಟದ ಆರಂಭದಲ್ಲಿ ಸ್ವವಿಷಯವಾಗಿ ಹೇಳಿಕೊಂಡ ಪದ್ಯವಿದೆ. ಕೊಟ್ಟಾರಕರ ರಾಜ್ಯಕ್ಕೆ 'ವಂಚಿಕ್ಷ್ಮಾ' 'ವಂಚಿಧರಾ' (ವಂಚಿದೇಶ) ಎಂಬುದು ಚರಿತ್ರಪ್ರಸಿದ್ಧವಾದ ಹೆಸರು.

'ಪಂಚಶರೋಃಪಮ ಸುಂದರನಿಜಗತಿ ವಂಚಿತ ವರಗಜರಾಗತಿಂ।
ವಂಚಿವೀರ ಕೇರಳ ಹೃದಯಾಂಬುಜ
ನಿವಾಸಲೋಲಪದಾಂಬುರುಹಂ।'

'ವಂಚಿಧರಾವರ ಬಾಲವೀರ ಕೇರಳ ಮಾನಸ ವಾಸಹರೇ'

ಎಂಬೀ ವಚನಗಳು ರಾಮನಾಟದ ಮಂಗಲ ಪದ್ಯಗಳಲ್ಲಿರುವಂಥವು. ಪ್ರತಿಯೊಬ್ಬ ಯಕ್ಷಗಾನ ಭಾಗವತನೂ ವೇಷಧಾರಿಯೂ ತಿಳಿದಿರುವಂತೆ ನಮ್ಮ ಯಕ್ಷಗಾನ ಸಭಾ ಲಕ್ಷಣದಲ್ಲಿ, ಪೂರ್ವರಂಗ ವಿಧಿಯ ಪ್ರಾರಂಭಕ್ಕೆ ತಪ್ಪದೆ ಹಾಡಬೇಕೆಂಬ ನಿಯಮವಿರುವ 'ಹರಿಹರ ಜಿತುಹರ ಅಮರ ಪೂಜಿತುರೇ ವಾಮನ ರೂಪ। ಏಕದಂತ ಚದುರೋಃಹಯತೇ ಲಂಬೋದರರೇ। (ಚಾರು ಚತುರ್ಭುಜ ಲಂಬೋದರರೇ) ವಾರಣ ಕಾರಣ

ನಾಗಾಭರಣ ಕಾಮಿತ ಫಲದಾಯಕ ಗಣನಾಥ—'ಎಂಬುದಾಗಿ ಯಕ್ಷಗಾ
ಸಭಾ ಲಕ್ಷಣದ ಅಚ್ಚಿನ ಪುಸ್ತಕಗಳಲ್ಲಿ ಅಪಪಾಠದಿಂದ ಕಾಣುವ ಪದ್ಯ
ಕಥಕಳಿಯ 'ತೋಡಯು'ದಲ್ಲಿ ಮೊದಲನೆಯ ವಿಘ್ನೇಶ ಸ್ತುತಿ ಪದ್ಯವ
ಆಗಿದೆ. ಕಥಕಳಿಪ್ರಸ್ಥಾನವು ತೊಡಗುವುದೆ ಈ ಪದ್ಯದಿಂದ. ಅದೆ
ನಿಯಮವು ಯಕ್ಷಗಾನದಲ್ಲಿಯೂ ತಪ್ಪದೆ ಪಾಲಿಸಲ್ಪಡಬೇಕೆಂದು ಪಾರ್ತಿ
ಸುಬ್ಬನು ವಿಧಿಸಿರುವಂತೆ ಇಂದಿನ ವರೆಗೆ ನಡೆದು ಬಂದಿರುವುದನ್ನೆಣಿಸಿದ
ನಮ್ಮ ಯಕ್ಷಗಾನವು ಪಾರ್ತಿಸುಬ್ಬನಿಗೂ ಕಥಕಳಿಗೂ ಅದೆಷ್ಟು ಋಣಿಯಾ
ಗಿದೆ ಎಂದು ಊಹಿಸಿಕೊಳ್ಳಬಹುದು. ಅಷ್ಟು ಮಾತ್ರ ಅಲ್ಲ ನಮ್ಮ ಬಾಲ
ಗೋಪಾಲರ ವೇಷ, ಕುಣಿತ ಆಗ ಹೇಳುವ ಪದ್ಯ, ಪ್ರಸಂಗ ಪೀಠಿಕೆಯಲ್ಲಿ
ಹಾಡುತ್ತಿರುವ 'ಹೋದೇವ ದೇವ' ಎಂಬ ಪದ್ಯ ಇತ್ಯಾದಿಗಳನ್ನೆಲ್ಲ ಕಥಕಳಿ
ಯಿಂದಲೆ ನಾವು ಕಲಿತುಕೊಂಡಿದ್ದೇವೆ. ಸಣ್ಣ ಪ್ರಾಯದವರು ತಲೆಗೆ ಪಕಡಿ
ಕಟ್ಟಿಕೊಂಡು ಕುಣಿಯುವ ಆ ವೇಷಗಳಿಗೆ 'ಕುಟ್ಟಿ ವೇಷ'ವೆಂದೂ 'ಬಾಲ
ಗೋಪಾಲ'ರೆಂದೂ ಕರೆಯುತ್ತಾರೆ ಕುಟ್ಟಿ ವೇಷವೆಂಬುದು ನಮ್ಮಲ್ಲಿ
'ಕಟ್ಟು ವೇಷ'ವೆಂದು ಅಪಭ್ರಂಶವಾಗಿದೆ. ಬಾಲಗೋಪಾಲರ ವೇಷವೆ
ನ್ನುವುದೂ ಅದನ್ನೆ. ಕಥಕಳಿಯಲ್ಲಿ 'ಜಯ ಬಾಲಗೋಪಾಲ ಜಯ
ಗೋಪಿಕಾಲೋಲ ಜಯ ಮೃದುಲಸುಕಪೋಲ ಜಯರುಚಿರಫಾಲ'
ಎಂಬ ಪದ್ಯದಿಂದ ಆ ವೇಷಗಳನ್ನು ಕುಣಿಸುವ ಪದ್ಧತಿ. ಅದರಿಂದಲಾಗಿ ಆ
ವೇಷಗಳಿಗೆ ಬಾಲಗೋಪಾಲರೆಂದೆ ಹೆಸರಾಯಿತು ಅಲ್ಲದೆ ರಾಮಕೃಷ್ಣ
ರೆಂಬ ಅರ್ಥದಲ್ಲಿ ಅಲ್ಲ,

ಇವೆಲ್ಲ ಪಾರ್ತಿ ಸುಬ್ಬನು ಕಥಕಳಿಯಿಂದ ನಮ್ಮ ಯಕ್ಷಗಾನಕ್ಕೆ ತಂದ ರೂಢಿ.

ಮೇಲೆ ಹೇಳಿದಂತೆ ನಮ್ಮ ಯಕ್ಷಗಾನ ಸಭಾ ಲಕ್ಷಣದಲ್ಲಿರುವ 'ಹರಿಹರಜಿತುಹರ.' ಎಂಬ ಆ ಪದ್ಯವು ಕಥಕಳಿಯ ತೋಡಯುದಲ್ಲಿ ಹೀಗಿದೆ:—

ಹರಿಹರ ವಿಧಿನುತ ಅಮರ ಪೂಜಿತ ಹೇ ವಾವನ ರೂಪ ।
ಏಕದಂತ ಚತುರಾದ್ಭುತ ಬಲ ಲಂಬೋದರ ರೇ ।
ಸಕಲ ಸಿದ್ಧಿ ಫಲದಾಯಕ ರೇ ರೇ ಪಾಶಾಂಕುಶಧರ ರಜನೀಶಧರ ರೇ ।
ವಾರಣಾನನ ನಾಗಾಭರಣ ಕಾಮಿತ ಫಲ ಸಿದ್ಧಕರೇ ॥''

ಇನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಸುಬ್ಬನ ಕರ್ತೃತ್ವಕ್ಕೆ ಸಾಕ್ಷ್ಯವಾದ ಎಷ್ಟೋ ವಿಷಯಗಳು ಆತನ ಕೃತಿಗಳಿಂದ ವ್ಯಕ್ತವಾಗುತ್ತವೆ. ರಾಮಾಯಣ ಪ್ರಬಂಧಗಳಲ್ಲದೆ ಕುಶಲವರ ಕಾಳಗ, ಐರಾವತ, ಬಾಲಲೀಲೆ ಎಂಬ ಪ್ರಸಂಗಗಳ ಆತನ ಕರ್ತೃಕತ್ವಕ್ಕೂ ನ್ಯಾಯವಾದ ಪ್ರಮಾಣವಿದೆ. ಐರಾವತ ಪ್ರಸಂಗವನ್ನು ಈಗ ತೋರಿಸಿರುವ ಆ ಮೂಡಪ್ಪದ ಪಟ್ಟಿಯಲ್ಲಿ ಕಾಣುವ ಅದೇ ಪಿಂಗಳ ಸಂವತ್ಸರದಲ್ಲಿ ರಚಿಸಿದುದೆಂಬುದು ಹಳೆಯ ಓಲೆ ಪ್ರತಿಯೊಂದರಿಂದ ನಿರ್ಣಯವಾಗುತ್ತದೆ. ಅದರಲ್ಲಿ ಆ ಆಟವು ಪ್ರಾರಂಭವಾಗುವುದಕ್ಕೆ ಪೂರ್ವಭಾವಿಯಾಗಿ ರಂಗಸ್ಥಳದಲ್ಲಿ ಗಜಗೌರೀ ವ್ರತದ ಪೂಜೆಯನ್ನು ಸಾಂಗವಾಗಿ ಮಾಡುವಂತೆ ವಿಧಿ ಇದೆ. 'ಗಜಗೌರೀ ವ್ರತ ಸಂಕಲ್ಪ ಪೂಜಾ ವಿಧಾನಾ' ಎಂದು ಪ್ರಾರಂಭವಾಗುವ ಸಂಕಲ್ಪ ಮಂತ್ರದಲ್ಲಿ...... ಮಮ ಸಂತಾನ ಸೌಭಾಗ್ಯ ಸಿದ್ಧ್ಯರ್ಥಂ......ಮಯಾಚರಿತ ಗೌರೀದೇವತಾಭ್ಯೋನಮಃ ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ......' ಇತ್ಯಾದಿ ವಾಕ್ಯಗಳಿಂದ ಆತನಿಗೆ ಪುತ್ರ ಸಂತಾನವಿದ್ದಿಲ್ಲವೆಂದು ಮುಂತಾಗಿರುವ ಐತಿಹ್ಯಗಳು ಯಥಾರ್ಥವೆಂದು ನಂಬಬಹುದಾಗಿದೆ. ಆ ಪ್ರಸಂಗದ ಕಥಾ ಭಾಗದಲ್ಲಿ ಅರ್ಜುನನು ಶ್ರೀ ಕೃಷ್ಣನನ್ನು ಕರೆತರಲು ದ್ವಾರಕಿಗೆ ಹೋಗಿ ಅಲ್ಲಿ ಕೃಷ್ಣನನ್ನು ಸ್ತುತಿ ಮಾಡುವ ಅಷ್ಟೋತರಶತ ಸ್ತುತಿ ವಾಕ್ಯಗಳಲ್ಲಿ ಕುಂಬಳೆಯ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಪಾಟಾಳಿಗಳು ಮಾಡುವ ಸ್ತುತಿ ವಾಕ್ಯಗಳೂ ಸೇರಿವೆ. ಆ ಪ್ರಸಂಗದ ಕೊನೆಯ ಭಾಗದಲ್ಲಿ ಕಥಾ ವಸ್ತುವಿನ ಅಂಗವಾಗಿಯೆ ಧರ್ಮರಾಯಾದಿಗಳು ಶ್ರೀ ಕೃಷ್ಣನನ್ನು ಪ್ರತ್ಯಕ್ಷ ಪೂಜಿಸಿ ಆತನಿಗೆ ಮಂಗಳಾರತಿ ಬೆಳಗುವ ಸಂದರ್ಭದಲ್ಲಿ ಹಾಡುವ 'ನೀಲ ಮೇಘಾಂಗನಿಗೆ ನಿಜ ಶರಣ ಸಂಗನಿಗೆ......ಬೇಡಿದೊರಗಳನೀವ ಕಣ್ವಪುರಿ ಕೃಷ್ಣನಿಗೆ' ಎಂಬ ಪದ್ಯವಿದೆ. ಇದು ಉಡುಪಿಯಲ್ಲಿ ಅಚ್ಚಾದ ಐರಾವತ ಪ್ರಸಂಗದಲ್ಲಿಯೂ ಇದೆ. ಇದೇ ಪದ್ಯವು ಅದೇ ಪ್ರೆಸ್ಸಿನಲ್ಲಿ ಅಚ್ಚಾಗಿರುವ ಪಾರಂ ಬಳ್ಳಿ ವಿಷ್ಣು ಕವಿಯಿಂದ ಅಜಪುರದ ಮಹಾಲಿಂಗನ ಅಂಕಿತದಲ್ಲಿ ರಚಿಸಲ್ಪಟ್ಟ ಇನ್ನೊಂದು ಬಾಲಲೀಲೆ ಪ್ರಸಂಗದ ಕೊನೆಯಲ್ಲಿ ಪ್ರತಿಕಾರರ ಅಥವಾ ಮುದ್ರಣ ಕರ್ತರ ಪ್ರಮಾದದಿಂದ ಸೇರಿ ಹೋಗಿದೆ. ಇಂತಹ ಪ್ರಮಾದಗಳು ಹೆಚ್ಚಿನ ಪ್ರಸಂಗಗಳಲ್ಲಿ ಸರ್ವಸಾಮಾನ್ಯವಾಗಿ ಸಂಭವಿಸಿರು

ವಂಥವು. ಇದೊಂದು ನೆಪವು, ವೆಂಕಾರ್ಯನ ಮಗ ಸುಬ್ಬನು 'ಅಜಪು
ಮತ್ತು 'ಕಣ್ವಪುರ' ಈ ಎರಡು ಮುದ್ರೆಗಳನ್ನು ಧರಿಸಿದವನು ಎಂಬ ಶ್ರೀ
ಕಾರಂತರ ವಾದಸತ್ರಕ್ಕೆ ಅಂಕುರಾರ್ಪಣವಾಯಿತು! ಅಪೂರ್ಣವಾ
ಅಚ್ಚಾದ ಪಾರ್ತಿಸುಬ್ಬನಿಂದ ರಚಿಸಲ್ಪಟ್ಟ 'ಬಾಲಲೀಲೆ'ಯ ಕೊನೆಯಲ್ಲಿ
ರುವ ಉಡುಪಿ ಕೃಷ್ಣನ ಸ್ತುತಿಪರವಾದ ಪ್ರಕ್ಷಿಪ್ತ ಪದ್ಯವೊಂದು ಆ ಗ್ರಂಥ
ದೇವೀದಾಸನ ಕೃತಿಯೆಂಬ ಕಲ್ಪನೆಗೂ ನೆಪವಾಯಿತು. ಯಾರೋ ಮಾಡಿ
ಅಪರಾಧಕ್ಕೆ, ಶಿಕ್ಷೆ ಪಾರ್ತಿ ಸುಬ್ಬನಿಗೆ! 'ಚೌರಾಪರಾಧಾನ್ಮಾಂಡವ್ಯನಿಗ್ರಹ:
ಎಂಬ ನ್ಯಾಯಕ್ಕೆ ಸರಿಯಾಯಿತು. (ಕಳ್ಳರು ಕದ್ದುದಕ್ಕೆ ಶೂಲಕ್ಕೆ ಹಾಕಿ
ದುದು ನಿರಪರಾಧಿಯಾದ ಮಾಂಡವ್ಯ ಮುನಿಯನ್ನು; ಅವನಿಗೆ ಪಾಪ ಮೌನ
ವ್ರತ!)

ಪಾರ್ತಿ ಸುಬ್ಬನ ಈ 'ಬಾಲಲೀಲೆ'ಯಲ್ಲಿ ಪೂತನಾ ಸಂಹಾರದ ವರೆಗಿನ ಪೂರ್ವ ಸಂಧಿಯು ಮಾತ್ರ ಅಚ್ಚಾಗಿದೆ. ಇದೀಗ ನಿಮ್ಮ ಮುಂದಿರಿಸಿದ ಈ ಓಲೆ ಪ್ರತಿಯಲ್ಲಿ ಗೋಪೀ ವಸ್ತ್ರಾಪಹಾರದ ವರೆಗಿನ ಉಭಯ ಸಂಧಿಗಳು ಸಮಗ್ರವಾಗಿವೆ. ಈ ಪ್ರಬಂಧಕ್ಕೆ ಪಾರ್ತಿಸುಬ್ಬನು 'ಕೃಷ್ಣ ಚರಿತೆ' ಎಂದು ಹೆಸರಿಟ್ಟಿದ್ದಾನೆ. ರೂಢಿಯಲ್ಲಿ 'ಕೃಷ್ಣಲೀಲೆ' ಎಂದೂ 'ಬಾಲಲೀಲೆ' ಎಂದೂ ವ್ಯವಹಾರವಿದ್ದರೂ ಗ್ರಂಥಾರಂಭದಲ್ಲಿ 'ಪರಮ ವೈಷ್ಣವ ಶುಕಾಚಾರ್ಯ ಮುನಿವದನಸರಸಿರುಹದಿಂದೊಗೆದ ಶ್ರೀ ಕೃಷ್ಣ ಚರಿತವನು ನಾ ವಿರಚಿಸುವೆ ಕನ್ನಡದ ಯಕ್ಷಗಾನದಲಿ....' ಎಂದು ಕವಿಯೇ ಹೇಳಿರುತ್ತಾನೆ. ಪಾರ್ತಿ ಸುಬ್ಬನು ತನ್ನ ರಾಮಾಯಣ ಪ್ರಬಂಧಗಳನ್ನೂ 'ರಾಮ ಚರಿತೆ' ಎಂದು ಕರೆದಿದ್ದಾನೆ. ರಾಮಾಯಣ ಪ್ರಬಂಧಗಳ ಕೆಲವು ಪದ್ಯಗಳಲ್ಲಿ ಇದು ಸೂಚಿತವಾಗಿದೆ. ಕೊನೆಯದಾದ ಕುಂಭ ಕರ್ಣಾದಿ ಕಾಳಗದ ಅಂತ್ಯಕ್ಕಿರುವ ಭರತ ವಾಕ್ಯದ ಪದ್ಯದಲ್ಲಿಯಂತು 'ರಾಮ ಚರಿತವನು ಕನ್ನಡ ಯಕ್ಷಗಾನ ದಲಿ ನಾ ಮನಸು ಬಂದಂತೆ ವರ್ಣಿಸಿದೆ' ಎಂದಿರುವನಷ್ಟೆ. ಇಡೀ 'ಕೃಷ್ಣ ಚರಿತೆ'ಯ ಓಲೆ ಪ್ರತಿಯಲ್ಲಿ 'ಶ್ರೀ ಕೃಷ್ಣ ಚರಿತೆ ಬರೆವುದಕ್ಕೆ ಶುಭ ಮಸ್ತು' ಎಂದೆ ಶಿರೋಲೇಖನವಿದೆ. ಇದೇ ಓಲೆ ಪ್ರತಿಯಲ್ಲಿ ಆತನ ರಚನೆ ಎಂದು ವಿಶ್ವಾಸಾರ್ಹವಾದ "ರಾಮಕೃಷ್ಣ ಚರಿತೆ" ಎಂಬುದಾಗಿ ರಾಮಾಯಣ ಭಾಗ ವತಗಳನ್ನು ಸಂಕ್ಷಿಪ್ತವಾಗಿಯೂ ಸಂಯುಕ್ತವಾಗಿಯೂ ರಚಿಸಿದ ೩೫ ಪದ್ಯ

ಗಳ ಚಿಕ್ಕ ಪ್ರಬಂಧವೊಂದಿದೆ. ಪ್ರತಿ ಪದ್ಯದ ಎರಡು ಚರಣಗಳಲ್ಲಿ ಮೊದಲನೆಯುದರಲ್ಲಿ ರಾಮಾಯಣ ಕಥೆಯೂ ಎರಡನೆಯುದರಲ್ಲಿ ಭಾಗವತ ಕಥೆಯೂ ಅನುಕ್ರಮವಾಗಿ ವರ್ಣಿಸಲ್ಪಟ್ಟಿದೆ. ಆದರಿಂದ ಮಾದರಿಗಾಗಿ ಒಂದೆರಡು ಪದ್ಯಗಳನ್ನು ಕೇಳಿರಿ: —

ದಶಶಿರ ದೈತ್ಯನು ಲೋಕವ ಬಾಧಿಸೆ ದಶರಥಗುದಿಸಿದ ಶ್ರೀರಾಮ ।
ವಸುಧೆಯ ಭಾರವ ಕಳೆಯಲು ಜನಿಸಿದ ವಸುದೇವನುದರದಿ
ಶ್ರೀಕೃಷ್ಣ ॥

... ...

ತಂದೆಯುವರವನು ಸಲಿಸಲು ವನಕೈತಂದನು ಲಕ್ಷ್ಮಣ ಸಹರಾಮ ।
ವೃಂದಾವನದೊಳು ನಲಿನಲಿದಾಡುತ ಚಂದದೊಳಿದ್ದನು ಶ್ರೀಕೃಷ್ಣ ॥

... ...

ವನಚರಗೊಡಗೂಡಿ ವನಿತೆಯುನರಸಲು ಹನುಮನ ಕಳುಹಿದ
ಶ್ರೀರಾಮ ।
ವನಜಾಕ್ಷಿಯರನು ಸಹಿತಲೆಸಾನಾ ವಿನಯದೊಳಾಡಿದ ಶ್ರೀಕೃಷ್ಣ ॥

... ...

ಅನುಜ ಸಹಿತ ವೈಕುಂಠಕೆ ತೆರಳಿದ ವನಿತೆಯುನೊಡಗೊಂಡು
ಶ್ರೀರಾಮ ।
ಮುನಿಪನ ಶಾಪದಿ ಯಾದವಕುಲ ಸಂಹರಣಕೆ ಮರುಗಿದ
ಶ್ರೀಕೃಷ್ಣ ॥

ಇನ್ನು 'ಕೃಷ್ಣ ಚರಿತೆ' (ಬಾಲಲೀಲೆ) ಪ್ರಸಂಗದ ಸಮಗ್ರ ಪರಿಚಯವು ತಮ್ಮಲ್ಲಿ ಹಲವರಿಗೆ ಇಲ್ಲದಿರಬಹುದು. ಇದನ್ನು ನೋಡದೆ ಪಾರ್ತಿಸುಬ್ಬನ ಪ್ರತ್ಯಕ್ಷ ದರ್ಶನವಾದಂತಾಗದು. ಇದೊಂದು ಸಾದ್ಯಂತ ಭಕ್ತಿರಸಭಾವಿತವಾದ ಮಧುರಕವಿತೆ. 'ಜಾಲಮಾತುಗಳಲ್ಲ ಮಾನವರಾಳಿದಂಥ ಚರಿತ್ರೆಯಲ್ಲಿದು ಪೇಳಿಪೊಗಳಲು ಮುಕುತಿ ರಾಜ್ಯವನಾಳಬಹುದು' ಎಂದು ಪಾರ್ತಿ ಸುಬ್ಬನೆ ಇದರ ಮಹಿಮೆಯನ್ನು ಹೊಗಳಿದ್ದಾನೆ. ಈ ಪ್ರಬಂಧವು ಸುಬ್ಬನು 'ಯಕ್ಷಗಾನ ಕವಿ ಸಾರ್ವಭೌಮ'ನೆಂದು ಮಾತ್ರ ಅಲ್ಲ ಆತನು ಕನಕಪುರಂದರಾದಿ ಹರಿದಾಸರುಗಳಂತೆ ಭಕ್ತಶಿರೋಮಣಿಯೂ

ಆಗಿದ್ದನೆಂದು ಸಾರುತ್ತದೆ. ಹೆಜ್ಜೆ ಹೆಜ್ಜೆಗೆ ಕಣ್ವಪುರ ಕೃಷ್ಣನನ್ನು ಕೊಂಡಾಡಿ ಕುಣಿದಿದ್ದಾನೆ. ತನ್ನ 'ರಾಮ ಚರಿತೆ' ಕೃತಿಯಲ್ಲಿ

ಹೃದಯಕಮಲವೆಂಬ ಹರಿವಾಣದೊಳು ದಿವ್ಯ ।
ಸದಮಲ ಭಕ್ತಿರಸದ ತೈಲದಿ ।
ಪದುಮನಾಭನ ನಾಮವೆಂಬ ಜ್ಯೋತಿಯ ತಂದು ।
ಮುದದಿಂದ ಜ್ಞಾನದಾರತಿ ಎತ್ತಿರೇ ॥

ಎಂದು ಹಾಡಿದ ಸುಬ್ಬನು 'ಕೃಷ್ಣ ಚರಿತೆ'ಯಲ್ಲಿ ಜ್ಞಾನ ಸುಧೆಯ ತೈಲದಿಂದ ಭಕ್ತಿಯಧವಳಾರತಿಯನ್ನು ಬೆಳಗಿದ್ದಾನೆ. ದಿಙ್ಮಾತ್ರ ದರ್ಶನಕ್ಕಾಗಿ ಈ ಪ್ರಬಂಧದಿಂದ ಕೆಲವು ಪದ್ಯಗಳನ್ನು ಓದಿ ಇಂದಿನ ಈ ಪ್ರಸಂಗಕ್ಕೆ ಮಂಗಲವನ್ನು ಮಾಡೋಣ.

—ಕೃಷ್ಣ ಚರಿತೆ (ಬಾಲ ಲೀಲೆ)—

ತ್ರಿವುಡೆತಾಳ:

ಶ್ರೀ ಮಹೋನ್ನತ ಭಾಗವತವ ।
ನ್ನಾ ಮಹಾಯೋಗೀಂದ್ರಶುಕನತಿ ।
ಪ್ರೇಮದಿಂ ಪೇಳ್ದನು ಪರೀಕ್ಷಿತ ಭೂಮಿಪತಿಗೆ ।
ಆ ಪುರಾಣ ಕಥಾ ಸಮುದ್ರದಿ ।
ಗೋಪಿಜನ ಲೀಲಾ ಚರಿತ್ರವ ।
ನಾ ಪೊಗಳಿ ವರ್ಣಿಸುವೆನತಿ ಸಂಕ್ಷೇಪದಿಂದ ॥

ಇದು ಪಾರ್ತಿಸುಬ್ಬನು ಗ್ರಂಥಾರಂಭಕ್ಕೆ ಸಂಕ್ಷೇಪವಾಗಿ ಹೇಳಿದ ಕಥಾಸೂಚನೆ. ದ್ವಾಪರಯುಗದಲ್ಲಿ ದುಷ್ಟದೈತ್ಯರ ಉಪಹತಿಯಿಂದ ಸಂತಪ್ತಳಾದ ಭೂದೇವಿಯು 'ಬಡಗೋವಿನ' ರೂಪಿನಲ್ಲಿ ಸತ್ಯಲೋಕಕ್ಕೆ ಹೋಗಿ ಸೃಷ್ಟಿಕರ್ತನಿಗೆ ದೂರಿಕೊಳ್ಳುವಲ್ಲಿಂದ ಕಥಾರಂಭ.

ಅಷ್ಟತಾಳ:

ಕರುಣಿಸು ಕಮಲ ಸಂಜಾತ । ಅವ ।
ಧರಿಸಿ ಲಾಲಿಪುದೆನ್ನ ಮಾತ ॥
ದುರುಳದಾನವರು ಮಾಡುವ ದುಶ್ಚರಿತ್ರವ ।

ನೊರೆಯುಲೆನ್ನಳವಲ್ಲ ಹರನೊಬ್ಬ ಬಲ್ಲ ॥
ಸುಜನರ ತಿರುಗಾಡಗೊಡರು । —ದೈತ್ಯ ।
ಕುಜನರೆಸಗುವಂಥ ತೊಡರು ॥
ಯಜನ ಕರ್ಮಗಳೆಲ್ಲ ವನದ ಪಾಲಾಯಿತು ।
ನಿಜ ವೇದ ಮತಗಳು ತ್ಯಜವಾಯಿತಯ್ಯ ॥
ಪುಂಡುಪೋಕರ ಸಂಚಾರಗಳ । —ಗಂಡ ।
ಹೆಂಡ್ಯರೊಳಿಕ್ಕುವರ್ಜಗಳ ॥
ಉಂಡಮನೆಗೆ ಎರಡೆಣಿಸುವರ್ದಣಿಸುವರ್ ।
ಕೊಂಡೆಯುವರ ಚಾಳಿ ಘನವಾಯಿತಯ್ಯ ॥
ಮರುತಾನಲಾದಿತ್ಯರ್ಗಳಿಗೆ । —ತೊಡರ್ ।
ಬರುತಿದೆ ಸಂಚಾರದೊಳಗೆ ॥
ಪರರ ದ್ರವ್ಯವ ಅಪಹರಿಸುವರರಸುವರ್ ।
ಪರವಧುಗಳಗೋಷ್ಠಿ ಸ್ಥಿರವಾಯಿತಯ್ಯ ॥
ಧರ್ಮವು ಖಿಲವಾಯಿತಯ್ಯ । —ಅವ
ಧರ್ಮ ಶಾಶ್ವತವಾಯಿತಯ್ಯ ॥
ನಿರ್ಮಲಾತ್ಮಕ ನಿರಂಜನನ ಪೂಜಿಸದ ದು ।
ಷ್ಕರ್ಮಿಗಳನು ಹೊತ್ತು ದಣಿದೆ ನಾ ಬೇಸತ್ತು ॥
ತಂದೆ ಮಕ್ಕಳ ನಂಬಲಾರ । —ಬಂಧು ।
ಬಾಂಧವರೊಳು ಬದ್ಧವೈರ ॥
ಒಂದಕೊಟ್ಟೊಂಭತ್ತಕೊಂಬರನ್ಯಾಯುದ ।
ಬಂದಿಕಾರರ ಕಾಟ ದಿನನಿತ್ಯ ಕೊಂದಾಟ ॥

ಭೂದೇವಿಯ ಕಷ್ಟಕ್ಕೆ ಮರುಗಿದ ಬ್ರಹ್ಮನು ದೇವತೆಗಳೊಡನೆ ಹೋಗಿ ಶ್ರೀಮನ್ನಾರಾಯಣನಿಗೆ ದೂರಲು ಮಹಾವಿಷ್ಣುವು ತಾನು ದೇವಕಿಯ ಗರ್ಭದಲ್ಲಿ ಜನಿಸಿ ದುಷ್ಟರನ್ನು ಸಂಹರಿಸುವುದಾಗಿ ಅಭಯವಿತ್ತು ಬ್ರಹ್ಮಾದಿಗಳನ್ನು ಸಂತೈಸಿ ಕಳುಹಿಸುತ್ತಾನೆ.

ಅತ್ತ ಮಥುರೆಯಲ್ಲಿ ವಸುದೇವ ದೇವಕಿಯರಿಗೆ ಸಂಭ್ರಮದ ವಿವಾಹವಾಗುತ್ತದೆ. ಬಳುವಳಿ ಸಮೇತ ನವವಧೂವರರನ್ನು ಕಳುಹಿಸಿ

ಕೊಡಲು ರಥವೇರಿ ಬಂದ ಕಂಸನು ತಂಗಿಯ ಎಂಟನೆಯ ಗರ್ಭದ
ಪರಮಾತ್ಮನು ಅವತರಿಸಿ ತನ್ನನ್ನು (ಕಂಸನನ್ನು) ಕೊಲ್ಲುವನೆಂಬ 'ಮರ
ದೊಸಗೆಯ ಗಗನವಾಕ್ಯ'ವನ್ನು ಕೇಳಿ 'ಕಂಗಳೆರಡರಲ್ಲಿ ಕಿಡಿಗೆದ
ಹೇಳುತ್ತಾನೆ:—

ಅಷ್ಟತಾಳ:

ನೀರಬತ್ತಿಸಿದ ಮೇಲೆ—ಮುತ್ತಿನ ಚಿಪ್ಪು
ಗಾರಾಗದುಳಿವುದುಂಟೆ? ।
ಬೇರು ಕಡಿದ ಮೇಲೆ ಬೆಳೆಯದು ಗಿಡ ಇಂದೀ ।
ನಾರಿ ಇಲ್ಲದಡೆ ಕುಮಾರರಾಗುವದೆಂತು ॥
ಸಾಲ, ರೋಗಗಳು, ಶತ್ರು, —ವಿಸಾರಿದವಹ್ನಿ ।
ಜ್ವಾಲೆ, ನಾಲ್ಕದಕೆ ಹೆಚ್ಚು ।
ಕಾಲದೊಳಗೆ ಪರಿಹರಿಸದಿದ್ದಡೆ ಮುಂದೆ ।
ಕೀಳುವಡರಿದು ಚಾತುರ್ಯವುಳ್ಳವರಿಗೆ ॥

'ಎಂಬ ಯುಕ್ತಿಗಳನ್ನು ಮುಂದಿಟ್ಟು' ತಂಗಿಯ ಕೊಲೆಗೆ ಕೈಯೆತ್ತಿದ
ಕಂಸನಿಗೆ ವಸುದೇವನು ಹೇಳುವ ವಿನಯೋಕ್ತಿಗಳು ಹೀಗಿವೆ:—

ಏಕತಾಳ:

ಒಡಲು ಶಾಶ್ವತವಲ್ಲ ಕಂಸರಾಯ — ಪುಣ್ಯ ।
ಬಿಡುವದೊಂದೇ ನಿಮಿಷದಲ್ಲಿ ಕಂಸರಾಯ ॥
ಮಡದಿ ಮಕ್ಕಳೆಂಬ ಭಾಗ್ಯ ಕಂಸರಾಯ — ಮಳೆ ।
ಹೊಡೆದ ನೀರನೆರೆಗಳೆಂತೆ ಕಂಸರಾಯ ॥
ಕಂಡುಕಂಡು ತಿಳಿದುತಿಳಿದು ಕಂಸರಾಯ — ಯಮನ ।
ದಂಡನೆಗೆ ಸಿಲುಕುವೆಯ? ಕಂಸರಾಯ ॥
ಬಂಡಾಟಗಳುಚಿತವಲ್ಲ ಕಂಸರಾಯ—ನರಕ ।
ಕುಂಡದೊಳಗೆ ಬೀಳ್ವೆಯಲ್ಲ ಕಂಸರಾಯ ॥

ರೂಪಕತಾಳ:

ಕೊಂದವರಿಗೆ ಕೊಲೆ ತಪ್ಪದು । ಕಡೆಗೀಭಯ ನಿನಗಪ್ಪುದು ।
ಸಂದರೆ ಪ್ರಾಣದ ಭಯ ಎಂ । ದೆಂದಿಗು ಬಿಡದಯ್ಯ ॥
ಹುಟ್ಟಿ ಕೂಡಲೆ ಮರಣವ । ಕಟ್ಟಿರಿಸಿದ ವಿಧಿ ಫಣೆಯಲಿ ।
ಕೆಟ್ಟಾ ಮೇಲಲ್ಲದೆ ಮತಿ । ಪುಟ್ಟದು ಜೀವರಿಗೆ ॥
ಮುಳ್ಳೊನೆ ಕಾಲಿಗೆ ನೆಟ್ಟರೆ । ಪಲ್ಲೊನೆ ಚುಚ್ಚುವುದೇತಕೆ? ।
ಸೂಳ್ಮನಸಿನ ಕಂಗೆಡಿಕೆಯು । ಕಲ್ಮನ ಮಾಡದಿರು ॥

ಕಂಸನು ನೀತಿಗೆ ಮಣಿಯದಿರಲು ಹುಟ್ಟಿದ ಮಕ್ಕಳನ್ನೆಲ್ಲ ತಂದೊಪ್ಪಿಸುವೆನೆಂದು ವಸುದೇವನು ಭಾಷೆ ಕೊಡುತ್ತಾನೆ ಅದಕ್ಕೆ ಕಂಸನ ಉತ್ತರ ಹೀಗಿದೆ:—

ನಿಜವಲ್ಲ—ಮಾತು ನಿಜವಲ್ಲ ।
ನಿಜವಲ್ಲ ಈ ಮಾತು ನಿನ್ನಂತರಂಗ ।
ಕುಜನರ ಕೂಡಾಡುವಂಥ ಪ್ರಸಂಗ ॥ ಪಲ್ಲ ॥
ಬೀಸಿದ ಕೈತಪ್ಪಿ ನಡೆದರೆ ಮುಂದೆ । ।
ಸಾಸಿರಕಾಲ ಎಂಬರು ಗಾದೆ ಹಿಂದೆ
ನೀ ಶಿಶುಗಳ ತಂದು ಕೊಡುವ ಮಾತುಂಟೆ? ।
ಲೇಸೆಂದು ನಂಬಿ ಬಿಟ್ಟರೆ ಟೆಂಟೆ ಮೆಂಟೆ! ।
ಬೆಟ್ಟದ ಮೊಸಳೆಯ ಜಲದಲಿ ತಂದು ।
ಬಿಟ್ಟವನುಪಕಾರವರಿವುದೆ ಮುಂದು? ।
ದುಷ್ಟರಿಗುಂಟೆ ದಾಕ್ಷಿಣ್ಯವೆಂದೆಂದೂ? ।
ಭ್ರಷ್ಟಕಾರ್ಯದ ಮಾತಾಡುವರೆ ನೀನಿಂದು? ।
ಕೊಂಡದ ನೆಲೆ ನೀರ ತಿಳಿದು ತಾ ಮೊದಲೆ ।
ಗುಂಡಿಯೊಳಗೆ ಬಿದ್ದು ಸಾವರೆ? ಮರುಳೆ ।
ಕಂಡು ಹಾದಿಯೊಳಿದ್ದ ಮಾರಿಯ ಮನೆಗೆ ।
ಕೊಂಡುಹೋಗುವರುಂಟೆ? ಕಡುಜಾಣರೊಳಗೆ ॥

ವಸುದೇವನು ಆಡಿದ ಮಾತಿಗೆ ತಪ್ಪೆನೆಂದು ಬೇಕಾದ ನಂಬುಗೆಯನ್ನು ಕೊಟ್ಟ ಮೇಲೆ ಕಡೆಗೆ ತಂಗಿಯನ್ನು ಕೊಲ್ಲದೆ ಬಿಟ್ಟು ಮನೆಗೆ ಬಂದ ಕಂಸನ ಮನೋಭಾವವನ್ನು ಸುಬ್ಬನು ಹೀಗೆ ವರ್ಣಿಸುತ್ತಾನೆ.

'ದುಷ್ಟಭಾವವದೊಂದು, ಅನುಜೆಯಕ್ಕರವೊಂದು,
ಕೃಷ್ಣಜನನ ಸ್ಥಿತಿಯ ಮರಣಭಯ ಮತ್ತೊಂದು ।
ಅಷ್ಟಮದಮಾನಹಂಕಾರವೊಂದನಿತರಿಂಭ್ರಷ್ಟಮನ ಕರಗುತಿರ್ದ ॥

ಅನಂತರ ಹುಟ್ಟಿದ ಆರು ಮಕ್ಕಳನ್ನೂ ಕೊಟ್ಟ ಮಾತಿಗೆ ತಪ್ಪದೆ ವಸುದೇವನು ಕಣ್ಣೀರ ಧಾರೆಯಿಂದ 'ಮದಕಂಸ'ನಿಗೆ ಬಲಿಯೊಪ್ಪಿಸಿದರೆ, ಕಂಸನು:—

ಆರು ಮಕ್ಕಳನೊರಸಿ ಶಿಲೆಯಲಿ ।
ಸೇರಿಸಿದ ದಂಪತಿಗಳಿರ್ವರ ।
ಕಾರಗರದೊಳು ಕಾಲ್ಗೆ ಸಂಕಲೆ ಸೇರಿಸಿದನು ॥

ಮತ್ತೆ ಕಾರಾಗೃಹದಲ್ಲಿ ದೇವಕಿಯು ಗರ್ಭವತಿಯಾಗುತ್ತಾಳೆ. ಬಸಿರಲ್ಲಿ ಬೆಳೆಯುವ ಕಂಸನ ಏಳನೆಯ ಪಿಂಡಕ್ಕೆ ಬೇಯುತ್ತಾಳೆ. ದೇವಕಿಯ ಬಿಸಿಯುಸಿರು ಸತ್ಯಲೋಕಕ್ಕೆ ಸೆಕೆಯಾಯಿತು. ಬ್ರಹ್ಮನ ಮನಸ್ಸು ಕರಗಿತು. ಒಡನೆಯೆ ದೇವಕಿಯನ್ನು ಸಂತೈಸುವುದಕ್ಕಾಗಿ 'ಆ ಸೃಷ್ಟಿಯರಸನು'

ತ್ರಿವುಡೆ:

'ಅರಸಕೇಳಾ ಹರಿಯ ಜನನದ ।
ಹರುಷ ದೇವಕಿಗೊರೆಯಲೋಸುಗ ।
ಸರಸಿಜೋದ್ಭವನಂದು ಮಾಯದ ಕೊರವಿಯಾದ ॥
ಉತ್ತಮರ ಭಯತಾಪಶರಧಿಯ ।
ನುತ್ತರಿಪ ಮಂತ್ರವನುಸುರ್ವಡೆ ।
ಬಿತ್ತರಿಸಿ ಕೊರವಂಜಿ ವೇಷವ ಹೊತ್ತನಜನು ॥

ಹೀಗೆ ಬ್ರಹ್ಮನೆ 'ಭಾಮಿನೀರನ್ನೆ'ಯಾದ ಕೊರವಂಜಿಯು ಶೃಂಗಾರವಾಗಿ ಬಣ್ಣಗೋಲನ್ನು ಧರಿಸಿ ಕಮಂಡಲನ್ನು ಮುದ್ದು ಬಾಲನನ್ನಾಗಿ ಮಾಡಿ

'ಮಗ್ಗುಲೊಳಗಿರಿಸಿ, ಕನಕವಸ್ತ್ರವನು ಮುಸುಕಿಕ್ಕಿ' ಭೂಲೋಕಕ್ಕಿಳಿಯುವ ಸುಬ್ಬನ ಕವಿತಾ ಕಾಮಿನಿಯ ಸೊಬಗನ್ನು ಪ್ರತ್ಯಕ್ಷ ಈ ಪದ್ಯದಲ್ಲಿ ನೋಡಿರಿ.

(ಸೊಬಗಿನ ಸೋನೆ) ಅಷ್ಟತಾಳ:

ಮುಕುರಕಪೋಲೆ ಮಂದಸ್ಮಿತೆ ಮೃದುಹಸ್ತೆ ।
ಮಕರಧ್ವಜನ ಚಿನ್ನದ ಬೊಂಬೆ ॥
ಸಕಲಕಲಾನ್ವಿತೆ ನಳಿತೋಳ್ಗಳಬಲೆ ಕಂ ।
ಚುಕವನಿಟ್ಟಳು ಮುದ್ದು ಲಲಿತಾಂಗಿ ॥
ಮುತ್ತಿನ ಓಲೆ ಮೂಗುತಿ ಕೊಪ್ಪಿನೆಸಳುಗ ।
ಳುತ್ತಮ ಚೌಲಿ ರಾಕಟೆ ಬಂದಿ ।
ರತ್ನದ ಕಾಲಹಿಂಬಳೆ ಚೌಕಿಗಳಿಂದ ।
ಮತ್ತೇಭಗಮನೆ ರಾಜಿಸಿದಳು ॥
ಕಂಕಣ ಕೈಯ ತೋಳ್ಬಳೆ ಮುಂಗೈಸರಿಗೆ ಪ ।
ದ್ಮಾಂಕಿತ ಹಸ್ತೆ ಕೇಸರಿಮಧ್ಯೆ ।
ಕುಂಕುಮ ಗಂಧ ಕಸ್ತುರಿ ಪರಿಮಳ ಸರ್ವಾ ।
ಲಂಕಾರವಾದಳಂಬುಜ ನಯನೆ ॥
ಕಂಬುಕಂಧರಿ ಚೆಲ್ವ ಕಳಕೀರ ಮೃದುವಾಣಿ ।
ಪೊಂಬಾಳೆದೊಡೆ ತಳಿರ್ಪದಯುಗೆ ।
ತುಂಬಿದ ಗುರುನಿತಂಬಿನಿ ಯುಟ್ಟಳೆಸೆವದಿ ।
ವ್ಯಾಂಬರಗಳ ಮದಗಜಗಮನೆ ॥
ಮೇಲು ಮುತ್ತಿನ ಹಾರ ಮೆರೆವ ಮೂಗುತಿಯ.ನೀ ।
ಲಾಳಕಿ ಧರಿಸಿದಳಳವಡಿಸಿ ।
ಕಾಲಲಂದುಗೆ ಗೆಜ್ಜೆ ಕಂಕಣ ಕಡಗ ಹೊ ।
ನ್ನೋಲೆ ಇಟ್ಟಳು ವರಕರಿಗಮನೆ ॥
ರನ್ನದಕೊಪ್ಪು ಚಿನ್ನದ ತಾಲಿ ಬಾವಲಿ ।
ಗನ್ನದ ಕಾಂಚಿ ಶರಾವಂತಿ ॥
ಕನ್ನಡಿ ಕೊಳಗ ಮುದ್ರಿಕೆ ನೇವಳ ಮುಖ್ಯ ।
ಸನ್ನಾಹದಿಂದ ಸಿಂಗರವಾದಳು ॥

ಮರಳಿ ಮಂಜಟಿ ಗುಂಜಿಹಾರ ಕೊರಳಿಗಿಕ್ಕಿ ।
ಕರದೊಳಾಂತೊಡನೆ ವೀಳೆಯಪಟ್ಟಿ ।
ಪರಿಮಳಗಳ ಪೂಸಿ ಸಣ್ಣ ನಾಮವನಿಕ್ಕಿ ।
ಮರಿಮೃಗನಯನೆ ತಾನೊಪ್ಪಿದಳು ॥

ಅಷ್ಟತಾಳ—ಬಂದಳುಕೊರವಂಜಿ ನೀರೆ—ಮುದ ।
ದಿಂದ ತ್ರಿಭುವನವಿಸ್ತಾರೆ ।
ಸೌಂದರ್ಯ ವಯದ ಶರೀರೆ— ಮನ ।
ಕುಂದದ ಶರಧಿ ಗಂಭೀರೆ— ಪೂರ್ಣ ।
ಚಂದಿರ ವದನೆ ಆ ನಂದಿಪೂರದನೆ ಬಾ ।
ಲೇಂದುಶೇಖರ ಶರಣೆಂದು ಸಂಸ್ತುತಿಸುತ್ತ ॥
ಕಡುಮುದ್ದು ಸೊಬಗಿನರನ್ನೆ— ಎಡೆ ।
ಬಿಡದಿಹ ಭಾಗ್ಯಸಂಪನ್ನೆ ॥—
ಸೆಡವಿನ ನಿಜಗುಣ ರನ್ನೆ—ಖ್ಯಾತಿ ।
ವಡೆದ ಸಾರಸ್ವತ ವರ್ಣೆ— ಕೂಡೆ ।
ಬಡನಡು ಬಳುಕುತ್ತ ನಡೆಮೆಲ್ಲನಡಿಯಿಡು ।
ತ್ತೊಡನೆಪೊಂಗೊಡವೊಲೆ ಯಡಗಿಸಿಕೊಳ್ಳುತ್ತ ॥
ಮಾತಿನ ಮಧುರ ಸುಗೀತೆ—ಶ್ರುತಿ ।
ನೂತನ ಸಾರಸಂಗೀತೆ ॥
ಪಾತಕ ದುರಿತ ವಿಘಾತೆ—ಖಳ।
ವ್ರಾತ ತಿಮಿರ ಸುಪ್ರಭಾತೆ— ಹರಿ ।
ಜಾತೆ ನಿರ್ಭೀತೆ ಸುದಾತೆ ಸಕಲಜನ ।
ಮಾತೆ ಸಜ್ಜನಮನಃಪ್ರೀತೆ ಸುಖ್ಯಾತೆ ॥

ಹೀಗೆ ಮಥುರಾಪಟ್ಟಣಕ್ಕೆ ಬಂದು ದೇವಕಿಯಿದ್ದ ಕಾರಾಗೃಹದ್ವಾರದ ಮುಂದೆ ನಿಂತ ಕೊರವಂಜಿಯು ಮಾತು ಮಲೆಯಾಳ ಭಾಷೆಯಲ್ಲಿ ಹೀಗಿದೆ:—

(ಕೊರವಂಜಿ ಕಟ್ಟಳೆಯು ತಮಿಳುದೇಶದ ಒಂದು ವಿಶಿಷ್ಟ ಮೂಲ ನಿವಾಸಿಗಳ ಪ್ರಾಚೀನ ಜಾನಪದ ನೃತ್ಯ ವಿಶೇಷ. ಮೂಲತಃ ಇದು ಯಕ್ಷಗಾನ

ಕ್ಕೆ ನಿಕಟ ಸಂಪರ್ಕವುಳ್ಳುದಾಗಿದ್ದು [ಪಾರ್ವತಿಕೊರವಂಜಿ, ಶ್ರೀಕೃಷ್ಣ ಕೊರವಂಜಿ, ಅರ್ಜುನ ಕೊರವಂಜಿ, ಇತ್ಯಾದಿ 'ಕೊರವಂಜಿ ಯಕ್ಷಗಾನ' ಗ್ರಂಥಗಳು ಕನ್ನಡದಲ್ಲಿ ರಚಿಸಲ್ಪಟ್ಟಿರುವುವೆಂಬ ಯಕ್ಷಗಾನ ಚರಿತ್ರೆಗೆ ಸಂಬಂಧಪಟ್ಟ ವಿಷಯವೂ ಇಲ್ಲಿ ಸ್ಮರಣಾರ್ಹವಾಗಿದೆ. ಮತ್ತು 'ಮಥುರಾ ಪಟ್ಟಣದಿಂದ ಬಂದ' ಕೊರವಂಜಿಯುನ್ನು ಸುಬ್ಬನು ಮಲೆಯೂಳ ಭಾಷೆಯಲ್ಲಿಯೇ (ತಮಿಳಿನಲ್ಲಿಯಲ್ಲ!) ನುಡಿಸುತ್ತಾನೆ ಎಂಬುದನ್ನೂ ಲಕ್ಷಿಸಬೇಕು.)

'ಅಮ್ಮೇ ಕೇಳಡಿಯಮ್ಮೇ, ನೀಂಗಳ್‌ಕು ಸುಕಂ ಉಂಡಾವು; ನಿನ್ನುಡೆ ಬಂಧನಂಗಳೆಲ್ಲಾಂ ತೀರ್ಕುಂ ಯೋಚನೆ ವೇಂಡ; ನೀಂನೆನಚ್ಚ ಕಾರ್ಯಂ ಎಲ್ಲಾಂಕೈಗೂಡುಂ; ಶ್ರೀಮನ್ನಾರಾಯಣನುಡೆಯ ಕರುಣ ಮುಂಡಾಯಿತಪಂಗಳುಂಶ್ಶೈದು ಅಡಿಕ್ಕ್ಯೊರಿತ್ತು ಕೃಪಯಾನೇ, ಮನಂತಿಳಿವಿಲ್ ಇಚ್ಛಾವರಂಗಳಂ ಬೇಂಡಿಕ್ಕುಂ'

ಆ ಮೇಲೆ ದೇವಕಿಯು ತನ್ನ ಕಷ್ಟ ಪರಂಪರೆಗಳನ್ನೆಲ್ಲ ಹೇಳಿ ಮುಂದಿನ ಸುಖದುಃಖದ ಭವಿಷ್ಯವನ್ನು ಹೇಳಬೇಕೆಂದು 'ರಂಗುವಾಲೆ ಅಕ್ಷತೆ, ಫಲಪುಷ್ಪ, ತಾಂಬೂಲಾದಿ ಕಾಣಿಕೆ ಇಟ್ಟು 'ಕಣಿಗೂಡೆಯುನ್ನು' ಕೇಳುತ್ತಾಳೆ. ಕೊರವಂಜಿಯು 'ಪೊಂಗೇದಗೆಸಳುಗುರ್ಗಳಲಿ ಶೋಭಿಸುವಂಥ' ದೇವಕಿಯ ಹಸ್ತರೇಖೆಯುನ್ನು ನೋಡಿ ಶ್ರೀ ಕೃಷ್ಣನು ಮಗನಾಗಿ ಹುಟ್ಟಿ ಕಷ್ಟಗಳನ್ನೆಲ್ಲ ಪರಿಹರಿಸುವನೆಂದು ಕಣಿ ಹೇಳುತ್ತಾಳೆ. ದೇವಕಿಯು 'ಕಟ್ಟು ಕಾವಲು ಕಂಸನಾಜ್ಞೆ' ಇರುವುದರಿಂದ ಮಗು ಹುಟ್ಟಿದರೂ ಅದು ಉಳಿಯದೆಂದು 'ಹೊಟ್ಟೆಗೋಸುಗವಾಗಿ ನುಡಿದ ನಿಮಿತ್ಯ'ವನ್ನು ತಾನು ನಂಬುವುದಿಲ್ಲ ಎನ್ನುತ್ತಾಳೆ. ಅದಕ್ಕೆ ಕೊರವಂಜಿಯು ಹೇಳುವ ನಂಬಿಕೆಯ ಮಾತು:

ತ್ರಿವುಡೆ ತಾಳ:

ಹೊನ್ನಿನಾಸೆಗೆ ಬಂದುದಿಲ್ಲ ಹಸ್ತಿಗಮನೇ—ನಿನ್ನಯ ।
ಪುಣ್ಯವನು ನಿನಗೊರೆಯಲಾಗಿಯೆ ಬಂದೆ ನಮ್ಮ ॥
ನಾಡಮಾತುಗಳಾಡಿ ಪೋಗಲು ಬಂದಳಲ್ಲ—ಶಿವದಯ ।
ಮಾಡಿದಿರುವನು ಪೇಳಲಾಗಿಯೆ ಬಂದೆನಮ್ಮ
ಕಟ್ಟು ಬಣ್ಣದ ಜಾಲಮಾತಿನ ಕೊರವಿಯಲ್ಲ—ಲೋಕದ ।
ಸೃಷ್ಟಿಯಧಿಪತಿತನಕೆ ಯೋಗ್ಯದ ಕೊರವಿಯಮ್ಮ ॥

ಏಕತಾಳ:

ಸೊಲ್ಲ ಕೇಳೆ ಸೊಲ್ಲ ಕೇಳೆ ಸೊಗಸು ಗಾರವ್ವ ।
ಬಲ್ಲಿದ ಸುಜಾಣೆ ಮರಿ ಹುಲ್ಲೆಗಣ್ಣಿನವ್ವ ॥
ಏಳುಲೋಕದಪ್ಪ ನಿನ್ನ ಬಾಲನು ಕೇಳವ್ವ ।
ವೇಳೆಯೊಳವತರಿಸಿ ಖಳರ ಕೊಲುವನು ನೋಡವ್ವ ॥
ಸಣ್ಣ ಬಾಲಕೂಸಿಗೊಂದಿಷ್ಟನ್ನವ ಕೊಡವ್ವ ।
ಎನ್ನ ಮುಂಡೆಗಿಷ್ಟು ಎಳ್ಳಿನೆಣ್ಣೆಯ ಹಾಕವ್ವ ॥

ಹೀಗೆ ಸಂತೈಸಿ ಕೊರವಂಜಿ ತೆರಳಲು ದೇವಕಿಯ ಬಸುರಿನಲ್ಲಿದ್ದ ಏಳನೆಯ ಗರ್ಭವು ಕರಗಿತು. ರೋಹಿಣಿಯ ಗರ್ಭದಿಂದ ಶೇಷಾವತಾರಿಯ ಜನನವಾಯಿತು ಶ್ರೀಮನ್ನಾರಾಯಣನು ತಾನು ಸುರರಿಗೆ ಕೊಟ್ಟ ಅಭಯವಚನದಂತೆ ಭೂಮಿಯಲ್ಲಿ ಅವತರಿಸುವುದಕ್ಕೆ ಮನಮಾಡಿದನು. ದೇವಕಿಯ ಮುಖದಲ್ಲಿ ಮತ್ತೊಮ್ಮೆ ಸತ್ವಲಕ್ಷಣವು ಮೈದೋರಿತು. ಪಾರ್ತಿಸುಬ್ಬನ ಸಂತೋಷವೂ ಉಕ್ಕೇರಿ ಹೀಗೆ ಹರಿಯಿತು.

ಅಷ್ಟತಾಳ॥–ದಯವಿಟ್ಟ–ಪರಮಾತ್ಮ ಭಕ್ತರ ಮೇಲೆ । ದಯವಿಟ್ಟ... ॥ಪಲ್ಲ॥
ದಯವಿಟ್ಟ ಧರೆಗವತರಿಸಿ — ಚಿ ।
ನ್ಮಯರೂಪ ಖಳರ ಸಂಹರಿಸಿ—ಲಕ್ಷ್ಮೀ ।
ಪ್ರಿಯ ಸಾಧುಜನರನುದ್ಧರಿಸಿ । —
ಭಯಗೊಳುತಿರುವ ಭೂಮಿಯ ಭಾರವಿಳುಹಿ ತ ।
ನ್ನಯ ಚಾರಿತ್ರಗಳ ನ । ಕ್ಷಯವ ಮಾಡುವೆನೆಂದು ॥
ಕೊಡನೊಳಗಿಹ ದೀಪದಂತೆ ... ಮುಸು ।
ಕಿಡಲು ರತ್ನದ ಛಾಯೆಯಂತೆ .... ಮುಗಿ ।
ಲೆಡೆಯ ಭಾಸ್ಕರ ಬಿಂಬದಂತೆ ।
ಕಡುಮುದ್ದುಮೊಗ ಬಿಳುಪಿಡೆ ಮೊಲೆತುದಿ ಕಪ್ಪು ।
ತೊಡರಿತಿ ವಳಪಾದದಡಿಯುರಸಿನ ವಾಗೆ ॥
ಆಸರುಬ್ಬಸವೆತ್ತಿದಂತೆ—ಮೈಯ ।
ಬೇಸರು ಘನವಾಯಿತಂತೆ—ನವ ।

ಮಾಸ ತುಂಬಲು ಪುಣ್ಯವಂತೆ।..........

... ...

ಹೀಗೆ ನವಮಾಸ ತುಂಬಲು ಶ್ರಾವಣ ಮಾಸದ ಅಷ್ಟಮಿಯಂದು ಬುಧವಾರ ನಡುವಿರುಳು ಶ್ರೀ ಕೃಷ್ಣಮೂರ್ತಿಯ ಜನನವಾಯಿತು. ತನ್ನನ್ನು ನಂದ ಗೋಕುಲದಲ್ಲಿ ಬಿಟ್ಟು ಅಲ್ಲಿ ಜನಿಸಿದ 'ಮಾಯಾಂಗಿ'ಯನ್ನು ಇಲ್ಲಿ ತಂದಿರಿಸಿರಿ ಎಂಬ ಸಿರಿನುಡಿಯಾದಂತೆ ವಸುದೇವನು ಶಿಶುವನ್ನೆತ್ತಿಕೊಂಡೊಯ್ಯುವ ಗೋಪಾಲಕೃಷ್ಣನ ಜನ್ಮಲೀಲೆಯ ಮಹಿಮೆಯನ್ನು ಸುಬ್ಬನು ಹೀಗೆ ಹೊಗಳುತ್ತಾನೆ:—

ಅಷ್ಟತಾಳ:

ಕಾರೆಂಬ ಕತ್ತಲೆ ಕವಿಯಲು ದೆಸೆದಿಕ್ಕು
ಭೋರೆಂದು ಮಳೆಹೊಯ್ಯುತ್ತಿರುವಾಗ।
ಪುರದ್ವಾರಂಗಳಾಳದಂಡಿಗೆ ಬೇಗ—ಕಳಚಿ।
ದಾರಿಯಾಯಿತು ಶೌರಿ ಬರುವಾಗ—ಕಾಣು।
ತ್ತಿರುವಾಗ—ಕಾವ।
ಲವರಾಗ—ನಿದ್ರೆ।
ಬಾರಿಸಲೆಚ್ಚರಿಲ್ಲದ ಯೋಗ—ಸೂತ್ರ।
ಧಾರಿಯ ಮಹಿಮೆಯಂದವನೀಗ॥
ಒಡೆಯ ಕೋಪಿಸಬಾರದೆಂದು ಪನ್ನಗರಾಜ।
ನಡುವಿರುಳಿನೊಳೆದ್ದು ಬಂದನು—ಮಳೆ।
ಹೊಡೆಯಲಂಜುವದನ್ನು ಕಂಡನು—ತನ್ನ।
ಹೆಡೆಯನಂಬರಕೆತ್ತಿ ನಿಂದನು—ಮಾಣಿ।
ಕ್ಯಗಳನು—ಪ್ರಕಾ।
ಶಗಳನು—ಮಾಡಿ।
ಕೊಡುತಾಡುತಲೆ ನಡೆತಂದನು—ಭೋ।
ರ್ಗುಡಿಸುವ ಯಮುನೆಯ ಕಂಡನು॥

— — — — — — — —

— — — — — — — —

ಯಮುನೆಯನ್ನು ದಾಟಿ ನಂದಗೋಕುಲಕ್ಕೆ ಬಂದ ವಸುದೇವನು—
ಪೊತ್ತುಕೊಂಡಿರ್ದ ಗೋವಿಂದನಾನಂದದ ।
ಮೂರ್ತಿಯನೆತ್ತಿ ತಗ್ಗಿರಿಸಿದ— ಕೈಯೊಳ್ ।
ಮತ್ತೆ ಮಾಯಾಂಗಿಯ ಧರಿಸಿದ—ಕಾ ।
ಣುತ್ತ ಮನದೊಳು ಕಾತರಿಸಿದ—ತಿರು ।
ಗಿದ ಬೇಗ—ಸೆರೆ ।
ಮನೆಗಾಗ—ಬಳಿ ।
ನಿತ್ತೊಳಪೊಗಲು ಮುಚ್ಚಿತುಕದ—ಕಾಲಿ ।
ಗೊತ್ತೆ ಸಂಕಲೆಪೇಳಲೇನದ ॥

ಆಗ ಶಿಶುವಳುವುದನ್ನು ಕೇಳಿ ಎಚ್ಚತ್ತ ಕಂಸ -

ತ್ರಿವುಡೆ॥—ಪುಟ್ಟಿದನು ಪಗೆ ಎಂದು ಮನದಲಿ ।
ಬಿಟ್ಟಮಂಡೆಯೊಳೊದರಿ ಬಲುಬುಸು ।
ಗುಟ್ಟುತೇಳುತ ಬೀಳುತಲಿ ಕಂಗೆಟ್ಟುಭರದಿ ।
ತಡವುತೆಡವುತ ಒಂದುಬಾಗಿಲ ।
ನೊಡೆದು ಹುಂಕರಿಸುತ್ತ ಶಿಶುವನು ।
ಕೊಡುಕೊಡೆನುತಾರ್ಭಟಿಸಿನಿಂದನು ಹೊಡೆದುಕೈಯ ॥

ಇದೊಂದು ಹೆಣ್ಣುಮಗುವನ್ನಾದರೂ ಉಳಿಸಲಾರೆಯಾ? ಎಂದು ದೇವಕಿಯು ಅಣ್ಣನಾದ ಮದಕಂಸನನ್ನು ಪ್ರಾರ್ಥಿಸುವ ಹೆತ್ತ ಕರುಳಿನ ಮರುಕವು ಹೀಗಿದೆ:—

ಅಷ್ಟತಾಳ॥—ಅಣ್ಣಾ ಕೊಲ್ಲುವುದೇಕೊಮಗಳ—ಇಕೊ ।
ಹೆಣ್ಣು ಹುಟ್ಟಿತು ನೋಡು ಪುಣ್ಯಭಾಗ್ಯಗಳ ॥ ಪಲ್ಲ ॥
ಗಗನದ ನುಡಿ ತಪ್ಪಿತಲ್ಲ—ನಿನ್ನ ।
ಪಗೆಯನೆಂಬಾ ಮಾತು ಪುಸಿಯಾಯಿತಲ್ಲ ॥
ಮಗುನಿನ್ನ ಸೊಸೆ ವೈರಿಯಲ್ಲ—ಕೈಯ ।
ಮುಗಿದುಬೇಡುವೆ ಪಾಲಿಸಿದನೊಂದು ಸೊಲ್ಲ ॥

— — — — — — — —

— — — — — — — —

ನಿನ್ನಸಂಗಡಹುಟ್ಟಿಬಂದು – ನಿತ್ಯ ।
ಕಣ್ಣನೀರ್ಗೋಳುಣಿಸಿದೆಯೊ ಇಂತಿಂದು ।
ಇನ್ನಾದರಿದಮುನತಂದು – ಪಾಲಿ ।
ಸೆನ್ನಪುಣ್ಯದೊಳಾದ ಶಿಶುವನೀನೊಂದು ॥

ಹಲವು ಪರಿಯಲಿ ಬೇಡಿಕೊಂಡರೂ ಕೇಳದೆ ಮದಕಂಸನು ಶಿಶುವನ್ನು ನೆಲಕ್ಕಪ್ಪಳಿಸಿದರೆ ಆ ಚಂಡಿಕೆಯು 'ಎಲೆ ಪಾಪಿ ಕೇಳು ನೀನೆನ್ನ ಕೊಲುವುದಕೆ ಗಂಟಲೊಳಿಳಿವ ತುತ್ತಲ್ಲ' ನಿನ್ನ ವೈರಿಯು ಬೇರೆ ಬೆಳೆಯುತ್ತಿದ್ದಾನೆ ಎಂದು ಹೇಳಿ 'ಎದೆಯ ತುಳಿದಂಬರಕೆ ಚಿಗಿ'ಯುತ್ತಾಳೆ. 'ಎನ್ನ ಪ್ರಾಣವ ಕಳೆವ ಚಿಣ್ಣನನು ಕೊಲುವುದಕೆ ಕನ್ನಡಿಯ ಗಂಟಾಯ್ತು ಕೈತಪ್ಪಿ ಹೋಯ್ತು' ಎಂಬ ವ್ಯಸನದಿಂದ ಕಂಸನು ಲೋಕದಲ್ಲಿ ಜನಿಸಿದ ಶಿಶುಗಳನ್ನೆಲ್ಲ ವಿಷದ ಮೊಲೆಯೂಡಿ ಕೊಂದುಬರುವುದಕ್ಕಾಗಿ ಪೂತನಿಯನ್ನು ಕಳುಹಿಸುತ್ತಾನೆ.

ಹಾಗೆ ಬಂದ ಪೂತನಿಯನ್ನು ಸುಬ್ಬನು ಹೀಗೆ ಉತ್ಪ್ರೇಕ್ಷಿಸಿದ್ದಾನೆ.

ಗರುಡನನು ಕೊಲಬಂದ ನಾಗಿಯೊ ।
ಕರಿಣಿಯೋ ಕೇಸರಿಯ ಸೆಣಸುವ ।
ಉರಗ ಪುತ್ತಿನ ಕೊರೆಯಬಂದಿಹ ಇಲಿಯ ಮರಿಯೊ ॥
ಲೋಕಶಿಶುಗಳ ಕೊಂದಮೊಲೆಯನು ।
ತಾಕರಾಗ್ರದಿಪಿಡಿದು ಬಾಯ್ಗಿ ।
ಟ್ಟಾಕಿ ಪಲ್ಗಳೊಳೆಳೆಯುತುಂಡನು ಲೋಕನಾಥ ॥

ಝಂಪೆತಾಳ॥—ಸೋಕಿದರೆ ಮೈಸುಡುವ ವಿಷವ ಕಟವಾಯಿಂದ ।
ಲೋಕರಿಸುತುಗುಳೆ ಧಾರೆಗಳ ।
ಆ ಕುಟಿಲೆಯಂಗರಕುತವಹೀರಿ ಬಿಡಲುಪರಿ ।
ದೋಕುಳಿಯುನಗರತುಂಬಿದುದು ।
ಮಗುವಲ್ಲಇದು ಮಾರಿ ಎನುತ ನಿಷ್ಠುರದ ಶ ।
ಬ್ದಗಳಿಂದ ಕೂಗಿಬಾಯ್ಬಿಡುತ ।

ಅಗಣಿತದಪರ್ವತಕೆ ವಜ್ರನಿಟ್ಟಂತೆ ಕೈ ।
ಯುಗುರ ಕೊನೆಯಿಂದ ಚಿವುಟಿದಳು ॥

ಒಂದರೆ ನಿಮಿಷದಲ್ಲಿ ಭಯಂಕರವಾದ ಸಿಜಸ್ವರೂಪದಲ್ಲಿ ಪು
ನಿಯು ಅಸುವಳಿದು 'ನೀಲಾದ್ರಿಯಂತೆ' ಕೆಡೆಯುತ್ತಾಳೆ. ಇದನ್ನು ಕಂ
ಯಶೋದೆಯು ಮಗುವಿಗೆ ವಿಷವೇರಿತೆಂದು ಹೆದರಿ 'ಅಡರಿದಣುಗ
ಪಿಡಿದು ಮನೆಗ್ಯೊದು ವಿಷದ ಗಾರುಡಿಗರನು ಕರೆಸಿ' ಮಂತ್ರೌಷಧಿ ಪ್ರಯೋ
ಗವನ್ನು ಮಾಡಿಸುತ್ತಾಳೆ. ಆ ಗಾರುಡಿಗರು ಶೇಷಶಾಯಿಯಾದ ಪರಮ
ಪುರುಷನಿಗೆ ವಿಷವೇರಿತೆಂಬ ಭ್ರಾಂತಿಯಿಂದ ವಿಷವಿಳಿಸಲು ತಲೆಗೆ ಸೊಪ್ಪಿ
ಕ್ಕಿದರೆಂಬ ರಚನೆಯನ್ನು ನೋಡಿರಿ:—

ಅಷ್ಟತಾಳ॥— ಸೊಪ್ಪನಿಕ್ಕಿದರುಗಾರುಡಿಗರು —ಶೇಷ ।
ತಲ್ಪಗೆ ವಿಷ ತಲೆಗೇರಿತೆಂದೆನುತ ॥ ಪಲ್ಲ ॥
ಎಂಭತ್ನಾಲುಕುಲಕ್ಷ ಜೀವರಾಶಿಗಳೆಲ್ಲ ।
ಬೊಂಬೆಯಮಾಡಿ ಕುಣಿಸುವಾತಗೆ ।
ಡಂಭಕತನದಿ ಪೂರ್ಣೇಂದು ಬಾಲಗೆ ವಿಷ ।
ದುಂಬಿರಾಕ್ಷಸಿ ರಾಹುಸೋಕಿತೆಂದೆನುತ ॥
ವಿಷವಭುಂಜಿಸುವನ ಮೇಲೇರಿಬಪ್ಪಗೆ ।
ವಿಷಕಂಧರನ ಮಿತ್ರಮಾಧವಗೆ ।
ವಿಷದವೊಲೆಯನುಂಡನೆನುತಲನಿಮಿಷರು ।
ಬಿಸರುಹನಯನನ ಪಾದಸರೋಜಕ್ಕೆ ॥
ಭೂತಪಂಚಕದೇಹ ತನ್ನಿಂದುದ್ಭವಿಸಿದ ।
ಭೂತಳನಿರ್ಮಿಸಿದಾತನಿಗೆ ।
ಪ್ರೇತಪಿಶಾಚಿಗಳಿಗೆ ಬಲಿಗಳ ನಾಡ ।
ಭೂತಕ್ಕೆ ಹರಕೆ ತಂಬಿಲ ಕೋಲ ಕಟ್ಟುತ್ತ ॥
ಕಣ್ಣುಕೈಕಾಲಾಡಿತಿನ್ನು ಯಶೋದೆಯ ।
ಪುಣ್ಯದಿಂದುಳಿಯಿತು ಶಿಶುವೆನ್ನುತ ।
ಕಣ್ವಪುರೀಶ ಶ್ರೀ ಗೋಪಾಲ ಕೃಷ್ಣನೆ ।
ಚೆನ್ನಾಗಿ ಸುಖದಲಿ ಬಾಳುಬಾಳೆನುತ ॥

ಆಮೇಲೆ ಗೋಪಿಯರು ಬಾಲಕೃಷ್ಣನನ್ನು ತೊಟ್ಟಿಲಲ್ಲಿಟ್ಟು ತೂಗುವ ಜೋಗುಳದ ಕೊನೆಯ ಪದ್ಯ ಹೀಗಿದೆ—

ಮಾಧವಯ್ಯನ ತೊಟ್ಟಿಲ ಮೇಲೆ ।
ಮಾಣಿಕ ಗುಲಗುಂಜಿಯ ಚೆಂಡಮಾಡಿ ।
ಮಾಣೋ ಮಾಣೆಂದು ಮುದ್ದಳೆಹೊಯ್ದು ।
ಮಾಧವ ಮಾಧವ ಶರಣೆಂದು ಗೋಪಿ ॥ ಜೋ ಜೋ ॥

ಹೀಗೆ ಶೈಶವ ಕಳೆದು ಬಾಲ್ಯದಲ್ಲಿ ನಂದಗೋಪನ ಮನೆಯ ಮುಂದಣ ಬೀದಿಯಲ್ಲಿ ಓಡಾಡುತ್ತಿರುವ ಚಿಣ್ಣಕೃಷ್ಣನ ಆನಂದವನ್ನು ನೋಡುತ್ತ ಗೊಲ್ಲತಿಯರು ದಧಿಭಾಂಡವನ್ನು ಹೊತ್ತುಕೊಂಡು ಹೋಗುತ್ತಿರುತ್ತಾರೆ. ಆ ಮಂದಗಮನೆಯರನ್ನು ಕಂಡು ಬಾಲಕೃಷ್ಣನು 'ಬಂದು ಸುಂಕಗಾರನು ತಾ।ನೆಂದು ತಡೆದು ನಿಲ್ಲಿಸಿದ'ನಂತೆ. ಆ ಸುಂಕದ ವಿನೋದ ವನ್ನು ಇಲ್ಲಿ ನೋಡಿರಿ:—

ಬಾಲಕೃಷ್ಣ:—ಕೊಟ್ಟುಪೋಗಿರೆನ್ನ ಸುಂಕವ—ಕೊಡದೆ ಕಣ್ಣ ।
ಅಷ್ಟತಾಳ॥—ಬಿಟ್ಟರಂಜುವನಲ್ಲ ದಿಟ್ಟೆಹೆಂಗಳಿರ ॥ ಪಲ್ಲ ॥
ಕುಂಭಿನಿಯೊಳಗೆ ಈ ನಂದಕೋಲದಲ್ಲಿ ।
ಒಂಭತ್ತು ಕಡೆಯಲಿ ಠಾಣ್ಯವುಂಟು ।
ಒಂಭತ್ತು ಕಡೆಯಲಿ ತೊಂಭತ್ತು ಸರತಿಗೆ ।
ಡೊಂಬಿಗೆ ಹೋಗುವ ಜಂಬಾರವಾಯ್ತು! ॥

ಗೊಲ್ಲತಿ:—ಸುಂಕದ ನಿಜವೇನುಪೇಳು - ನಿನ್ನ ।
ಅಂಕೆಗೆ ನಾವಂಜುವವರಲ್ಲ ಕೇಳು ॥
ಬಿಂಕವುಸಲ್ಲ ಬೀದಿಯೊಳೆಲ್ಲ ಹೊಲೆಕಣ್ಣು ।
ಸೋಂಕಿದರೆಡರಕ್ಕು ಮೈಗಾಯುಸವುಬಕ್ಕು ॥

ಕೃಷ್ಣ:—ಬೆಣ್ಣೆ ಮಣವಿಗೊಂದು ತಾರ - ಮೂರು ।
ಹೊನ್ನು ಮೊಸರಭಾರಕಹುದು ನೀವಿದರ ।
ಮನ್ನಿಸದಿರೆ ನಿಮ್ಮೆಲ್ಲವರ - ಮನೆ ।
ಯನ್ನೊಳಪೊಕ್ಕು ಸೆಳಕೊಂಬೆ ಪಾಲ್ಮೊಸರ ॥

ಗೊಲ್ಲತಿ:—ನಂದಗೋಪನ ಸುಕುಮಾರ – ಸಣ್ಣ ।
ಕಂದನೆ ನಿನಗೇತಕಿನಿತುವಿಚಾರ ।
ಮುಂದೆಮ್ಮ ತಡೆದಲ್ಲಿ ವಿವರ – ನಿನ್ನ ।
ತಂದೆತಾಯಿಗಳಲ್ಲಿ ಪೇಳ್ವೆವು ದೂರ ॥

ಈ ಹೆಂಗಳೆಯರು ಮನೆಗೈದಿ ಅಲ್ಲಿ ಮೊಸರು ಕಡೆಯುತ್ತಿರುವಾಗ ಚಿಣ್ಣಕೃಷ್ಣನು ಮೆಲ್ಲನೆ ಒಳನುಗ್ಗಿ ಬಚ್ಚಿಟ್ಟಿದ್ದ ಬೆಣ್ಣೆ ತುಪ್ಪ ಜೇನುಸಕ್ಕರೆಗಳನ್ನು ತಿಂದೋಡುತ್ತಾನೆ. ಮತ್ತಾ ವಸ್ತುಗಳು ಕಾಣೆಯಾದುದನ್ನರಿತು ಆ ಹೆಂಗಳೆಯರು ತಮ್ಮೊಳಗೆ ಆಶ್ಚರ್ಯದಿಂದ ಹೀಗೆ ಮಾತಾಡಿಕೊಳ್ಳುತ್ತಾರೆ:—

ಅಷ್ಟತಾಳ॥—ಯಾರೆಬಂದವರು! –ಇಲ್ಲಿಗೆಕಳ್ಳ । ರಾರೆ ಬಂದವರು! ॥
ಸೋರೆಯ ಮೊಸರುಬೆಣ್ಣೆಯ ತಿಂಬುತೋಡಿದ ॥ ಪಲ್ಲ ॥
ಸಿಕ್ಕದೊಳಿರಿಸಿದ ಮಡಕೆಗಳೊಳಗೆಲ್ಲ ।
ಬೆಕ್ಕಿನಂದದಿ ಮೆಲ್ಲ ಹುಡುಕಾಡುತ್ತ ।
ಅಕ್ಕನವರು ಭಾವಗೆಂದು ಕಟ್ಟಿರಿಸಿದ ।
ಸಕ್ಕರೆ ಜೇನುತುಪ್ಪವ ತಿಂಬುನೋಡಿದ ॥
ಸುತ್ತಲು ಚಾವಡಿಯೊಳು ಮಲಗಿರುವಾಗ ।
ಹಿತ್ತಿಲ ಬಾಗಿಲಿಂದೋಡಿ ಬಂದು ।
ಅತ್ತೆಯು ಮಲಗಿ ನಿದ್ರಿಸುವಾಗ ಕೊರಳಿಂದ ।
ಮುತ್ತಿನ ಸರವನ್ನು ಹರಿದು ಬಿಚ್ಚೋಡಿದ ।
ಹುಣ್ಣಿಮೆ ದಿವಸ ಮುತ್ತೈದೆ ಬ್ರಾಹ್ಮರಿಗೆಲ್ಲ ।
ಚೆನ್ನಾಗಿ ಬರಹೇಳಿ ಬಡಿಸಲೆಂದು ।
ಅಣ್ಣನವರು ತೆಗೆದಿರಿಸಿದ ರಸಬಾಳೆ ।
ಹಣ್ಣಿನ ಗೊನೆಯ ವಂಚನೆ ಮಾಡುತೋಡಿದ ॥
ಮರುಳಾದೆ ಏನೆ ಬಾಲೆ– ಇಲ್ಲಿಗೆ ರಾತ್ರಿ । ಬರುವರಾರುಂಟು ಪೇಳೆ ।
ನೆರೆಹೊರೆಯುವರು ಎಚ್ಚರಿತುಕೊಂಡಿರುವಾಗ ।
ಸರಿರಾತ್ರೆಯೊಳಗೊಬ್ಬ ಸುಳಿವ ಮಾತುಂಟೇನೆ? ॥

ಚಿನ್ನಬೆಳ್ಳಿಗಳ ಬಿಟ್ಟು—ಸಕ್ಕರೆಬಾಳೆ । ಹಣ್ಣಿಗೆಂದಾಸೆವಟ್ಟು ।
ಬೆಣ್ಣೆ ತುಪ್ಪಗಳ ಮೆಲ್ವರೆ? ಮನೆಯೊಳಗಿದ್ದ ।
ಸಣ್ಣವರಾಟವಲ್ಲದೆ ಬೇರಿನ್ನಾರುಂಟು? ॥
ಅಕ್ಕ ನೀ ಸುಮ್ಮನಿರೆ—ಆದರೆ ಕಳ್ಳ । ಸಿಕ್ಕದೆ ಪೋಪನೇನೆ ।
ದಕ್ಕದು ಕಳವುಹಾದರವೆರಡಕು ಸಣ್ಣ ।
ಮಕ್ಕಳಾದರು ಕಂಡು ಸೊಕ್ಕ ಮುರಿಯಬೇಕು ॥

ಮರುದಿನ ಬೆಳಗಾಗಲು ಮತ್ತೊಬ್ಬಳು ತುರುಗೆಲಸದಲ್ಲಿರುವಾಗ ಚಿಣ್ಣ ಕೃಷ್ಣನು ವಿಣ್ಣನೆ ಮನೆಯೊಳ ಹೊಕ್ಕು 'ಕೆನೆ ಮೊಸರ ಸುರಿದೋಡು'ವುದನ್ನು ಕಂಡು ಓಡಿಬಂದು ನೆರೆಮನೆಯ ಸಖಿಯೊಡನೆ ಹೇಳುತ್ತಾಳೆ:—

ಝಂಪೆ॥—ಅಕ್ಕ ಕೇಳೀ ಕೇರಿ ಒಕ್ಕಲೊಳು ಕಳುವವರು ।
ಮಕ್ಕಳೊಳಗಲ್ಲದೆ ಬೇರೊಬ್ಬರಿಲ್ಲ ॥
— — — — — —
— — — — — —
ನಂದಗೋಪ ಯಶೋದೆ ಕಂದನಲ್ಲದೆ ಮನೆಗೆ ।
ಬಂದು ಕಳುವವರಿಲ್ಲ ಬದಲೊಬ್ಬರಲ್ಲ ॥
ಅರಸುಗಳ ಬಾಲಕರು ಅನ್ಯಾಯ ಮಾಡಿದರೆ ।
ಪರರೊಡನೆ ಪೇಳ್ದರದ ಪರಿಹರಿಪರಿಲ್ಲ ॥

'ಬೇಲಿಯೇ ಬೆಳೆ ತಿಂದು ಕೆಡಿಸಿದರೆ' ನಾವಿನ್ನು ಹೇಗೆ ಬದುಕಲಿ? ಎಂದು ಎಲ್ಲರೂ ಒಗ್ಗಟ್ಟಾಗಿ ಕೃಷ್ಣನ ಚಿಣ್ಣಾಟವನ್ನು ದೂರಲು ಅರಮನೆಗೆ ಬರುತ್ತಾರೆ. ಬಂದವರನ್ನು ಕಂಡು ಗೋಪಿಯು 'ಊಟ ವಿವಾಹಗಳಲ್ಲಿ ತೊಡರು ಬಂದಡರಿತೆ ಏನಿರವ್ವ । ಬಲು । ಕಾಟಕ ಜನರಿಂದ ಕನವು ಬಂದೆ ಸಗಿತೆ ಏನಿರವ್ವ?' ಎಂದು ಎಲ್ಲರೊಟ್ಟಾಗಿ ಬಂದ ಕಾರಣವನ್ನು ಕೇಳಲು ಅವರು ಕಳ್ಳ ಕೃಷ್ಣನಾಟಗಳನ್ನು ಮುದದಿಂದ ಹೀಗೆ ಹೇಳುತ್ತಾರೆ:—

ಮಟ್ಟೆತಾಳ॥—ಕೇಳೆ ಗೋಪಿ ರಂಗನಾಟವ—ನಿನ್ನಲ್ಲಿ ನಾವು ।
ಪೇಳದಿರುವುದುಚಿತವಲ್ಲ ಪೇಳ್ದರಿಷ್ಟು ಕಾರ್ಯವಿಲ್ಲ ॥
ಇರಿಯ ರಾತ್ರಿಯೊಳಗೆ ಬಾಗಿಲ್ಮುರಿಯಲಾಗಿ ಬೆದರಿ ಕದವ ।

ತೆರೆಯುಲೊಳಗೆ ಬಂದು ನಾ। ವರಿಯುದಂತೆ ಹಾಲು ಮೊಸರ।
ಸುರಿಯುಲದರ ನೋಡಿ ಸುಮ್ಮನೆ—ನಾವಿರಲು ಸ।
ಕ್ಕರೆಯು ಕದ್ದು ಮೆಲುವ ಗಮ್ಮ। ನೆ—ನಗುತ ಮೇ।
ಗರಿಯ ಮಾಡಿ ಬಿಡುವ ನಮ್ಮ। ನೆ—ನೀ ಕರುಣದಿಂದ॥ ಕೇಳೆ—
ಅಟ್ಟದ ಮೇಲಡಗಿಸಿ ಬ। ಚ್ಚಿಟ್ಟರದರ ಬುಡಕೆ ಕೋಲ।
ಲಿಟ್ಟು ತೂತುಮಾಡಿ ಬಂ। ದಷ್ಟು ಬಾಯನಿಟ್ಟು ಸವಿಯು।
ತೊಟ್ಟಿನವರ ಕರೆದು ಕೊಡುವ। ನು—ಬೆದರಿಸೆ ಕ।
ಲ್ಲಿಟ್ಟು ಭಾಂಡಗಳನೆ ಒಡೆವ। ನು – ಸತಿಪತಿಯುರ।
ಜುಟ್ಟುಜುಟ್ಟು ಕಟ್ಟಿಬಿಡುವ। ನು—ನೀ ಕರುಣದಿಂದ॥ ಕೇಳೆ—

'ಸಂಜೆಯೊಳಂಗಳಕಿಳಿಯದ ಬಾಲ'ನ ಮೇಲೆ ಸಲ್ಲದ ದೂರುಗಳನ್ನು ಹೇಳಿದರೆ ಗೋಪಿಯು ನಂಬುವಳೆ? ಅವಳು ಪರಿಹಾಸದಿಂದ—

'ಸರಿರಾತ್ರಿಯೊಳಗೆನ್ನ ತರಳ ಮನೆಗೆ ಬಂದ ಗುರುತವೇನಮ್ಮ ಪೇಳೆ
— — — — — — — — — —
ಕಂದನಿರುಳು ನಿಮ್ಮ ಮಂದಿರದೊಳು ಬೆಣ್ಣೆ ತಿಂದಿಹ ಗುರುತವೇನೆ?'।

ಎಂದು ಅವರನ್ನೆ ಕೇಳಿ ಮನ್ನಿಸಿ ಕಳುಹಿಸುತ್ತಾಳೆ. ಮರುದಿನ ಮತ್ತೊಬ್ಬಳು ಬಂದು ಹೀಗೆ ದೂರುತ್ತಾಳೆ:—

ಅಷ್ಟತಾಳ॥—ಎಷ್ಟೆಂದು ಹೇಳಲಮ್ಮ—ಗೋಪಾಲನ।
ದುಷ್ಟತನವ ಗೋಪಮ್ಮ।
ಕಟ್ಟಿದ ಕರುಗಳ ಬಿಟ್ಟು ಕರೆವ ಮುನ್ನ।
ಹಟ್ಟಿಯಿಂ ನೆಗೆದೋಡಿದ—ಕೇಳು ವಿನೋದ॥
ಬಣ್ಣಗತಿಯುಲಿ ಬಂದ—ಪಾಲ್ಮೊಸರ್ತುಪ್ಪ।
ಬೆಣ್ಣೆಯು ಕದ್ದು ತಿಂದ॥—
ಮಿಣ್ಣನೆ ಮಲಗಿದ್ದ ಚಿಣ್ಣನ ಮೂಗಿಗೆ।
ಸುಣ್ಣವ ಬರೆದೋಡಿದ—ಕೇಳು ವಿನೋದ॥
ಅಷ್ಟೆಲ್ಲ ಕಂಡು ನಾವು—ಅಟ್ಟದಲಿ ಬ।
ಚ್ಚಿಟ್ಟರೆ ಅದ ನೋಡಿದ।

ಮೆಟ್ಟಿ ಗೋಪರ ಹೆಗಲಲಿ ನಿಂತು ಬಳಿಕ ಕ ।
ಲ್ಲಿಟ್ಟೋಡಿ ಪೋದ ಕಾಣೆ—ಕೇಳೆಲೆ ಜಾಣೆ ॥
ಭಟ್ಟಬ್ರಾಹ್ಮರಿಗೆನ್ನುತ—ಮೂಲೆಯಲಿ ಬ ।
ಚ್ಚಿಟ್ಟಿರ್ದಡದ ನೋಡುತ ॥
ಕೆಟ್ಟ ಮೂಳಿಯ ಮಕ್ಕಳೆನುತ ಬಾಗಿಲ್ಗೆ ಕ ।
ಲ್ಲಿಟ್ಟೋಡಿ ಪೋದನಮ್ಮ—ಕೇಳೆ ಗೋಪಮ್ಮ ॥
ಅದಕ್ಕೆ ಗೋಪಿಯ ಉತ್ತರ:—

ಕಂದ॥—ಮಕ್ಕಳ ಮಾಣಿಕ ಪಾಲ್ಮೊಸ ।
ರಿಕ್ಕಿದರದನುಣ್ಣ ಸೇರದು ಬೆಣ್ಣೆ ।
ಚಿಕ್ಕವ ನಿಮ್ಮಡಿಗೆಯ ಮನೆ ।
ಪೊಕ್ಕನು ಸರಿರಾತ್ರೆ ಎಂಬ ಮಾತಿದು ಚೋದ್ಯಂ ॥

ಅರಮನೆಯಲ್ಲಿ ಒತ್ತಾಯಿಸಿ ಕೊಟ್ಟರೂ ಹಾಲು ಮೊಸರು ಬೇಡವೆನ್ನುವವ, ಬೆಣ್ಣೆ ಆತನಿಗೆ ಸೇರುವುದೇ ಇಲ್ಲ! ಇಂಥ ಸ್ವಭಾವದ ಬಾಲಕನು ಪರರ ಮನೆಯ ಹಾಲು ಮೊಸರನ್ನು ನಡುವಿರುಳು ಕದ್ದುಣ್ಣುವನೆಂಬ ಮಾತನ್ನು ಗೋಪಿ ನಂಬುವಳೆ? ದೂರುತಂದವರಾದರೂ ಅಷ್ಟಕ್ಕೆ ಬಿಡುವರೆ? ಅವರಲ್ಲಿ ದಿಟ್ಟೆಯೊಬ್ಬಳು ಮುಂದೆ ಬಂದು 'ಹೋಗಲಿ, ಹಾಲು ಮೊಸರಿನ ಸಂಗತಿಯಂತಿರಲಿ, ಅದು ಸಣ್ಣವನ ಮಕ್ಕಳಾಟಿಕೆ ಎನ್ನೋಣ... ಇದಕ್ಕೇನೆನ್ನುವಿ?' ಎಂದು, ನಾಚಿಕೆಯಿಂದ ಹೇಳದೆ ಸುಮ್ಮನಿದ್ದ ತನ್ನ ಮಗಳ ದೂರನ್ನು ತಾನೇ ಹೀಗೆನ್ನುತ್ತಾಳೆ:—

ಇದೂ ಸಣ್ಣವನಾಟವೊ?

ದಿಟ್ಟೆ:—ಸಣ್ಣವರಾಟವಲ್ಲ—ಸಂಗಡ ಬಂದ ।
ಚಿಣ್ಣರೊಳ್ ಕೇಳ್ದೆನೆಲ್ಲ ।
ಅಣ್ಣರಾಮುರಿಯದಂದದೊಳೊಮ್ಮೆ ಬಂದಿವಳ
ಬಣ್ಣದುಟಿಯ ಸವಿದ—ಕೇಳು ವಿನೋದ ॥ ಸಣ್ಣವರಾಟವಲ್ಲ ॥

ಗೋಪಿ:—ಎಂದೂ ಎನ್ನಣುಗನಿಗೆ—ಆಲದ ಹಣ್ಣು ।
ತಿಂದು ಅಭ್ಯಾಸವಾಗೆ ।

ಒಂದರಿಯದ ಬಾಲ ಮುಗುದ ನಿನ್ನಧರವ ।
ತಿಂದರಿಂದೇನಾಯಿತೆ?— ಪೇಳೆಲೆ ಕಾಂತೆ ॥ ಚಿಕ್ಕವನಲ್ಲವೇನೆ ॥

ದಿಟ್ಟೆ:— ನಸುಬೆಳಗಾಗುವಾಗ— ಯವ್ವನವತಿ ।
ಮೊಸರ ಮಂತಿಸುತಿಪ್ಪಾಗ ॥
ಕುಶಲದಿಂದೆಳೆದಮರ್ದಪ್ಪುತ ತರುಣಿಯ ।
ಪೊಸಕುಚಂಗಳ ಮುಟ್ಟಿದ— ನೋಡು ವಿನೋದ ॥ ಸಣ್ಣವನಾಟ

ಗೋಪಿ: — ದೇವತಾರ್ಚನೆಗೆನ್ನುತ— ನಿತ್ಯದಲಿ ರಾ ।
ಜೀವಗಳನೆ ಕೊಯ್ಯುತ ।
ತಾವರೆ ಮೊಗ್ಗೆ ಎಂದರಿಯದೆ ಮುಟ್ಟಲು ।
ಅವಮಾನ ಘನವಾಯಿತೆ? — ಪೇಳೆಲೆ ಕಾಂತೆ ॥ ಚಿಕ್ಕವನಲ್ಲವೇನೆ?

ದಿಟ್ಟೆ:— ನೀರನು ತರ ಹೋಹಾಗ— ಈ ಸುದತಿಯು ।
ದಾರಿಯಡ್ಡವ ಕಟ್ಟಿದ ।
ನಾರಿ ಹೇಳಿದಕೇನು ಬೆಲೆ ಕೊಟ್ಟೆ? ಎನುತುಟ್ಟ ।
ಸೀರೆಯನೆಗದೋಡಿದ — ಕೇಳು ವಿನೋದ॥ ಸಣ್ಣವರಾಟಲ್ಲ —

ಗೋಪಿ: — ಆರೇಳು ವರ್ಷವಾದ - ಬಾಲಕನುಟ್ಟ ।
ಸೀರೆಯೊಂದವ ನೋಡಿದ ।
ಸೌರಮ್ಯಾಂಬರವಿದರ ಬೆಲೆ ಏನೆನುತ ಮೇಲೆ ।
ಹಾರಿಸಲೇನಾಯಿತೆ? । — ಪೇಳೆಲೆಕಾಂತೆ ॥ ಚಿಕ್ಕವನಲ್ಲವೇನೆ? —

ಈ ರೀತಿ ಹಲವು ಪರಿಯ ಚಾಟುಸಂಭಾಷಣೆಗಳಾಗಿ ಕಡೆಗೆ ಗೋಪಿಯು ‘ಇನ್ನುಮುಂದೆ ಕೃಷ್ಣನು ನಿಮ್ಮಲ್ಲಿ ಕಳ್ಳಚೇಷ್ಟೆಗೆ ಬಂದರೆ ಆತನನ್ನು ಹಿಡಿದೆಳೆದು ತನ್ನಿರಿ ತಕ್ಕ ಶಿಕ್ಷೆಮಾಡುತ್ತೇನೆ’ ಎಂದು ಸಮಾಧಾನ ಹೇಳಲು ಗೊಲ್ಲತಿಯರು ಹಿಂತೆರಳುತ್ತಾರೆ. ಆ ಮೇಲೊಂದು ದಿನ ಸಮಯ ಸಾಧಿಸಿ ಪಾಲ್ಮೊಸರು ಕದ್ದೋಡುವ ಗೋಪಾಲಕೃಷ್ಣ ಆವರ ಕೈಗೆ ಸಿಕ್ಕುತ್ತಾನೆ. ಕಳ್ಳ ಸಿಕ್ಕಿದ ಸಂತೋಷದಿಂದ ಅವರು ತಮ್ಮೊಳಗೆ ಒಬ್ಬರಿಗೊಬ್ಬರು ಕೃಷ್ಣನ ತಪ್ಪುಗಳನ್ನು ಹೀಗೆ ಮೆಚ್ಚಿಸಿಕೊಳ್ಳುತ್ತಾರೆ.

ಅಷ್ಟತಾಳ॥— ಸಿಕ್ಕಿದ— ಕಳ್ಳ— ಸಿಕ್ಕಿದ— ಇವನ ।
ಸೊಕ್ಕುಗಳನೆ ಮುರಿದಿಕ್ಕದೆ ಬಿಡೆವೀಗ ॥ ಪಲ್ಲ ॥
ಬೊಂಬೆಯು ಮದುವೆಯಾಟದೊಳಿರಲಿವಬಾಲ ।
ನೆಂಬುದಕಾಗಿ ಸುಮ್ಮನೆ ಬಿಟ್ಟೆವು ।
ಕಂಬದ ಮರೆಗಾಗಿ ಕರೆದೊಯ್ದೀತರುಣಿಯ ।
ಚುಂಬಿಸಿ ತುಟಿಕಚ್ಚಲುಚಿತವೇನಮ್ಮ? ॥
ಮೊಸರು ಬೆಣ್ಣೆ ಬಾಳೆಹಣ್ಣ ತಾ ಮೆಲುವಾಗ ।
ಹಸುಮಗುವೆಂದು ಪಾಲಿಸಿಕೊಂಡೆವು ॥
ನಿಶಿಯೊಳಡಗಿ ಬಳಿಗೈತಂದೀ ತರುಣಿಯ ।
ಪೊಸಕುಚಂಗಳ ಮುಟ್ಟಲುಚಿತವೇನಮ್ಮ? ॥
ಕಣ್ಣಮುಚ್ಚಳೆಯನಾಡುವ ಎಂದು ಕರೆವಾಗ ।
ಸಣ್ಣವನೆಂದು ತಣ್ಣಗೆ ಬಿಟ್ಟೆವು ।
ಕಣ್ವಪುರೀಶ ಶ್ರೀಕೃಷ್ಣ ಈ ತರುಣಿಯ ।
ಬೆನ್ನಿನ ಮೇಲೇರಿ ಇರಬಹುದೇನಮ್ಮ? ॥ ಸಿಕ್ಕಿದ—

ಸಿಕ್ಕಿದ ಕಳ್ಳ ತಪ್ಪಿಸಿಕೊಂಡೋಡದ ಹಾಗೆ ರಾತ್ರಿ ಎಲ್ಲರೂ ಕಾದಿರುತ್ತಾರೆ. ಮನೆಗೆ ಬಾರದ ಮಗನನ್ನು ಕೇರಿಕೇರಿಯಲ್ಲಿ ಹುಡುಕುತ್ತ ಬಾಲನ ಸೌಂದರ್ಯವನ್ನು ಬಣ್ಣಿಸಿ ಯಶೋದೆಯು ಹಂಬಲಿಸುವ ಪದ್ಯ:—

ಏಕತಾಳ॥— ರಂಗ ಬಂದ । ನೆ—ಪಾಂಡು । ರಂಗ ಬಂದ । ನೆ—
ರಂಗು ಮಾಣಿ । ಕದ ಹರಳ । ಉಂಗುರದ । ಕೈಯಬೆರಳ ॥ ಪಲ್ಲ ॥
ಸಿರಿಯು ಸೋ । ಲ್ಮಡಿಯ ಸೌಂ । ದರಿಯ ಪು । ಷ್ಪಮಾಲೆಯ ।
ಧರಿಸಿ ಕುಂ । ಕುಮುವ ಕ ।ಸ್ತುರಿಯನಾಮ ।
ಹಣೆಯೊಳಿಟ್ಟು ॥ ರಂಗ ॥
ಕೊರಳ ಕೌ । ಸ್ತುಭಹಾರ । ಮೆರೆವ ಕ । ರ್ಣಕುಂಡಲ ।
ಕರದಿ ಕಂ । ಕಣ ಪೀತಾಂ । ಬರದುಡಿ । ಗೆಯನುಟ್ಟು ॥ ರಂಗ—
ಉರದೊಳೊ । ಪ್ಪುವ ರತ್ನ । ವರವೈಜ । ಯಂತೀಮಾಲೆ ।
ಕರದ ಕೊ । ಳಲ ಕಣ್ವ । ಪುರದ ಗೋಪಾಲಕೃಷ್ಣ ॥ ರಂಗ—

ಹೀಗೆ ಅಂಗಲಾಚಿ ಕರೆಯುತ್ತ ಬರುವ ಗೋಪಿಯ ಮುಂದೆ ಗೊಲ್ಲ ಹೆಂಗುಸರು ಕಳ್ಳನನ್ನು ತಂದೊಪ್ಪಿಸಿ ಹೀಗೆನ್ನುತ್ತಾರೆ:—

ಏಕತಾಳ॥—ಗೋ ॥ ಪಮ್ಮ ನಿಮ್ಮ । ಕಂದನ । ಕೆಟ್ಟಚಾಳಿಯ । ಬಿಡಿಸೆ—
ಬೇಡವೆಂದೊಡ । ಬಡಿಸೇ—
ದಯದಿಂದೆಮ್ಮನು । ನಡೆಸೇ—
ಬೇಕಾದ್ದೆಲ್ಲವ । ಕೊಡಿಸೇ ॥ ಗೋ ॥ ಪಲ್ಲ ॥

ಸುಳ್ಳು ಮಾ । ತಾಡುವಿರಿ ನೀ । ವೆಂದೆ ಗೋ । ಪಾಲಕೃಷ್ಣ ।
ಒಳ್ಳೆಯವ । ನೆಂದೆ ಗುಣದಿ । ಹಿಂದೆ— । —ದಯ ।
ಉಳ್ಳಡಿ । ನ್ನಾದರೂ । ಮುಂದೆ— । —ಇಕ್ಕೊ ।
ಕಳ್ಳನ । ನೊಪ್ಪಿಸಿದೆವು ನಾ । ವಿಂದೆ— । —ಸಟೆ ।
ಯಲ್ಲ ಕೈ । ಮುಗಿದು ಬೇಡುವ । ದೊಂದೆ—ಗೋ । ಪಮ ನಿಮ್ಮ ॥
ಬೆಳಗು ಜಾ । ವದಲಿ ಮೆಲ್ಲಗೆ । ಬಂದ— ದಂ । ಪತಿಗಳು ಕೋಣೆ ।
ಯೊಳಗೆ ಮಲ । ಗಿರಲು ಲಜ್ಜ । ಮುಂಡ— ಪೇ । ಳಲೇನ್ ಬಂಡ ।
ಇಳೆಯೊಳ । ಗೀತನೆ ಬಲು । ಪುಂಡ—ಮಂ । ಚದ ಕೆಳಗೆ ।
ಕುಳಿತಲ್ಲಿ । ಯವರ ನಿಜವ । ಕಂಡ— ನಾ । ಚಿಕೆ ಇಲ್ಲದೆ ।
ಒಳಗೆ ನಗು । ತಿರುವನು ದೇವ ಮು । ಕುಂದ—ಗೋ ।
ಪಮ್ಮ ನಿಮ್ಮ ॥

ಕಳ್ಳನನ್ನು ಹಿಡಿದು ತಂದರೆ ದಂಡಿಸುವೆನೆಂದು ಹಿಂದೆ ಹೇಳಿದ ಮಾತಿಗೆ ಈಗೇನೆನ್ನುವಳು ಗೋಪಿ? 'ತಿಂದ ಮೊಸರಿನ ಸೋರುದುಪ್ಪದ ಜೊಲ್ಲು ಕೈಬ್ಬಾಯ ಎಂಜಲೂಡಿರಲು' ಬೇರೆ ಸಾಕ್ಷ್ಯ ಬೇಕೆ? ಚಿಣ್ಣನ ಕಳ್ಳತನಕ್ಕೆ ತಾನೇ ನಾಚಿಕೊಂಡು ಮನೆಗ್ಕೊಯ್ದು ಪರಿಪರಿಯಿಂದ ಬುದ್ಧಿ ಹೇಳುತ್ತಾಳೆ. ಆ ಪದ್ಯಗಳೆಲ್ಲ ಬಹಳ ಸೊಗಸಾಗಿವೆ. ವಿಸ್ತರ ಭಯದಿಂದ ಬಿಟ್ಟಿದ್ದೇನೆ. ಅವುಗಳಲ್ಲಿ ಗೋಪಿಯ ಮಾತಿನ ಕೊನೆಯ ಪದ್ಯವೊಂದನ್ನು ಹಾಡುತ್ತೇನೆ—

(ಚಾಪು) ಅಪ್ಪತಾಳ॥—ಅರಿತವ । ರಂತರಂ । ಗದಿ ನಿನ್ನ । ವರ ಕಣ್ವ ।
ಪುರದ ಶ್ರೀ ಗೋಪಾಲಕೃಷ್ಣನೆಂದು ।

ಹಿರಿಯಣ್ಣ ಬಲರಾಮನುರಗೇಂದ್ರನೆಂಬಂಥ ।
ಮರಿಯಾದೆಯಲಿ ಪಾಠಕರು ಪೊಗಳುವುದಾಗಿ ।
ತರವೇನೊ ರಂಗ ನಿನಗಿಂಥ ಚಾಳಿ ॥

ಬಾಲಕೃಷ್ಣನು ತಾನು ಏನೊಂದೂ ಅರಿಯದ ನಿರಪರಾಧಿ, ತಪ್ಪೆಲ್ಲ ಆ ಗೊಲ್ಲತಿಯರದು ಎಂದು ತಾಯಿಗೆ ತೋರಿಸುವ ಚಮತ್ಕಾರದ ಪದ್ಯವೊಂದು ಹೀಗಿದೆ:—

ಮಟ್ಟೆತಾಳ॥— ತಡೆಯದೆಂದಿ । ನಂತೆ ಗೋಪ । ಹುಡುಗರೊಡನೆ ।
ಗೋವ್ಗಳನ್ನು ।
ಹೊಡೆದುಕೊಂಡು ಹೋಗಲ್ಮರಿಯೊಳಡಗಿ ಎನ್ನ ಬಾ ಬಾರೆಂದು ।
ಕಡುವಿನೋದದಿಂದ ಕರೆವರು— ಮುಂದ್ವರಿಯೆ ಕೈಯ ।
ಪಿಡಿದು ಒಳಮಂದಿರಕೆ ಒಯ್ವರು—ಹಲವು ಚೇಷ್ಟೆ ।
ನಡೆಸಿ ಉಟ್ಟವಸನ ಸುಲಿವರು—ಮಂಚದ ಮೇ ।
ಲಡರಿಸುತಲಿ ತೊಡೆಯಸಂದಿನೆಡೆಯೊಳೌಕಿ ಬಹಳ ಭಂಗ ।
ಬಡಿಸಿ ವಿವಿಧ ಬೆಡಗುದೋರಿ ನಡೆವರಿವರ ಕೆಡುಕುತನಕೆ ॥
ಬೆದರಿಸದಿರು ಇದಕೆ ಎನ್ನನು ॥
ಇರುಳಿನಲ್ಲಿ ಬೆದರಿ ಒಳಮಂದಿರವ ಪೊರಡದಿರುವ ನಾನೊಂ ।
ದರಿಯೆನಿವರ ದಾವಾವೆಡೆಯೊಳಿರುವುದೆಂಬ ತೆರನಿದೆಲ್ಲ ।
ತಿರುಕನಂತೆ ತಿರುಗಲರಿವೆನೆ?—ಪಾಲ್ಮೊಸರ ಗಡಿಗೆ ।
ಸುರಿದು ಬೆಣ್ಣೆ ಮೆಲುತ ಬರುವೆನೆ?— ಬಚ್ಚಲಿನೊಳಡಗೆ ।
ಮರುಳನೇ ನಿನ್ನsಗಲಿ ಇರುವೆನೆ?— ಬೇಕಾದುದೆಲ್ಲ ।
ನಿರತ ಉಣಿಸುತಿರುವೆಅದನು ತೊರೆದು ಕದ್ದು ಮೆಲ್ಲಲೇನು ।
ಕೆರೆಯೆ ಎನ್ನ ಹೊಟ್ಟೆ? ಏಕೆ ಜರೆವೆಯವರ ಬರಿಯನುಡಿಗೆ॥

ಚಿಣ್ಣನ ಮಾತಿಗೆ ಮನ ಕರಗಿದ ಗೋಪಿ—

ಏಕತಾಳ॥— ಎತ್ತಿ ಆಡಿಸಿದಳು ।ಚಿತ್ತಜಪಿತನ ।
ಮುತ್ತಿಟ್ಟು ಪಾಲ ಕುಡಿಸಿ ಗುಣಯುತನ ॥ ಪಲ್ಲ ॥

— — — — — —

— — — — — —
ಅತ್ತಿತ್ತ ಪೊಗಗೊಡೆನೆನುತ ಮೋದದಲಿ ।
— — — — — —
ನಂದನ ಪವಡಿಸೆನ್ನೊತ್ತಿನೊಳೆಂದು ।
ಮಂದಗಮನೆಪಾಡಿ ನಿದ್ರಿಸಲೆಂದು ॥

ಅಂದಿನಿಂದ ಗೋಪಾಲಕೃಷ್ಣನನ್ನು ಇರುಳೆಲ್ಲ ಗೋಪಿಯು ತನ್ನೊತ್ತಿನಲ್ಲಿ ಮಲಗಿಸಿ ಕಾಯುತ್ತಿರುವುದು, ಹಗಲು ಹೊತ್ತಿನಲ್ಲಿ ಆತನು ನೆರೆ ಮನೆಯ ಲೂಟಿಗೆ ಹೋಗದಂತೆ ಬಲರಾಮ ಸಹಿತ ಗೋವಳರ ಕಾವಲಿನಲ್ಲಿ ಗೋಪಾಲನೆಗಾಗಿ ದೂರದ ಹೊಲಕ್ಕೆ ಕಳುಹಿಸುವುದು; ಗೋಪಿಯ ಈ ನೇಮದಿಂದಲಾಗಿ ಗೊಲ್ಲರಕೇರಿಯಲ್ಲಿ ಕೃಷ್ಣನ ಸುಳಿವಿಲ್ಲದಾಯಿತು. ಗೋಪ ಸ್ತ್ರೀಯರ ಕಣ್ಣು ಬೇಡಿತು, ಬೇಸರಿಕೆ ಹೆಚ್ಚಿತು, ವಿರಹ ಉರಿಯಿತು. ಹಿಂದೆ ದೂರಿದವರು ಇಂದು ಮರುಗಿದರು. ತಮ್ಮತಮ್ಮೊಳಗೆ ಚಿಣ್ಣ ಕೃಷ್ಣನ 'ಮುದ್ದು ಮೊಗ, ಮುಗುಳುನಗೆ, ತಿದ್ದಿದ ಕಪೋಲ'ಗಳ ಸೌಂದರ್ಯವನ್ನು ಕೊಂಡಾಡಿದರು—

'ಗಾಡಿಕಾರದ ಮುದ್ದು ಮೋರೆ ನಟನೆಯಿಂದ ।
ಆಡುತ್ತ ದಿನದಿನ ಬರುವ ಗೋಪಾಲ ।
ಬೆದರಿಸೆ ತಾಯ ಮಾತಿಗೆ ತಾ ಕೋಪಿಸಿಕೊಂಡು ।
ಬದಲೊಂದು ರಾಜ್ಯವ ಸೇರಿದನೇನೊ?'

ಎಂದು ಹಂಬಲಿಸುತ್ತ 'ಕಾಣದೆ ನಿಲಲಾರೆವೈ ಚಿಕ್ಕಯ್ಯನ' ಎಂದು ಎಲ್ಲರೊಂದಾಗಿ ಹುಡುಕುತ್ತ ಯಮುನೆಯ ದಡಕ್ಕೆ ಬಂದು ಅಲ್ಲಿಯೂ ಕಾಣದೆ ಕಂಗೆಟ್ಟು ಕೃಷ್ಣದರ್ಶನದ ಇಷ್ಟಾರ್ಥ ಪ್ರಾಪ್ತಿಗಾಗಿ ಮಳಲಿನ ಗೌರಿಯನ್ನು ಮಾಡಿ 'ಧೂಪ ದೀಪ ಗಂಧಪುಷ್ಪ ಫಲ ಮಹಾನೈವೇದ್ಯ'ಗಳಿಂದ ಪೂಜಿಸಿ ಮಂಗಳಾರತಿ ಬೆಳಗಿ ಶೋಭನ ಹಾಡಿ ಈ ರೀತಿ ಪ್ರಾರ್ಥಿಸುತ್ತಾರೆ:—

ತ್ರಿವುಡೆತಾಳ॥—ಶರಣು ಸಕಲಾಭೀಷ್ಟದಾಯಕಿ ।
ಶರಣು ತ್ರಿಭುವನ ಪಾಲಕಿ ।—

ಶರಣು ಪರ್ವತರಾಜಬಾಲಕಿ ।
ಶರಣು ವರ ನೀಲಾಳ ಕಿ ।
ಪಂಕಜಾನನೆ ಪರಮ ಪಾವನೆ ।
ಶಂಕರಾರ್ಧಶರೀರಿಣಿ ।—
ಶಂಖಚಕ್ರಗದಾಬ್ಜ ಪಾಣಿ ಭ ।
ಯಂಕರೋಂಕಾರವಾಹಿನಿ । ಶರಣು ಶರಣು ॥

ಸುಬ್ಬನ ಈ ಪದ್ಯವನ್ನೂ ಸಭಾಲಕ್ಷಣದ 'ಶರಣುತಿರುವಗ್ರಶಾಲಿ ವಾಹಿನಿ' ಎಂಬ ಪದ್ಯವನ್ನೂ ಹೋಲಿಸಿ ನೋಡಿರಿ.

ಹೀಗೆ ಪ್ರಾರ್ಥಿಸಿ ವಿಧಿಪ್ರಕಾರ ದಂಪತಿಗಳಿಗೆ 'ಬಾಯುನ ದಾನವನ್ನಿತ್ತು' ಹರಕೆ ಹೊತ್ತು ಶ್ರೀ ಗೌರಿಯ ವರಪ್ರಸಾದವನ್ನು ಬೇಡುವ ಪದ್ಯ:—

ಆದಿತಾಳ॥ — ಹೂವಕೊಡೆ ಗೌರಿ । ಹೂವ ಕೊ । ಡೆ ಸತ್ಯ ।
ಭಾವೆಯ ರಮಣನೆಮ್ಮ । ನಾಳುವಾತ । ನಾಗುವಂತೆ ॥ ಪಲ್ಲ ॥
ಎನ್ನ ಮನದಭೀಷ್ಟಂಗ । ಳನ್ನು ನೀ ಪಾಲಿಸಿದರೆ ।
ಹೊನ್ನ ಗೋಪುರಕ್ಕೆ ಕಲಶ । ವನ್ನು ಸಲಿಸುವೆ— ।
ಚಿನ್ನದ ತೋರಣವ ಕಟ್ಟಿ । ಮುತ್ತಿನ ಚ । ಪ್ಪರವ ನಿಕ್ಕಿ ।
ಹನ್ನೊಂದು ನವಮಿಯ ಉಪವಾಸ । ವನ್ನು ಮಾಳ್ಪೆ । ನೀಬಲಗೈಯು ॥
ಪುಂಡರೀಕನೇತ್ರನೆನ್ನ । ಗಂಡನಾಗಿ । ದ್ದರೆ ನಿನ್ನ ।
ಮುಂಡೆಗೆ ರತ್ನದ ಮಕುಟ । ಕೊಂಡಿರಿಸು । ವೆ...
ದುಂಡ ಮಲ್ಲಿಗೆ ಸುವರ್ಣ । ಕೆಂಡ ಸಂಪಿ । ಗೆಯ ಮುಡಿಸಿ ।
ಮುಂಡಲಾರ್ಧ ದಿವಸ ಕೈ । ಕೊಂಡು ನಾಜಾ । ಗರವ ಮಾಳ್ಪೆ ॥

ಹೀಗೆ 'ಮಾಧವನಾಗಲಿ ಪತಿ ಎಂದಾದೇವಿಯ ಬೀಳುಕೊಂಡು' ಗೋಪಾಂಗನೆಯರು ಯಮುನೆಯಲ್ಲಿ ಮಿಂದು ತಣಿಯಲೆಂದು ನೀರಿಗಿಳಿಯುವ ಸಂಭ್ರಮವನ್ನು ಸುಬ್ಬನ ಮಾತುಗಳಲ್ಲಿ ಕೇಳಿರಿ:—

ಅಷ್ಟತಾಳ॥ — ಉಟ್ಟ ಸೀರೆಗಳ ಬಿಚ್ಚಿರಿಸಿ— ಅಳ ।
ವಟ್ಟ ಕುಪ್ಪಸದಿ ಚಿನ್ನಗಳ ಕಟ್ಟಿರಿಸಿ ।
ಕಟ್ಟಿರ್ದ ಮುಡಿಯ ಸಡಿಲಿಸಿ— ನೀರಿ ।

ಗೊಟ್ಟಾಗಿ ಇಳಿದೀಸಿದರು ಧಡ ಧಡಿಸಿ ॥
ಕಂಕಣಗಳು ಘಿಲಿರೆನುತ — ಗಂಧ ।
ಕುಂಕುಮ ಪರಿಮಳಂಗಳನು ತೊಳೆಯುತ ।
ಸೋಂಕಿದ ಕೆಸರನೊರಸುತ — ಹರಿ ।
ಣಾಂಕ ವದನೆಯರೊಬ್ಬೊಬ್ಬರೆಳೆಯುತ ॥
ಜಲಕ್ರೀಡೆಯೊಳಗಿದ್ದರೆಲ್ಲ — ತಂತ ।
ವ್ಮೊಳಗೊಬ್ಬರೊಬ್ಬರು ಮುಳುಗೇಳುತೆಲ್ಲ ।
ನಳಿನದೊಯ್ಯಾರವ ಪೋಲ್ವ — ಚೆಲ್ವ ।
ಲಲನೆಯರೆಲ್ಲ ನೋಡಿದ ಸಿರಿನಲ್ಲ ॥

... ...

ಹೀಗೆ ತರುಣಿಯರು ಜಲಕ್ರೀಡೆಯಲ್ಲಿ 'ಘಟಿಕಾ ಪ್ರಮಾಣ' ವ್ಮೈಮರಿತಿರುವುದನ್ನು ದೂರದಿಂದ ಕಂಡ ಗೋಪಾಲನು ಕಳ್ಳ ಹೆಜ್ಜೆಯಲ್ಲಿ ಬಂದು —

ಗೂಢದಿಂದುಟ್ಟಿರ್ದ ಸೀರೆಯ ।
ಮೋಡಿಯಿಂದಲೆ ತೆಗೆದು ನಲಿನಲಿ ।
ದಾಡಿ ತಡಹದ ಮರವನೇರಿದ ನಿಮಿಷ ಮಾತ್ರದಲಿ ॥

ಮರವನ್ನೇರಿದ ಸೀರೆಗಳ್ಳನನ್ನು ಕಂಡು ಗೋಪಾಂಗನೆಯರು ಕೂಗಿಕರೆದು ಮೊರೆಇಟ್ಟು ಪ್ರಾರ್ಥಿಸುತ್ತಾರೆ. ಶ್ರೀ ವಿಷ್ಣುವಿನ ದಶಾವತಾರ ಸ್ತುತಿ ರೂಪದಲ್ಲಿರುವ ಪದ್ಯವು ಹೀಗಿದೆ:—

ಅಷ್ಟತಾಳ॥ — ಕುಕ್ಕೂಕ್ಕೂ ಎಂದು । ಕೂಗಿಡೆ ಸತಿಯರು । ದಿಕ್ಕೆಲ್ಲ
ಕೇಳಿತು । ಕುಕ್ಕೂಕ್ಕೂ ।
ಅಕ್ಕೊ ಮತ್ತಿಕ್ಕೊ ಮರಕ್ಕೇರದಿರು ಬೊಮ್ಮ ರಕ್ಕಸನೈದನೆ
ಕುಕ್ಕೂಕ್ಕೂ ॥
ಕೊಲುವನು ದನುಜ ಸಾಯಲು ಬೇಡ ಮರದಿಂದ ।
ಇಳಿಯಯ್ಯ ಶ್ರೀ ಕೃಷ್ಣ ಕುಕ್ಕೂಕ್ಕೂ ॥
ಮೆಲುವನು ಭೇತಾಳ ಬ್ರಹ್ಮರಾಕ್ಷಸನಿಪ್ಪ ।
ಸ್ಥಳವದು ತಿಳಿಯಯ್ಯ ಕುಕ್ಕೂಕ್ಕೂ ।

ಸೀರೆಯನೊಯ್ವರೆ ಶ್ರೀಕೃಷ್ಣ ನಿನಗಿಂಥ ।
ಚೋರ ವಿದ್ಯೆಯದೇಕೊ ಕುಕ್ಕೂಕ್ಕೂ
ಸೋರೆಯ ಮೊಸರ್ಬೆಣ್ಣೆ ಸೂರೆಯ ಮಾಳ್ಪವಿ ।
ಚಾರವಿದಲ್ಲಯ್ಯ ಕುಕ್ಕೂಕ್ಕೂ ॥
ಅಂಬರಗಳನೊಯ್ವದುಚಿತವೆ ನಿನಗೆ ಪೀ ।
ತಾಂಬರ ಧಾರಿಯೆ ಕುಕ್ಕೂಕ್ಕೂ ।
ಶಂಬರ ವೈರಿಯ ಜನಕ ಈ ಬಗೆಯಲ್ಲಿ ।
ಡೊಂಬಿ ಏಳುವದಯ್ಯ? ಕುಕ್ಕೂಕ್ಕೂ ॥
ಮನೆಮನೆಗೈತಂದು ಕೆನೆಮೊಸರನೆ ತಿಂದು ।
ಜುಣುಗಾಡಿದಂತಲ್ಲ ಕುಕ್ಕೂಕ್ಕೂ ।
ಮನೆಯವರಿದ ಕೇಳಿದರೆ ನಿನ್ನನೆಳೆದೊಯ್ದು ।
ದಣಿಸಿ ದಂಡಿಸುವರು ಕುಕ್ಕೂಕ್ಕೂ ॥
ಮತ್ಸ್ಯ ಕೂರ್ಮ ವರಾಹ ನರಸಿಂಹನಾದ ಶ್ರೀ ।
ಚಿತ್ತಜನಯ್ಯನೆ ಕುಕ್ಕೂಕ್ಕೂ ॥
ಮತ್ತೆ ವಾಮನನಾದ ಕ್ಷತ್ರಿಯರನು ಕೊಂದ ।
ಉತ್ತಮ ರಾಮನೆ ಕುಕ್ಕೂಕ್ಕೂ ॥
ಹೊಡೆದಂಥ ಮಳೆಗಳ ದಿನ ಗೋವರ್ಧನವನ್ನು ।
ಕೊಡೆ ಮಾಡಿದವನಿಗೆ ಕುಕ್ಕೂಕ್ಕೂ
ಮಡದಿಯ ವ್ರತವನ್ನು ಕೆಡಿಸಿ ವಾಜಿಯನೇರಿ ।
ನಡೆದ ನಾರಾಯಣ ಕುಕ್ಕೂಕ್ಕೂ ॥
ವಸನಂಗಳನುಕದ್ದ ವಸುದೇವನಣುಗನೆ ।
ವಶವಾದೆವೈ ನಿನ್ನ ಕುಕ್ಕೂಕ್ಕೂ ।
ವಸುಧೆಯೊಳಗೆ ಕಣ್ವಪುರದ ಗೋಪಾಲನ ।
ಬಿಸರುಹ ಚರಣಕ್ಕೆ ಕುಕ್ಕೂಕ್ಕೂ ॥

ಶ್ರೀಕೃಷ್ಣ:— ಮರುಳುಗ । ಳಾದಿರೇನಿರೇ...ನೀ । ರೆಯನೀ್ವು ॥ ಪಲ್ಲ ॥

ಏಕತಾಳ॥— ಮರುಳುಗ । ಳಾದಿರೇನೆ । ಕೆರೆಯಲ್ಲಿ । ನಿಂತುಕೊಂಡು ।
ತಿರವಳಿ।ದವರಂತೆ । ಮೊರೆಯಿಟ್ಟು । ಮರುಗುವಿರಿ ॥
ಬ್ರಹ್ಮರ । ಕ್ಕಸ ತಿಂದ । ಡೆಮ್ಮವ।ರಿಗೆ ಕುಂದು ।
ಉಮ್ಮಳಿ । ಸುತ ನೀವು । ಸುಮ್ಮನೆ । ಕರೆವುದೇಕೆ ॥
ಸತ್ಯವು । ಳ್ಳವರೊಳ್ ನಿ । ಮಿತ್ಯ ವ । ಕೇಳಿಕೊಳ್ಳಿ ।
ಮತ್ತಾವು । ದಕ್ಕೂ ಈಗ । ಚಿತ್ತೈಸಿ । ಮನೆಗೆ ಬೇಗ ॥
ಕಾಣಲಿ । ಲ್ಲ ನಾನೆಂದು । ಆಣೆಯು । ಕೊಡುವೆ ನಿಮ್ಮ! ।
ಜಾಣೆಯು । ರೆನ್ನ ಕಳವ । ಕಾಣಿಸಿ । ಕೊಡಿರಿ ಗೆಲವ ॥
ಧರೆಯೊಳು । ಕಣ್ವಪುರದ । ಕರುಣಿ ಶ್ರೀ । ಕೃಷ್ಣರಾಯನ ।
ಬರಿದೆದೂ । ರುವುದೇಕೆ । ಮರುಳು ಹೆಮ್ಮ । ಕ್ಕಳಿರಜೋಕೆ !!!

ರಸವತ್ತಾದ ಈ ಸಂಭಾಷಣೆಯು ಇನ್ನೂ ಇಪ್ಪತ್ತು ಪದ್ಯಗಳಲ್ಲಿದೆ. ಕಡೆಗೆ 'ಬತ್ತಲೆ ನೀರ್ಗಿಳಿದ ಪ್ರಾಯಶ್ಚಿತ್ತವಾಗಿ ನೀವು ಸುರರ್ಗೆ ಭಕ್ತಿಯಿಂದ ನಮಿಸಿ'ದರೆ ವಸ್ತ್ರಗಳನ್ನು ಕೊಡುವೆ ಎಂದ ಮಾತಿಗೆ ಎಲ್ಲರೂ ದಡ ಹತ್ತಿ ಬಂದು ಹಾಗೆಯೆ ಮಾಡುತ್ತಾರೆ. ಆಗ ಇನ್ನೊಂದು ಯೋಚನೆ ಹೊಳೆಯಿತು ಕಳ್ಳ ಕೃಷ್ಣನಿಗೆ—ಒಬ್ಬಳ ಸೀರೆ ಇನ್ನೊಬ್ಬಳಿಗಾದರೆ? ಪ್ರಮಾದ! ಉಪಾಯವೇನು?— ಅವರನ್ನೆ ಕೇಳುವುದು:—

'ಧಾರಿಣಿಯೊಳು । ಕಣ್ವಪುರದ । ಶ್ರೀರಂಗ ಗೋ । ಪಾಲನೆಂದ ।
ತೋರಿಸಿ ಸೀ । ರೆಯ ಗುರುತ । ನಾರಿಯರೆ । ನಿಮ್ಮ ॥

ಎಲ್ಲರೂ ಬೇರೆಬೇರೆಯಾಗಿ ತಮ್ಮ ತಮ್ಮ ಸೀರೆಯ ರಂಗು, ಸೆರಗು, ಅಂಚು, ಕಂಬಿಗಳ ಗುರುತನ್ನು ಹೇಳುತ್ತಾರೆ. ಒಂದೆರಡು ಪದ್ಯಗಳನ್ನು ಓದುತ್ತೇನೆ: —

ಆದಿತಾಳ॥—ಹಳ್ಳಿಯವಳಲ್ಲ ನಾನು । ಹರ್ಷದಿಂದ ಉಟ್ಟಂಥದು ।
ಬೆಳ್ಳಿಯ ಕಂಬಿಯಸೀರೆ । ಲಾಲಿಸೋ ಬೇಗಪಾಲಿಸೊ ॥
ಅಚ್ಯುತಾನಂತಗೋವಿಂದ । ಅರಮನೆಯೊಳಗಿಂದ ।
ಮೆಚ್ಚಿಕೊಟ್ಟಂಥ ಸೀರೆಯು । ತೋರಯ್ಯ— ಕೈಯೊಳ್ ತಾರಯ್ಯ ॥

ಕೊನೆಗಂತು ಎಲ್ಲರಿಗೂ ಅವರವರ ಸೀರೆಗಳು ಸಿಕ್ಕಿದುವು. ಎಲ್ಲರೂ ಉಟ್ಟುಕೊಂಡು 'ಬಹಳ ಹೊತ್ತಾಯಿತು ಇಂದು.........ತಿಳಿದರೆ ಬೈಯು ವರೆಮ್ಮ ಹಿರಿಯರೂ ಮನೆಯಕಿರಿಯರೂ' ಎಂದು ಗೋಪಿಯರು ಅವಸರ ದಿಂದೋಡುವಾಗ—

'ಮರದ ಮೇಲಿಂ। ದಿಳಿದು ಕಣ್ವ। ಪುರದ ಸಿರಿಗೋ। ಪಾಲಕೃಷ್ಣ ॥
ನೆರೆದಗೊಲ್ಲ। ಹೆಂಗಳನೆಲ್ಲ। ನೋಡಿದ—ಒಡಗೂಡಿದ ॥

ಭರತವಾಕ್ಯ:

ವಾರ್ಧಿಕ॥ - ಹರಿಯು ಈತೆರದಿ ಯಮುನಾನದಿಯ ತೀರದೊಳು।
ತರುಣಿಯರನೊಡಗೂಡಿ ಸಂಗಡಲೆ ಗೋಕುಲಕೆ।
ತೆರಳಿನಡೆತಂದು ಸುಖದಿಂದಿರ್ದನೆಂಬಲ್ಲಿ ಸಂಧಿಸಂಪೂರ್ಣವಾಯ್ತು॥
ಅರಿತುಕೇಳುವ ಪೇಳ್ವ ಪುಣ್ಯವಂತರ ಸಕಲ।
ದುರಿತಮಂ ಪರಿಹರಿಸಿ ಕರುಣದಿಂ ಕಣ್ವಪುರ।
ವರದ ಶ್ರೀಗೋಪಾಲಕೃಷ್ಣ ರಾಧಾರಮಣ ಪಾಲಿಸುವನನುಗಾಲವು॥

ಓಂ ಸ್ವಸ್ತಿ.

ತಾ. 31-5-1961. ಕುಕ್ಕಿಲ ಕೃಷ್ಣ ಭಟ್ಟ.

ಪಾರ್ತಿಸುಬ್ಬನ ರಾಮಾಯಣ ರಚನೆಯ ಕುರಿತು ಗಮನಿಸತಕ್ಕ ಇನ್ನೂ ಎರಡು ಮಾತು.

ಕುಶಲವರ ಕಾಳಗದ ಆರಂಭಕ್ಕೆ ಪೂರ್ವಕಾಂಡ ರಾಮಾಯಣ ಕಥೆಯನ್ನು ಸಂಕ್ಷೇಪವಾಗಿ ಸೂಚಿಸುವ ಪೀಠಿಕಾ ಪದ್ಯದಲ್ಲಿ 'ಹತ್ತು ಶಿರದನ ಪಡೆಯ ಸಹಿತಲೆ ಕತ್ತರಿಸಿದನು ಕುಂಭಕರ್ಣನ ಮತ್ತೆ ಜಾನಕಿ ಸಹಿತ ಪುರವಾಳುತ್ತಲಿರ್ದ' ಎಂದಷ್ಟೆ ಹೇಳಿರುವುದರಿಂದ ಪಾರ್ತಿಸುಬ್ಬನು ರಾವಣ ವಧೆಯನ್ನು ರಚಿಸಲಿಲ್ಲವೆಂದಿರುವ ಹೇಳಿಕೆಯೂ ಸರಿಯಾದುದೆಂದು ಅನುಮಾನಿಸಬಹುದಾಗಿದೆ. ಕಥಕಳಿ ರಾಮಾಯಣದಲ್ಲಿಯೂ ರಾವಣ ವಧೆಯ ಕುರಿತು ಪದ್ಯಗಳಿಲ್ಲದಿರುವುದು ಈ ಅನುಮಾನವನ್ನು ದೃಢಪಡಿಸುತ್ತದೆ.

ಪಾರ್ತಿಸುಬ್ಬನ ರಾಮಾಯಣ ಪ್ರಸಂಗಗಳ ಕೇವಲ ಕೃರ್ತತ್ವ ನಿರ್ಣಯದ ದೃಷ್ಟಿಯಿಂದ ಮುಖ್ಯ ಕಥಾವಸ್ತು ನಿರೂಪಣೆಯಲ್ಲಿಯೂ ಪದ್ಯ ರಚನೆಯಲ್ಲಿಯೂ ಕಥಕಳಿ ರಾಮಾಯಣವನ್ನು ಯಥಾಕೃತಿಯಾಗಿ ಅನುಕರಿಸಿದ ಉದಾಹರಣೆಯನ್ನು ಮಾತ್ರ ನಾನೀಗ ಹೇಳಿರುವುದರಿಂದ ಆತನು ಸ್ವತಂತ್ರ ಪ್ರತಿಭಾಶೂನ್ಯನೆಂದಾಗಲಿ ಕೇವಲ ಅನುಕರಣಶೀಲನೆಂದಾಗಲಿ ಇತರ ರಾಮಾಯಣ ಗ್ರಂಥಗಳ ಪರಿಚಯವಿಲ್ಲದವನೆಂದಾಗಲಿ ಯಾರೂ ದಯವಿಟ್ಟು ಅನ್ಯಥಾ ಭಾವಿಸಬಾರದು. ಕಥಕಳಿಯಲ್ಲಿಲ್ಲದಿರುವ ಕೆಲವು ಕಥಾಸಂದರ್ಭಗಳನ್ನೂ ಸುಬ್ಬನು ಅಳವಡಿಸಿಕೊಂಡದ್ದಿದೆ. ವಾಲ್ಮೀಕಿ ಅಥವಾ ತೊರವೆ ರಾಮಾಯಣವನ್ನು ಅನುಸರಿಸಿದ ಭಾಗವೂ ಇಲ್ಲವೆಂದಿಲ್ಲ. ಸೇತುಬಂಧನ ಮತ್ತು ಅಂಗದ ಸಂಧಾನವು ಕಥಕಳಿಯಲ್ಲಿ ನಾಲ್ಕೇ ಪದ್ಯಗಳಲ್ಲಿ ಅತ್ಯಂತ ಸಂಕ್ಷಿಪ್ತವಾಗಿರುವುದನ್ನು ವಾಚಿಕಾಭಿನಯ ಪ್ರಧಾನವಾದ ನಮ್ಮ ಯಕ್ಷಗಾನಕ್ಕೆ ಉಚಿತವಾಗುವಂತೆ ಸುಬ್ಬನು ಸ್ವತಂತ್ರವಾಗಿ ವಿಸ್ತರಿಸಿದ್ದಾನೆ. ಅಲ್ಲಿಯ ಕೆಲವು ವರ್ಣನಾ ಭಾಗಗಳು ತೊರವೆ ರಾಮಾಯಣದಿಂದ ಪ್ರಭಾವಿತವಾದಂತೆಯೂ ಇವೆ. ಪಂಚವಟಿಯಲ್ಲಿ ಮಾಯಾಶೂರ್ಪನಖಿಯ ಪ್ರಕರಣ ರಾವಣಮಂಡೋದರಿಯರ ಸಂವಾದ ಉಂಗುರಸಂಧಿಯ

ರಸವತ್ತಾದ ಸಂಭಾಷಣೆಗಳು ಇತ್ಯಾದಿ ಸಂದರ್ಭಗಳ ಅನೇಕ ಪದ್ಯಗಳು ಪಾರ್ತಿಸುಬ್ಬನ ಸ್ವತಂತ್ರ ಪ್ರತಿಭೆಗೆ ಸಾಕ್ಷ್ಯಗಳಾಗಿವೆ. ಪಂಚವಟಿಯ ಮಾಯಾಮೃಗ ಪ್ರಕರಣದಲ್ಲಿ ಸೀತೆಯ 'ಕಠಿಣತರವಾಕ್ಯ'ದಿಂದಲಾಗಿ ರಾಮನನ್ನರಸಲು ಹೊರಟ ಲಕ್ಷ್ಮಣನು 'ಭೂಮಿಯೊಳಗೇಳಾಜ್ಞೆಯಂ ಬರೆದಿದರ ಮೀರಿ ಅಡಿಯಿಡದಿರು' ಎಂದು ಹೇಳಿದುದಾಗಿ ಸುಬ್ಬನು ವರ್ಣಿಸಿರುವ ಸಂದರ್ಭವು ಕಥಕಳಿಯಲ್ಲಿರುವಂಥದಲ್ಲ. ವಾಲ್ಮೀಕಿ ಅಥವಾ ಕನ್ನಡ ರಾಮಾಯಣಗಳಲ್ಲಿಯೂ ಈ ಪ್ರಸ್ತಾವವಿಲ್ಲ; 'ಮಹಾನಾಟಕ'ವೆಂದು ಖ್ಯಾತಿಯುಳ್ಳ ಆಂಜನೇಯ ಕೃತವಾದ 'ಹನೂಮನ್ನಾಟಕ'ದಲ್ಲಿ ಉಲ್ಲಿಖಿತವಾಗಿರುವ ಈ ಅಂಶವನ್ನು ಪಾರ್ತಿಸುಬ್ಬನು ಸಂಗ್ರಹಿಸಿಕೊಂಡಿದ್ದಾನೆ. ಕಪಟ ಸನ್ಯಾಸಿಗೆ ಭಿಕ್ಷೆಯನ್ನು ನೀಡುವಾಗ ಸೀತೆಯು ಲಕ್ಷ್ಮಣನ ಗೆರೆಯನ್ನು ಮೀರಿದಂತೆ ಸಹ ವರ್ಣಿಸಿರುವ 'ಮಹಾನಾಟಕ'ದ ಆ ಶ್ಲೋಕಗಳು ಹೀಗಿವೆ:—

'ರಾಮಂ ಕಾಮಾಭಿರಾಮಂ ನಿಶಿತಶರಧನುರ್ಧಾರಿಣಂ ಲಕ್ಷ್ಮಣೇನ।
ಕ್ಷಿಪ್ರಂ ತದ್ರಕ್ಷಣಾಯೋಲ್ಲಿಖಿತ ತಟಭುವಾ ಸೋಪ್ಯಗಾತ್ತದ್ವಧಾಯ।
— — — — — — — — — —
ಸನ್ಯಾಹರದ್ಧ ಮರ್ಿಣಿ ದೇಹಿ ಭಿಕ್ಷಾಮುಲಂಘಯಲ್ಲಕ್ಷ್ಮಣ
ಲಕ್ಷ್ಮಲೇಖಾಂ ॥'

ಹೀಗೆ ಪಾರ್ತಿಸುಬ್ಬನು ಕಥಾಸಂದರ್ಭದಲ್ಲಿ ಮತ್ತು ವರ್ಣನಾ ಸಂದರ್ಭದಲ್ಲಿ ತನಗೆ ಉಚಿತವೆಂದು ಕಂಡ ಸಾರವತ್ತಾದ ಅಂಶಗಳನ್ನು ಅಲ್ಲಲ್ಲಿಂದ ಆಯ್ದುಕೊಂಡು 'ಏಕಸ್ಥಸೌಂದರ್ಯದಿದೃಕ್ಷಯೇವ' ಎಂಬಂತೆ ತನ್ನ ರಾಮಾಯಣ ಕೃತಿ ಎಂಬ ತಿಲೋತ್ತಮೆಯನ್ನು ನಿರ್ಮಿಸಿದ್ದಾನೆ ಎಂದೇ ತಿಳಿಯಬೇಕು.

ತಪ್ಪೊಪ್ಪು.

ಪುಟ	ಪಂಕ್ತಿ	ತಪ್ಪು	ಒಪ್ಪು
5	14	ಸತ್ಯಕೆ	ಸತ್ಯಕ್ಕೆ
6	14	ಪ್ರಮಾಣವಂತ್ರ್ಯದೃಷ್ಟಾನಿ	ಪ್ರಮಾಣವಂತ್ಯದೃಷ್ಟಾ
7	2	ಯದಾಸ್ತು	ಯಾದಾಸ್ತು
9	19	ವ್ಯೊತ	ವ್ಯೊತ್
21	4	ಎನ್ನುದಿನ್ನು	ಎಂದಿನಿನ್ನು
21	11	ಮುಂದೆ ಕೇಳು	ಮುಂದೆ ಹೇಳು
26	24	ವಾವನ ರೂಪ	ವಾಮನ ರೂಪ
27	1	ಕರ್ತ್ಯತ್ವಕ್ಕೆ	ಕರ್ತೃತ್ವಕ್ಕೆ
,,	4	ಕರ್ತ್ಯಕ್ಕೂ	ಕರ್ತೃತ್ವಕ್ಕೂ
27	16	ಅಷ್ಟೋತರಶತ	ಅಷ್ಟೋತ್ತರಶತ
28	22	ಇಡೀ ಕೃಷ್ಣ ಚರಿತೆಯ	ಇದೀ ಕೃಷ್ಣ ಚರಿತೆಯ
40	14	ಒಂದು ಬಾಗಿಲ	ಬಂದು ಬಾಗಿಲ
44	14	ತಿಂಬುನೋಡಿದ	ತಿಂಬುತೋಡಿದ

ಕೊನೆಗಂತು ಎಲ್ಲರಿಗೂ ಅವರವರ ಸೀರೆಗಳು ಸಿಕ್ಕಿದುವು. ಎಲ್ಲರೂ ಉಟ್ಟುಕೊಂಡು 'ಬಹಳ ಹೊತ್ತಾಯಿತು ಇಂದು.........ತಿಳಿದರೆ ಬೈಯು ವರೆಮ್ಮ ಹಿರಿಯರೂ ಮನೆಯಕಿರಿಯರೂ' ಎಂದು ಗೋಪಿಯರು ಅವಸರ ದಿಂದೋಡುವಾಗ—

'ಮರದ ಮೇಲಿಂ । ದಿಳಿದು ಕಣ್ವ । ಪುರದ ಸಿರಿಗೋ । ಪಾಲಕೃಷ್ಣ ॥
ನೆರೆದಗೊಲ್ಲ । ಹೆಂಗಳನೆಲ್ಲ । ನೋಡಿದ—ಒಡಗೂಡಿದ ॥

ಭರತವಾಕ್ಯ:

ವಾರ್ಧಿಕ॥ - ಹರಿಯು ಈತೆರದಿ ಯಮುನಾನದಿಯ ತೀರದೊಳು ।
ತರುಣಿಯರನೊಡಗೂಡಿ ಸಂಗಡಲೆ ಗೋಕುಲಕೆ ।
ತೆರಳಿನಡೆತಂದು ಸುಖದಿಂದಿರ್ದನೆಂಬಲ್ಲಿ ಸಂಧಿಸಂಪೂರ್ಣವಾಯ್ತು॥
ಅರಿತುಕೇಳುವ ಪೇಳ್ವ ಪುಣ್ಯವಂತರ ಸಕಲ ।
ದುರಿತಮಂ ಪರಿಹರಿಸಿ ಕರುಣದಿಂ ಕಣ್ವಪುರ ।
ವರದ ಶ್ರೀಗೋಪಾಲಕೃಷ್ಣ ರಾಧಾರಮಣ ಪಾಲಿಸುವನನುಗಾಲವು ॥

ಓಂ ಸ್ವಸ್ತಿ.

ತಾ. 31-5-1961. ಕುಕ್ಕಿಲ ಕೃಷ್ಣ ಭಟ್ಟ.

ಪಾರ್ತಿಸುಬ್ಬನ ರಾಮಾಯಣ ರಚನೆಯ ಕುರಿತು ಗಮನಿಸತಕ್ಕ ಇನ್ನೂ ಎರಡು ಮಾತು.

ಕುಶಲವರ ಕಾಳಗದ ಆರಂಭಕ್ಕೆ ಪೂರ್ವಕಾಂಡ ರಾಮಾಯಣ ಕಥೆಯನ್ನು ಸಂಕ್ಷೇಪವಾಗಿ ಸೂಚಿಸುವ ಪೀಠಿಕಾ ಪದ್ಯದಲ್ಲಿ 'ಹತ್ತು ಶಿರದನ ಪಡೆಯ ಸಹಿತಲೆ ಕತ್ತರಿಸಿದನು ಕುಂಭಕರ್ಣನ ಮತ್ತೆ ಜಾನಕಿ ಸಹಿತ ಪುರವಾಳುತ್ತಲಿರ್ದ' ಎಂದಷ್ಟೆ ಹೇಳಿರುವುದರಿಂದ ಪಾರ್ತಿಸುಬ್ಬನು ರಾವಣ ವಧೆಯನ್ನು ರಚಿಸಲಿಲ್ಲವೆಂದಿರುವ ಹೇಳಿಕೆಯೂ ಸರಿಯಾದುದೆಂದು ಅನುಮಾನಿಸಬಹುದಾಗಿದೆ. ಕಥಕಳಿ ರಾಮಾಯಣದಲ್ಲಿಯೂ ರಾವಣ ವಧೆಯ ಕುರಿತು ಪದ್ಯಗಳಿಲ್ಲದಿರುವುದು ಈ ಅನುಮಾನವನ್ನು ದೃಢಪಡಿಸುತ್ತದೆ.

ಪಾರ್ತಿಸುಬ್ಬನ ರಾಮಾಯಣ ಪ್ರಸಂಗಗಳ ಕೇವಲ ಕೃರ್ತತ್ವ ನಿರ್ಣಯದ ದೃಷ್ಟಿಯಿಂದ ಮುಖ್ಯ ಕಥಾವಸ್ತು ನಿರೂಪಣೆಯಲ್ಲಿಯೂ ಪದ್ಯ ರಚನೆಯಲ್ಲಿಯೂ ಕಥಕಳಿ ರಾಮಾಯಣವನ್ನು ಯಥಾಕೃತಿಯಾಗಿ ಅನುಕರಿಸಿದ ಉದಾಹರಣೆಯನ್ನು ಮಾತ್ರ ನಾನೀಗ ಹೇಳಿರುವುದರಿಂದ ಆತನು ಸ್ವತಂತ್ರ ಪ್ರತಿಭಾಶೂನ್ಯನೆಂದಾಗಲಿ ಕೇವಲ ಅನುಕರಣಶೀಲನೆಂದಾಗಲಿ ಇತರ ರಾಮಾಯಣ ಗ್ರಂಥಗಳ ಪರಿಚಯವಿಲ್ಲದವನೆಂದಾಗಲಿ ಯಾರೂ ದಯವಿಟ್ಟು ಅನ್ಯಥಾ ಭಾವಿಸಬಾರದು. ಕಥಕಳಿಯಲ್ಲಿಲ್ಲದಿರುವ ಕೆಲವು ಕಥಾಸಂದರ್ಭಗಳನ್ನೂ ಸುಬ್ಬನು ಅಳವಡಿಸಿಕೊಂಡದ್ದಿದೆ. ವಾಲ್ಮೀಕಿ ಅಥವಾ ತೊರವೆ ರಾಮಾಯಣವನ್ನು ಅನುಸರಿಸಿದ ಭಾಗವೂ ಇಲ್ಲವೆಂದಿಲ್ಲ. ಸೇತು ಬಂಧನ ಮತ್ತು ಅಂಗದ ಸಂಧಾನವು ಕಥಕಳಿಯಲ್ಲಿ ನಾಲ್ಕೇ ಪದ್ಯಗಳಲ್ಲಿ ಅತ್ಯಂತ ಸಂಕ್ಷಿಪ್ತವಾಗಿರುವುದನ್ನು ವಾಚಿಕಾಭಿನಯ ಪ್ರಧಾನವಾದ ನಮ್ಮ ಯಕ್ಷಗಾನಕ್ಕೆ ಉಚಿತವಾಗುವಂತೆ ಸುಬ್ಬನು ಸ್ವತಂತ್ರವಾಗಿ ವಿಸ್ತರಿಸಿದ್ದಾನೆ. ಅಲ್ಲಿಯ ಕೆಲವು ವರ್ಣನಾ ಭಾಗಗಳು ತೊರವೆ ರಾಮಾಯಣದಿಂದ ಪ್ರಭಾವಿತವಾದಂತೆಯೂ ಇವೆ. ಪಂಚವಟಿಯಲ್ಲಿ ಮಾಯಾಶೂರ್ಪನಖಿಯ ಪ್ರಕರಣ ರಾವಣಮಂಡೋದರಿಯರ ಸಂವಾದ ಉಂಗುರಸಂಧಿಯ

ರಸವತ್ತಾದ ಸಂಭಾಷಣೆಗಳು ಇತ್ಯಾದಿ ಸಂದರ್ಭಗಳ ಅನೇಕ ಪದ್ಯಗಳು ಪಾರ್ತಿಸುಬ್ಬನ ಸ್ವತಂತ್ರ ಪ್ರತಿಭೆಗೆ ಸಾಕ್ಷ್ಯಗಳಾಗಿವೆ. ಪಂಚವಟಿಯ ಮಾಯಾಮೃಗ ಪ್ರಕರಣದಲ್ಲಿ ಸೀತೆಯ 'ಕಠಿಣತರವಾಕ್ಯ'ದಿಂದಲಾಗಿ ರಾಮನನ್ನರಸಲು ಹೊರಟ ಲಕ್ಷ್ಮಣನು 'ಭೂಮಿಯೊಳಗೇಳಾಜ್ಞೆಯಂ ಬರೆದಿದರ ಮೀರಿ ಅಡಿಯಿಡದಿರು' ಎಂದು ಹೇಳಿದುದಾಗಿ ಸುಬ್ಬನು ವರ್ಣಿಸಿರುವ ಸಂದರ್ಭವು ಕಥಕಳಿಯಲ್ಲಿರುವಂಥದಲ್ಲ. ವಾಲ್ಮೀಕಿ ಅಥವಾ ಕನ್ನಡ ರಾಮಾಯಣಗಳಲ್ಲಿಯೂ ಈ ಪ್ರಸ್ತಾವವಿಲ್ಲ; 'ಮಹಾನಾಟಕ'ವೆಂದು ಖ್ಯಾತಿಯುಳ್ಳ ಆಂಜನೇಯ ಕೃತವಾದ 'ಹನೂಮನ್ನಾಟಕ'ದಲ್ಲಿ ಉಲ್ಲಿಖಿತವಾಗಿರುವ ಈ ಅಂಶವನ್ನು ಪಾರ್ತಿಸುಬ್ಬನು ಸಂಗ್ರಹಿಸಿಕೊಂಡಿದ್ದಾನೆ. ಕಪಟ ಸನ್ಯಾಸಿಗೆ ಭಿಕ್ಷೆಯನ್ನು ನೀಡುವಾಗ ಸೀತೆಯು ಲಕ್ಷ್ಮಣನ ಗೆರೆಯನ್ನು ಮೀರಿದಂತೆ ಸಹ ವರ್ಣಿಸಿರುವ 'ಮಹಾನಾಟಕ'ದ ಆ ಶ್ಲೋಕಗಳು ಹೀಗಿವೆ:—

> 'ರಾಮಂ ಕಾಮಾಭಿರಾಮಂ ನಿಶಿತಶರಧನುರ್ಧಾರಿಣಂ ಲಕ್ಷ್ಮಣೇನ।
> ಕ್ಷಿಪ್ರಂತದ್ರಕ್ಷಣಾಯೋಲ್ಲಿಖಿತ ತಟಭುವಾ ಸೋಽಪ್ಯಗಾತ್ತದ್ವಧಾಯ।
> — — — — — — — — — —
> ಸವ್ಯಾಹರದ್ಧರ್ಮಿಣಿ ದೇಹಿ ಭಿಕ್ಷಾಮುಲಂಘಯಲ್ಲಕ್ಷ್ಮಣ
> ಲಕ್ಷ್ಮಲೇಖಾಂ ॥'

ಹೀಗೆ ಪಾರ್ತಿಸುಬ್ಬನು ಕಥಾಸಂದರ್ಭದಲ್ಲಿ ಮತ್ತು ವರ್ಣನಾ ಸಂದರ್ಭದಲ್ಲಿ ತನಗೆ ಉಚಿತವೆಂದು ಕಂಡ ಸಾರವತ್ತಾದ ಅಂಶಗಳನ್ನು ಅಲ್ಲಲ್ಲಿಂದ ಆಯ್ದುಕೊಂಡು 'ಏಕಸ್ಥ ಸೌಂದರ್ಯದಿದೃಕ್ಷಯೇವ' ಎಂಬಂತೆ ತನ್ನ ರಾಮಾಯಣ ಕೃತಿ ಎಂಬ ತಿಲೋತ್ತಮೆಯನ್ನು ನಿರ್ಮಿಸಿದ್ದಾನೆ ಎಂದೇ ತಿಳಿಯಬೇಕು.

ತಪ್ಪೊಪ್ಪು.

ಪುಟ	ಪಂಕ್ತಿ	ತಪ್ಪು	ಒಪ್ಪು
5	14	ಸತ್ಯಕೆ	ಸತ್ಯಕ್ಕೆ
6	14	ಪ್ರಮಾಣವಂತ್ರ್ಯದೃಷ್ಟಾನಿ	ಪ್ರಮಾಣವಂತ್ಯದೃ
7	2	ಯದಾಸ್ತು	ಯಾದಾಸ್ತು
9	19	ವ್ಯೊತ	ವ್ಯೊತಾ
21	4	ಎನ್ನುದಿನ್ನು	ಎಂದಿನಿನ್ನು
21	11	ಮುಂದೆ ಕೇಳು	ಮುಂದೆ ಹೇಳು
26	24	ವಾವನ ರೂಪ	ವಾಮನ ರೂಪ
27	1	ಕರ್ತ್ಯತ್ವಕ್ಕೆ	ಕರ್ತೃತ್ವಕ್ಕೆ
,,	4	ಕರ್ತ್ಯಕ್ಕೊ	ಕರ್ತೃತ್ವಕ್ಕೊ
27	16	ಅಷ್ಟೋತರಶತ	ಅಷ್ಟೋತ್ತರಶತ
28	22	ಇಡೀ ಕೃಷ್ಣ ಚರಿತೆಯ	ಇದೀ ಕೃಷ್ಣ ಚರಿತೆಂ
40	14	ಒಂದು ಬಾಗಿಲ	ಬಂದು ಬಾಗಿಲ
44	14	ತಿಂಬುನೋಡಿದ	ತಿಂಬುತೋಡಿದ